ಉಪನ್ಯಾಸ ಗ್ರಂಥಮಾಲೆ

೧೦

ಮೂಢ ನಂಬಿಕೆಗಳು

ಪ್ರೊ. ಎಲ್. ಆರ್. ಹೆಗಡೆ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೯೬೭

ಉಪನ್ಯಾಸ ಗ್ರಂಥಮಾಲೆಯ ಪುಸ್ತಕೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಭವಭೂತಿ (ದ್ವಿತೀಯ ಆವೃತ್ತಿ) —ಕೆ. ಕೃಷ್ಣಮೂರ್ತಿ
೨. ಮನೋರೋಗಗಳು (ದ್ವಿತೀಯ ಮುದ್ರಣ) —ಎನ್. ಆರ್. ಕುಲಕರ್ಣಿ
೩. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ಒಕ್ಕಲುತನ —ಎನ್. ಪಿ. ಪಾಟೀಲ
೪. ಗಾದೆಗಳು (ತೃತೀಯ ಮುದ್ರಣ) —ಎ. ಕೆ. ರಾಮಾನುಜನ್
೫. ಭಾರತದಲ್ಲಿ ಜಾತಿಪದ್ಧತಿ (ದ್ವಿ. ಮುದ್ರಣ) —ವಿಕ್ಟರ ಎಸ್. ಡಿಸೋಜಾ
೬. ಕೀಟಕ ಪಿಡುಗುಗಳ ಸಮೀಕ್ಷಣೆ (,,) —ಎಸ್. ಎಸ್. ಕಟಗಿಹಳ್ಳಿಮಠ
೭. ರಾಜಕೀಯ ಪಕ್ಷಗಳು (ದ್ವಿ. ಮು) — ಎನ್. ರಾಜಗೋಪಾಲರಾವ
೮. ಸ್ವಾದಿ ಅರಸುಮನೆತನ (,,) — ಸ. ಸ. ಮಾಳವಾಡ
೯. ಮಕ್ಕಳ ಶಿಕ್ಷಣ (ತೃತೀಯ ಮುದ್ರಣ) —ಡಿ. ಎಸ್. ಕರ್ಕಿ
೧೦. ಮೂಢ ನಂಬಿಕೆಗಳು (,,) —ಎಲ್. ಆರ್. ಹೆಗಡೆ
೧೧. ಸಂಸ್ಕೃತ ಕವಯಿತ್ರಿಯರು (ದ್ವಿ. ಮು) —ಕೆ. ಟಿ. ಪಾಂಡುರಂಗಿ
೧೨. ನಿತ್ಯ ಜೀವನದಲ್ಲಿ ರಸಾಯನಶಾಸ್ತ್ರ (,,) —ಬಿ. ವಿರೂಪಾಕ್ಷಪ್ಪ
೧೩. ಸಾರ್ವಜನಿಕ ಆಡಳಿತ (,,) —ಜಿ. ಎಸ್. ಹಾಲಪ್ಪ
೧೪. ವಿಚಾರವಾದ (,,) —ಗೌರೀಶ ಕಾಯ್ಕಿಣಿ
೧೫. ಮಹಾಕವಿ ಮಿಲ್ಟನ್ (,,) —ಜಿ. ಎಸ್. ಆಮೂರ
೧೬. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ.
೧೭. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ (ದ್ವಿ. ಮು) —ಬಿ. ಎಚ್. ಶ್ರೀಧರ
೧೮. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ —ಪಿ. ಎಮ್. ಉಮಾಕಾಂತಶಾಸ್ತ್ರಿ
೧೯. ಸೌರವ್ಯೂಹ —ಸಿ. ಎನ್. ಶ್ರೀನಿವಾಸ ಅಯ್ಯಂಗಾರ
೨೦. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ —ಸಿ. ವ್ಹಿ. ರಂಗಸ್ವಾಮಿ

ಮೂಢನಂಬಿಕೆಗಳು

ಉಪನ್ಯಾಸ ಗ್ರಂಥಮಾಲೆ

೧೦

ಮೂಢನಂಬಿಕೆಗಳು

ಪ್ರೊ. ಎಲ್. ಆರ್. ಹೆಗಡೆ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೬೨

ಪ್ರಕಾಶಕರು :
ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.,
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ, ೧೯೫೭ ೨೦೦೦ ಪ್ರತಿಗಳು
ಪರಿಷ್ಕೃತ ದ್ವಿತೀಯ ಮುದ್ರಣ, ೧೯೬೩ ೨೦೦೦ ಪ್ರತಿಗಳು
ತೃತೀಯ ಮುದ್ರಣ, ೧೯೬೭ ೨೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು :
ಬಿ. ಎನ್. ಹುದ್ದಾರ
ಭಾರತ ಮುದ್ರಣಾಲಯ, ಧಾರವಾಡ

ಅನುಕ್ರಮಣಿಕೆ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಗಳ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪ- ನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಹೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆ ಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿ ಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು

ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶ ವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸ ಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರು ಗಳಲ್ಲಿ ಈ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವ ವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜ ವಾಗಿಯೂ ಸಂತೋಷದ ಸಂಗತಿಯಾಗಿದೆ.

ಉಪನ್ಯಾಸಗಳನ್ನು ಕೊಡಿಸಿದಷ್ಟಕ್ಕೆ ತೃಪ್ತಿಗೊಳ್ಳದೆ ಇವು ಗಳಲ್ಲಿ ಕೆಲವನ್ನಾದರೂ ಗ್ರಂಥರೂಪದಲ್ಲಿ ಬರೆಯಿಸಿ, ಸುಲಭ ವಾದ ಬೆಲೆಗೆ ಪ್ರಕಟಿಸಿ ಕನ್ನಡ ಜನದಲ್ಲೆಲ್ಲ ಹರಡಬೇಕೆಂಬ ಯೋಜನೆ ಈಗ ಹತ್ತು ವರ್ಷಗಳ ಪೂರ್ವದಲ್ಲಿಯೇ ಈ 'ಉಪನ್ಯಾಸ ಗ್ರಂಥಮಾಲೆ'ಯು ರೂಪದಲ್ಲಿ ಮೂರ್ತ ಗೊಂಡು ಮುನ್ನಡೆದಿದೆ. ಈ ಮಾಲೆಯಲ್ಲಿ ಇದುವರೆಗೆ ಬೇರೆ ಬೇರೆ ವಿಷಯಗಳನ್ನು ಕುರಿತು ೬೦ ಪುಸ್ತಕಗಳು ಪ್ರಕಟ ವಾಗಿವೆ. ಅಲ್ಪಾವಧಿಯಲ್ಲಿಯೇ ಈ ಪುಸ್ತಕಗಳ ಸಾವಿರಾರು ಪ್ರತಿಗಳು ಮಾರಾಟಗೊಂಡಿವೆ. ಕೆಲವು ಪುಸ್ತಕಗಳು ಮೂರನೆಯ ಆವೃತ್ತಿಯನ್ನೂ ಕಾಣುತ್ತಿರುವದು ಮಾಲೆಯು ಉಪಯುಕ್ತತೆಗೂ, ಜನಪ್ರಿಯತೆಗೂ ಸಾಕ್ಷಿಯಾಗಿದೆ.

ನಮ್ಮ ಪ್ರಾರ್ಥನೆಗೆ ಮನ್ನಣೆಕೊಟ್ಟು, ಉಪನ್ಯಾಸಕರು ಪುಸ್ತಕಗಳನ್ನು ಬರೆದುಕೊಡುತ್ತಿರುವದು ಶ್ಲಾಘ್ಯವಾದ ವಿಷಯ. ಇದಕ್ಕಾಗಿ ಈ ಲೇಖಕ ಮಹಾಶಯರಿಗೆ ವಿಶ್ವವಿದ್ಯಾಲಯದ

ವಂದನೆಗಳನ್ನು ಸಂತೋಷದಿಂದ ಸಲ್ಲಿಸುತ್ತೇನೆ. ವಿಶ್ವ-ವಿದ್ಯಾಲಯದ ಧನಸಹಾಯ ಆಯೋಗದವರು ನಮ್ಮ ಈ ಯೋಜನೆಯನ್ನು ಮೆಚ್ಚಿಕೊಂಡು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ಅರ್ಧದಷ್ಟು ಧನಸಹಾಯ-ವೀಯುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆ-ಗಳನ್ನು ಸೂಚಿಸುತ್ತದೆ.

ಈ ಕಿರುಹೊತ್ತಿಗೆಗಳ ಪ್ರಸಾರ ನೂರ್ಮಡಿಗೊಂಡು, ತನ್ಮೂಲಕ ನಮ್ಮ ಜನತೆಯ ಜ್ಞಾನಾಸಕ್ತಿ ವೃದ್ಧಿಗೊಳ್ಳಲೆಂದು ಹಾರೈಸುತ್ತೇನೆ.

ಡಿ. ಸಿ. ಪಾವಟೆ

ಧಾರವಾಡ — ಉಪಕುಲಪತಿ

೩೩-೪-೧೯೬೨ — ಕರ್ನಾಟಕ ವಿಶ್ವವಿದ್ಯಾಲಯ

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸಮಾಲೆಯ ಪುಸ್ತಕಗಳು ತಮ್ಮ ವೈಶಿಷ್ಟ್ಯಗಳಿಂದ ಜನಮನ್ನಣೆಯನ್ನು ಗಳಿಸುತ್ತಿರುವುದರ ಸ್ಪಷ್ಟನಿದರ್ಶನ "ಮೂಢನಂಬಿಕೆಗಳು" ಗ್ರಂಥದ ಮೂರನೆಯ ಮುದ್ರಣ. ಜನತೆಗೆ ವ್ಯವಸಾಯೋಪಯುಕ್ತವಾದ ಸಾಹಿತ್ಯ ಸಾಮಗ್ರಿಯನ್ನೂ ವ್ಯವಹಾರೋಪಯುಕ್ತವಾದ ಶಾಸ್ತ್ರ ಸಾಹಿತ್ಯಗಳನ್ನೂ ಬೌದ್ಧಿಕ ಆಹಾರವನ್ನೂ ಕಂಟ್ರೋಲ್ ದರದಲ್ಲಿ ಪೂರೈಸುವ ನಮ್ಮ ವಿಶ್ವವಿದ್ಯಾಲಯಗಳ ಉಪಕ್ರಮಗಳನ್ನು ನಾಡಿನ ಜನತೆ ಹೆಚ್ಚು ಹೆಚ್ಚಾಗಿ ಸ್ವಾಗತಿಸುತ್ತಿರುವುದು ಪ್ರಗತಿಯ ಒಂದು ಆಶಾಕಿರಣ.

ಈ ಗ್ರಂಥವು ಎರಡನೆಯ ಆವೃತ್ತಿಯಲ್ಲಿ ಸ್ವಲ್ಪ ವಿಸ್ತೃತವಾಗಿದ್ದರೂ ಕುಂದಗೋಳದಲ್ಲಿ ಮಾಡಿದ ಉಪನ್ಯಾಸದ ಮೂಲ ಸ್ವರೂಪ ಇಲ್ಲಿಯೂ ಉಳಿದುಕೊಂಡಿದೆ. ಈಗ ಮೂರನೆಯ ಆವೃತ್ತಿಯಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಯೇನಿಲ್ಲ.

ಈ ಗ್ರಂಥದ ಕುರಿತು ಆದರಾಭಿಮಾನವುಳ್ಳ ಸಮಸ್ತ ಓದುಗರಿಗೂ, ವಿಶ್ವವಿದ್ಯಾಲಯದವರಿಗೂ ಲೇಖಕನು ಕೃತಜ್ಞತೆಯನ್ನು ಸಮರ್ಪಿಸುತ್ತಿದ್ದಾನೆ.

ಪ್ಲವಂಗ ಸಂವತ್ಸರ
ಯುಗಾದಿ
ಕೆನರಾ ಕಾಲೇಜು, ಕುಮಟಾ

ಎಲ್. ಆರ್. ಹೆಗಡೆ

೧ ಮೂಢ ನಂಬಿಕೆಗಳು

There remains enough and to spare of deeper mystery. The mystery of Nature needs no superstition.

—Sir Charles Sherington

ಜಗತ್ತಿನ ಘಟನೆಗಳ, ಪ್ರಾಣಿಗಳ ಜೀವನ ಹಾಗು ವರ್ತನಗಳ, ಮತ್ತು ಮನುಷ್ಯನ ಜೀವನದ ಕುರಿತಾಗಿ ಸಕಾರಣವಾದ, ಸಮಂಜಸವಾದ ವಿಚಾರದ ಆಧಾರವಿಲ್ಲದೆ ಪ್ರಚಲಿತವಾದ ಅನೇಕ ಕಲ್ಪನೆ, ಭಾವನೆ, ಹಾಗು ಆಚರಣೆಗಳು ಮೂಢನಂಬಿಕೆಗಳಲ್ಲಿ ಸಮಾವೇಶವಾಗುತ್ತವೆ. ನೈಸರ್ಗಿಕವಾದ ಘಟನೆಗಳಿಗೆ ಅತೀಂದ್ರಿಯವಾದ ಶಕ್ತಿಯ ಪ್ರಭಾವವನ್ನು ಆರೋಪಿಸುವದು ಅವುಗಳ ಪ್ರಧಾನ ಲಕ್ಷಣ. ಗ್ರಹಣಗಳಲ್ಲಿ ರಾಹು-ಕೇತುಗಳು ಸೂರ್ಯ-ಚಂದ್ರರನ್ನು ನುಂಗುವವೆಂದು ತಿಳಿಯುವುದು, ಧೂಮಕೇತು ಕಂಡರೆ ರಾಜ್ಯಕ್ರಾಂತಿ, ಯುದ್ಧ, ಬಿರುಗಾಳಿ, ದೊಡ್ಡಮನುಷ್ಯರ ಮರಣಗಳು ಸಂಭವಿಸುವ ಸೂಚನೆಯೆಂದು ತಿಳಿಯುವುದು ಮೂಢನಂಬಿಕೆ. ಪರಸ್ಪರ ಸಂಬಂಧವಿಲ್ಲದ ವಸ್ತುಗಳಲ್ಲಿ, ಘಟನೆಗಳಲ್ಲಿ ಸಂಬಂಧ

ಕಲ್ಪಿಸಿ ಅವುಗಳಿಗೆ ಕೆಲವು ಕಲ್ಪಿತ ಪರಿಣಾಮಗಳನ್ನು ಆರೋಪಿಸುವುದು ಮೂಢ ನಂಬಿಕೆ. ಹಲ್ಲಿ ತನ್ನಷ್ಟಕ್ಕೆ ಲೊಚಗುಟ್ಟುತ್ತದೆ. ಆದರೆ ಅದಕ್ಕೆ ಸುತ್ತಲಿನ ಜನದ ಒಳಿತು ಕೆಡಕುಗಳನ್ನು ಸೂಚಿಸುವ ವಿಶೇಷಾರ್ಥ ಕಲ್ಪಿಸುವುದು– ಮೂಢ ನಂಬಿಕೆ. ಇವುಗಳಿಂದ ಆಗುವ ಕಷ್ಟ, ತೊಂದರೆಗಳನ್ನು ಕಳೆದು ಕೊಳ್ಳುವುದಕ್ಕೂ, ಆಗುವ ಲಾಭಗಳನ್ನು ಪಡೆಯುವದಕ್ಕೆ ಹವಣಿಸುವುದಕ್ಕೂ ಮೂಢನಂಬಿಕೆಗಳೇ ಕಾರಣ.

ಅತಿ ಪುರಾತನ ಕಾಲದಿಂದ ಮಾನವನು ನಿಸರ್ಗವನ್ನು ತನಗೆ ಅನುಕೂಲವಾಗುವಂತೆ ಹೊಂದಿಸಿಕೊಂಡು ಬಾಳಲು ಪ್ರಯತ್ನವನ್ನು ಮಾಡುತ್ತಿದ್ದಾನೆ. ಅತಿ ಕಾಡುಸ್ಥಿತಿಯಲ್ಲಿದ್ದಾಗಿನಿಂದ ಕೆಲವು ಆಕಸ್ಮಿಕ ಘಟನೆಗಳಿಗೆ ಸಂಬಂಧ ಕಲ್ಪಿಸಿ ನೋಡಿ ತನ್ನ ಅನುಭವದ ಮುದ್ರೆಯೊತ್ತಿ ಕೆಲವು ನಂಬಿಕೆಗಳನ್ನು ಮಾಡಿಕೊಂಡಿದ್ದನು. ಆ ಹಿಂದಿನ ನಂಬಿಕೆಗಳೆಲ್ಲ ಆಗಿದ್ದಂತೆಯೆ ಇವೆಯೆಂದಾಗಲಿ ಅಥವಾ ಅವೇ ಆಚರಣೆಗಳು ಈಗಲೂ ಇವೆಯೆಂದಾಗಲಿ ಹೇಳುವುದು ಸಾಧ್ಯವಿಲ್ಲ. ಆದರೂ ಬಹಳ ಪ್ರಾಚೀನಕಾಲದಿಂದ ಮನುಷ್ಯನು ಅದೃಶ್ಯಶಕ್ತಿಗಳಲ್ಲಿ ನಂಬಿಕೆಯನ್ನು ಇಡುತ್ತ ಬಂದಿರುವನೆಂದು ಹೇಳಬಹುದು.

ಅಸಮರ್ಪಕ ಜ್ಞಾನವೇ ಮೂಢನಂಬಿಕೆಗಳ ತಳಹದಿ. ನಿಸರ್ಗದ ವಿವಿಧ ವ್ಯಾಪಾರಗಳ ಸಮರ್ಪಕ ಜ್ಞಾನವಿಲ್ಲದೆ ಇದ್ದರೂ ಪ್ರಾಚೀನಮಾನವನಿಗೆ ಆ ನಿಸರ್ಗದ ಅವಲಂಬನೆಯಿಂದಲೇ ಬದುಕಬೇಕಾಗಿತ್ತು. ಗುಡುಗು, ಸಿಡಿಲು, ಜಡಿಮಳೆ, ಬಿರುಗಾಳಿ, ಬಿಸಿಲಿನ ತಾಪ, ಚಳಿಯ ಕೇಡು, ವಿವಿಧ ಪ್ರಾಣಿ

ಗಳ ಜೀವನ-ಮರಣಗಳ ಹೋರಾಟ-ಅವುಗಳೊಡನೆ ಮಾನವ ಜಾತಿ ಸೆಣಸಿ, ಅವುಗಳ ಪರಿಣಾಮ ಅನುಭವಿಸಿ ಪಟ್ಟಪಾಡು ದಾರುಣವಾಗಿತ್ತು. ಮಾನವ ಜೀವನದಲ್ಲಿಯ ಹುಟ್ಟು-ಸಾವು, ರೋಗ-ರುಜೆ, ಮುಪ್ಪು, ಮುಂತಾದ ವಿವಿಧ ಜೀವನ ವ್ಯಾಪಾರ ಗಳ ವಿಸ್ಮಯಜನಕ ಪ್ರಪಂಚ, ಆದಷ್ಟು ನೆಮ್ಮದಿಯಿಂದ ಬದುಕುವ ಉಪಾಯ ಯೋಚಿಸಲು ಅವನನ್ನು ಪ್ರೇರಿಸಿತು. ಆ ಜೀವನದಲ್ಲಿನ ಸಂತೋಷ, ದುಃಖ, ಭಯ, ಧೈರ್ಯ, ಸಿಟ್ಟು, ದ್ವೇಷ, ನಿರಾಶೆ ಇತ್ಯಾದಿ ತೀವ್ರಭಾವನೆಗಳ ಸೆಳವಿಗೆ ಸಿಕ್ಕ ಮಾನವನ ಮನಸ್ಸು ತನ್ನ ಹಾಗು ತನ್ನ ಪಂಗಡದ ರಕ್ಷಣೆಗಾಗಿ ಕೆಲಮಟ್ಟಿನ ವಿಚಾರ ಮಾಡಬೇಕಾಗಿತ್ತು.

ಶಕ್ತಿಯೇ ಜೀವನದ ಮೂಲ ಮಂತ್ರವಾಗಿತ್ತು. ಕಾಡು ಪ್ರಾಣಿಗಳೊಡನೆ, ಇತರ ಪಂಗಡಗಳೊಡನೆ ಹೋರಾಡಿ ಬದುಕ-ಬೇಕಾಗಿದ್ದ ಪ್ರಾಚೀನ ಪಂಗಡಗಳವರು ತಮ್ಮ ದೈಹಿಕಶಕ್ತಿ-ಯನ್ನು, ಆಯುಧಶಕ್ತಿಯನ್ನು ಅವಲಂಬಿಸಬೇಕಾಗಿತ್ತು. ಬಹು ಎಚ್ಚರಿಕೆಯಿಂದ ಕಾರ್ಯ ಮಾಡಿದರೂ ಎಷ್ಟೋ ಸಲ ಫಲ ದೊರಕದೇ ಹೋಗುತ್ತಿತ್ತು. ಕೆಲವು ಸಲ ವಿಶೇಷ ಪ್ರಯತ್ನ ವಿಲ್ಲದೆಯೇ ಹೆಚ್ಚಿನ ಫಲ ದೊರಕುತ್ತಿತ್ತು. ತಮ್ಮದೇನೂ ತಪ್ಪಿಲ್ಲದೆಯೇ ದೊಡ್ಡ ಗಂಡಾಂತರ ಪ್ರಾಪ್ತವಾಗುತ್ತಿತ್ತು. ನಿಸರ್ಗದ ಶಕ್ತಿಗಳು ಕೆಲವು ಸಲ ಅನುಕೂಲವಾಗಿ, ಕೆಲವು ಸಲ ಪ್ರತಿಕೂಲವಾಗಿ ವ್ಯವಹರಿಸುತ್ತಿದ್ದುವು. ಕಾಡು ಪ್ರಾಣಿಗಳು ಕೆಲವು ಸಲ ಮಾನವರಿಗಿಂತ ಹೆಚ್ಚು ಬಲಿಷ್ಠವಾಗಿ ಕೊಲ್ಲುತ್ತಿ-ದ್ದವು. ತಮಗಿಂತ, ಕಾಡುಪ್ರಾಣಿಗಳಿಗಿಂತ ಹೆಚ್ಚಿನ, ಶಕ್ತಿಗಳು

ಮಾನವ ಜೀವನವನ್ನೂ ಜಗತ್ತಿನ ಆಗುಹೋಗುಗಳನ್ನೂ ನಿಯಂತ್ರಿಸುವವೆಂದು ಮಾನವರು ತಿಳಿದುದು ಸಹಜವಾಗಿದೆ.

ಮನುಷ್ಯರಲ್ಲಿ, ಇತರ ಪ್ರಾಣಿಗಳಲ್ಲಿ, ಹೊಸ ಜೀವಿಯ ಜನ್ಮವಾಗುವುದೂ ಮರಣದಿಂದ ದೇಹ ನಿಷ್ಕ್ರಿಯವಾಗುವುದೂ, ಅದೃಶ್ಯಶಕ್ತಿಗಳ ಕುರಿತು ಇರುವ ನಂಬಿಕೆಗೆ ಪುಟ ಕೊಟ್ಟಿರಬೇಕು. ಆ ಶಕ್ತಿ ಬೇರೆ ಎಲ್ಲಿಯೋ ಹೋಗಿರಬೇಕೆಂದು ಸಹಜವಾಗಿಯೇ ಮಾನವ ತರ್ಕಿಸುತ್ತಾನೆ. ಇಂಥ ಅದೃಶ್ಯ ಶಕ್ತಿಗಳು ಜಗತ್ತಿನಲ್ಲೆಲ್ಲ ಇವೆಯೆಂದು ಆತ ಕಲ್ಪಿಸಿದರೆ ಆಶ್ಚರ್ಯವಿಲ್ಲ. ಮರ ಮುರಿದು ಬೀಳುವಾಗ ಮುರಿಯುವ ಶಬ್ದವು ಅದರಲ್ಲಿದ್ದ ಅದೃಶ್ಯ ಶಕ್ತಿಯ ಕೂಗೆಂದು ಮಾನವನು ಭಾವಿಸುವುದು ಬಹು ಸ್ವಾಭಾವಿಕ. ನಿಸರ್ಗದ ಎಲ್ಲ ಶಕ್ತಿಗಳಲ್ಲಿಯೂ ಇಂಥ ಅದೃಶ್ಯಶಕ್ತಿಗಳ ಅಸ್ತಿತ್ವವನ್ನು ಮಾನವನು ಕಲ್ಪಿಸಿದನು. ಇದಕ್ಕೆ "ಸರ್ವಚೇತನವಾದ" "Animism" ಎಂದೆನ್ನುತ್ತಾರೆ. "Animism" ಎಂಬ ಶಬ್ದವು ಲೆಟಿನ್ ಭಾಷೆಯ "anima" ಅಂದರೆ ಆತ್ಮ ಎಂಬ ಶಬ್ದದಿಂದ ಬಂದಿದೆ. ಜೀವವಿರುವ ಪ್ರಾಣಿಗಳು, ಜೀವವಿಲ್ಲದ ವಸ್ತುಗಳು, ಕಲ್ಲು, ಮರ, ಪ್ರಾಣಿ, ಎಲ್ಲವೂ ಕಣ್ಣಿಗೆ ಕಾಣುವ ಆಕಾರವೊಂದಲ್ಲದೆ ಒಳಗಿನ ಅತ್ಯಗತ್ಯವಾದ ಆತ್ಮವನ್ನು ಹೊಂದಿವೆಯೆಂದು ತಿಳಿಯುವುದೇ ಸರ್ವಚೇತನವಾದ. ಈ ಒಳಗಿನ ಆತ್ಮಗಳು ತಿಳುವಳಿಕೆಯನ್ನು ಹೊಂದಿವೆ. ಅವುಗಳಿಗೆ ಭಾವನೆಗಳೂ ಇವೆ. ಶಕ್ತಿಗಳ ತಾರತಮ್ಯದಿಂದ, ಅವುಗಳಿಗೆ ತೊಂದರೆ ಕೊಟ್ಟರೆ ಅವು ಸೇಡು ತೀರಿಸಿಕೊಳ್ಳಬಹುದು. ಚಿಕ್ಕ ಕಲ್ಲು ಹರಳುಗಳನ್ನು ತುಳಿದು ಒಬ್ಬನು ಸುರಕ್ಷಿತನಾಗಿರಬಹುದು.

ಆದರೆ ಬಂಡೆಗಲ್ಲನ್ನು ತಿರುಗಿಸುವಾಗ ಅದರಲ್ಲಿ ವಾಸವಾಗಿರುವ ಭೂತ (spirit) ವನ್ನು ಪೂಜಿಸಲು ಏನಾದರೂ ಮಾಡುವುದೊಳ್ಳೆಯದು. ಅಲ್ಲದಿದ್ದರೆ ಅದು ಅವನಿಗೆ ದೌರ್ಭಾಗ್ಯವನ್ನುಂಟುಮಾಡುವುದು. ಬಂಡೆಗಲ್ಲು ದೊಡ್ಡದಿದ್ದಂತೆ ಅದರ ಶಾಪದ ಪರಿಣಾಮವೂ ದೊಡ್ಡದಾಗುವುದು. ಹೀಗೆಯೆ ನದಿಗಳು, ಮರಗಳು, ಮಂಜಿನ ಪುಂಜ, ಗುಡುಗಿನ ಮೋಡಗಳಿಗೂ ಹೇಳಬಹುದು. ನೆರಳುಗಳು, ಮೋಡಗಳ ವಿವಿಧ ಆಕಾರಗಳು, ಗುಡುಗು, ಗಾಳಿ, ಬಿರುಗಾಳಿ, ಕಡಲಿನ ಅಬ್ಬರ ಇವೆಲ್ಲ ಈ ಅದೃಶ್ಯ ಶಕ್ತಿಗಳ ಅಸ್ತಿತ್ವವನ್ನು ನಿದರ್ಶಿಸುವ ಪ್ರಕಾರಗಳೆಂದು ಪ್ರಾಚೀನ ಮಾನವನಿಗೆ ಅನಿಸಿರಲಿಕ್ಕೆ ಸಾಕು. ಹೊಗೆಯಿಂದಲೂ ಅಂಥ ಭಾವನೆ ಸಾಧ್ಯವಿದೆ ಜುಳುಜುಳು ಶಬ್ದಗೈಯುತ್ತ ಹರಿಯುವ ನದಿಗಳು, ಸುಯ್ಯೆಂದು ಬೀಸುವ ಗಾಳಿಗಳು, ರಾತ್ರಿಯಲ್ಲಿ ಕಣ್ಣು ಮಿಟುಕಿಸುವಂತಹ ನಕ್ಷತ್ರಗಳು, ಸಮುದ್ರದ ಬೇಲೆಯ ಮೇಲೆ, ಮರಳಿನ ಮೇಲೆ ತಿರುಗಾಡುವಾಗ ಚಯ್ ಚಯ್ ಎಂದು ದನಿಗೈಯ್ಯುವಂತಹ ಮರಳಿನ ಕಣಗಳು, ಪುರಾತನ ಮಾನವನಿಗೆ ಹಕ್ಕಿ, ಕ್ರಿಮಿ ಕೀಟ, ಪ್ರಾಣಿಗಳಂತೆ ಇವುಗಳಲ್ಲಿಯೂ ಭಾವನಾಶೀಲ ಆತ್ಮವಿದೆಯೆಂದು ತಿಳಿಯುವುದಕ್ಕೆ ಅನುಕೂಲವಾಗಿದ್ದರೂ ಇರಬಹುದು. 'ಗಾಳಿ ಬೀಸುವಾಗ ಭೋರೆಂದು ಅತ್ತವು.' ಸಮುದ್ರತೀರದ ಗಾಳಿಯ ಮರಗಳಿಗೆ Weeping trees ಅಂದರೆ ಅಳುವ ಮರಗಳೆಂದೆ ಇಂಗ್ಲೀಷಿನಲ್ಲಿ ಕರೆಯುತ್ತಾರೆ. ಗಾಳಿಯ ಮರಗಳಲ್ಲಿ ಗಾಳಿ ಬೀಸುವುದನ್ನು ಕೇಳಿದ ಸಂವೇದನಶೀಲ ಮನಸ್ಸಿಗೆ ಅದು ಅಸಂಖ್ಯ ಅದೃಶ್ಯ ಜೀವಿಗಳ ಕೂಗುಗಳೆಂದೇ ಭಾಸವಾಗುತ್ತದೆ.

೨ ವಿಜ್ಞಾನ ಮತ್ತು ಅಜ್ಞಾನ

ವಿಜ್ಞಾನವು ಸತ್ಯದ ಮಗುವಾದರೆ, ಅಜ್ಞಾನ ಅಥವಾ ಅಸಮರ್ಪಕ ಜ್ಞಾನವು ಮೂಢನಂಬಿಕೆಗಳ ತಾಯಿ. ವಿಜ್ಞಾನದಲ್ಲಿ ಸತ್ಯದೃಷ್ಟಿಯೂ ತರ್ಕಬುದ್ಧಿಯೂ ಇರುವಂತೆ ಮೂಢನಂಬಿಕೆಗಳಲ್ಲಿಯೂ ಅಸಮಂಜಸವಾದ ತರ್ಕಸರಣಿಯಿರುತ್ತದೆ. ಪ್ರಯೋಗಗಳ ಅನುಭವಗಳ ಆಧಾರದ ಮೇಲೆ ವಿಜ್ಞಾನವು ತನ್ನ ಸಿದ್ಧಾಂತಗಳನ್ನು ರಚಿಸುವಂತೆ, ಜೀವನದ ಅನುಭವಗಳ ಹಾಗೂ ನಿಸರ್ಗ ಶಕ್ತಿಗಳನ್ನು ಒಲಿಸಿಕೊಳ್ಳಲು ಮಾಡುವ ಪ್ರಯತ್ನಗಳಿಂದ ಮೂಢ ನಂಬಿಕೆಗಳ ಶ್ರದ್ಧೆ ಅಜ್ಞಾನಿಗಳಲ್ಲಿ ಬಲವಾಗುತ್ತದೆ. ನಿಸರ್ಗದ ಮೇಲೆ ನಿಯಂತ್ರಣವನ್ನಿಡಬೇಕೆಂದು ವಿಜ್ಞಾನವು ಪ್ರಯತ್ನಿಸುತ್ತದೆ. ಅದರಂತೆ ಅಜ್ಞಾನಿ ಮನುಷ್ಯನು ಪ್ರಾಚೀನಕಾಲದಿಂದಲೂ ನಿಸರ್ಗದ ಹಾಗೂ ನಿಸರ್ಗಾತೀತ ಶಕ್ತಿಗಳ ಮೇಲೆ ನಿಯಂತ್ರಣವನ್ನಿಟ್ಟುಕೊಳ್ಳಲು ಮಾಟದ ಕ್ರಮವನ್ನು ಅನುಸರಿಸುತ್ತ ಬಂದಿದ್ದಾನೆ. ಆದ್ದರಿಂದ ಮಾಟವನ್ನು "ಅಜ್ಞಾನಿಗಳ ವಿಜ್ಞಾನ" ಎಂದು ಕರೆಯಬಹುದು. (ಇಲ್ಲಿ ಅಜ್ಞಾನಿಗಳೆಂದರೆ ವೈಜ್ಞಾನಿಕ ವಿಧಾನವನ್ನನುಸರಿಸದ ಜನ ಎಂದಿಟ್ಟುಕೊಳ್ಳಬೇಕು.) ವಿಜ್ಞಾನವು ನಿಸರ್ಗದ ಶಕ್ತಿಗಳನ್ನರಿತು ಅವುಗಳ ಭೌತಿಕ ನಿಯಮ-

ಗಳನ್ನು ರೂಪಿಸಿದರೆ, ಅಜ್ಞಾನವು ಭೂತಗಳ ಶಕ್ತಿಗಳನ್ನು ನಂಬಿಕೊಂಡು ಭೂತಭಕ್ತಿ, ಭೂತಭೀತಿಗಳನ್ನು ರೂಪಿಸಿಕೊಂಡಿದೆ.

ಒಬ್ಬ ಮನುಷ್ಯನು ಅಡವಿಯಲ್ಲಿದ್ದಾಗ ಕೊಡಲಿಯನ್ನು ಮರೆತು ಬಂದುದರಿಂದ, ಅದನ್ನು ತರುವದಕ್ಕೋಸ್ಕರ ಮರದ ತೊಗಟೆಯ ಮೇಲೆ, ತನ್ನ ಕೊಡಲಿಯನ್ನು ಕೊಟ್ಟು ಕಳಿಸೆಂದು ಬರೆದು, ಒಬ್ಬ ಅಶಿಕ್ಷಿತ ಮನುಷ್ಯನ ಹತ್ತಿರ ಕೊಟ್ಟುಕಳಿಸಿದನು. ಆತನ ಹೆಂಡತಿಯು ಸೇವಕನು ತಂದ ಚೀಟಿಯನ್ನೋದಿ ಕೊಡಲಿಯನ್ನು ಕೊಟ್ಟು ಕಳಿಸಿದಳು. ಆ ಅಶಿಕ್ಷಿತನಿಗೆ ಆ ಚಕ್ಕೆ ಮಾತನಾಡುವ ಚಕ್ಕೆ ಎಂದು ನಂಬಿಗೆಯಾಯಿತು. ಓದುಬರೆಹದ ಗಂಧವೂ ಇಲ್ಲದ ಮೂಲಕ ಆತನಿಗೆ ತನಗೆ ಗೊತ್ತಿದ್ದ ಮಾತನಾಡುವ ವಿಧಾನವನ್ನು ಅವ್ಯಕ್ತವಾದ ರೀತಿಯಲ್ಲಿ ಆ ಚಕ್ಕೆಯು ಉಪಯೋಗಿಸಿತು ಎಂದೆನಿಸಿತು. ತೀರ ಕಾಡುಮನುಷ್ಯನಾದರೆ ಆ ಚಕ್ಕೆಯಲ್ಲಿಯೇ ಒಂದು ಭೂತವು ಸೇರಿದ್ದು ಅದು ಆ ಮಾಟಗಾರನ ಆಜ್ಞೆಯನ್ನು ಆತನ ಹೆಂಡತಿಗೆ ತಿಳಿಸಿತು ಎಂದು ಕಲ್ಪಿಸಬಹುದಾಗಿತ್ತು.

ಹೊಸದಾಗಿ ಮೋಟಾರುಗಳ ಶಬ್ದವನ್ನು ಕೇಳಿ, ಅವನ್ನು ನೋಡಿ ದನಕರುಗಳು ಮೋಟರು ಒಂದು ಬಗೆಯ ಪ್ರಾಣಿಯೆಂದು ತಿಳಿದು ಅಂಜಿಕೆಯಿಂದ ಓಡುತ್ತಿದ್ದವು. ಹಾಗೆಯೇ ಉಗಿಬಂಡಿ, ಮೋಟರು ಇವುಗಳ ಚಾಲನೆಯನ್ನು ಭೂತಗಳು ಮಾಡುತ್ತವೆಂದೂ ಗ್ರಾಮೋಫೋನು ರೇಡಿಯೋಗಳಲ್ಲಿ ಭೂತಗಳು ಮಾತನಾಡುವವೆಂದೂ ಯುರೋಪಿಯನ್ನರು ಬಹಳ

ಭೂತಗಳನ್ನು ಕೈವಶಮಾಡಿಕೊಂಡಿರುವರೆಂದೂ ಕಾಡು ಜನರು ತಿಳಿದಿದ್ದರಲ್ಲಿ ಆಶ್ಚರ್ಯವಿಲ್ಲ.

ಸಿಡಿಲು ಬೀಳುವುದು ದೇವರ ಕೋಪದ ಸಂಕೇತವೆಂದು ನಮ್ಮಲ್ಲಿ ಅನೇಕರ ನಂಬಿಗೆಯಿದೆ. ಅಲ್ಲದಿದ್ದರೆ ಸಾಮಾನ್ಯ-ವಾಗಿ ಮನುಷ್ಯರ ಮೇಲೆಯೂ ಮನೆಗಳ ಮೇಲೆಯೂ ಸಿಡಿಲು ಬೀಳುವುದಿಲ್ಲವೆಂದು ಅವರು ಹೇಳುತ್ತಾರೆ. ಬೆಂಜಾಮಿನ್ ಫ್ರಾಂಕಲಿನ್ನನು ಸಿಡಿಲಿನ ವಿರುದ್ಧ ಮನೆಗಳಿಗೆ ರಕ್ಷಣೆಯನ್ನೀ-ಯಲು ಕಬ್ಬಿಣದ ಪಟ್ಟಿಗಳನ್ನು ಮಾಡುಗಳ ತುದಿಗಳಿಗೆ ಹಚ್ಚುವ ವಿಧಾನವನ್ನು ಪ್ರಚಾರಕ್ಕೆ ತಂದನು. ಆದರೆ ಹಾಗೆ ಮಾಡುವುದು ದೇವರ ಉದ್ದೇಶಕ್ಕೆ ಭಂಗವನ್ನು ತಂದ ಹಾಗಾ-ಗುವುದೆಂದು ಅನೇಕರು ಅದರ ವಿರುದ್ಧ ಪ್ರಚಾರ ಮಾಡಿದ-ರಂತೆ. ಪ್ರಾಚೀನ ಕಾಲದಿಂದಲೂ ಕಬ್ಬಿಣವನ್ನು ಭೂತಗಳ ವಿರುದ್ಧ ರಕ್ಷಣೆಯ ಸಾಧನವೆಂದು ಅನೇಕ ಜನಾಂಗಗಳಲ್ಲಿ ಬಳಸುತ್ತ ಬಂದಿದ್ದಾರೆ. ಸಿಡಿಲಿನ ಭೂತದಿಂದ ಕಬ್ಬಿಣವು ತಮ್ಮನ್ನು ರಕ್ಷಿಸುವುದೆಂದು ಅನಾಗರಿಕರ ತರ್ಕ ಹೊರಟರೆ ಅದು ಅವರ ನಂಬಿಕೆಗೆ ಅನುಗುಣವಾಗಿಯೇ ಇದೆ.

ಕಾಡು ಮನುಷ್ಯರ ಕಣ್ಣು, ಕಿವಿಗಳು ದೂರದ ಹಾಗೂ ಚಿಕ್ಕ ವಸ್ತು ಹಾಗೂ ಧ್ವನಿಗಳನ್ನು ನೋಡುವ ಹಾಗೂ ಕೇಳುವ ಶಕ್ತಿಯುಳ್ಳವು. ಆದರೆ ಅವರ ಸೂಕ್ಷ್ಮಶಕ್ತಿಯ ಇಂದ್ರಿಯಗಳಿಗೆ ತಿಳಿಯದಂಥ ಗಂಡಾಂತರಗಳನ್ನು ನಾಯಿಗಳು ಗುರ್ತಿಸುವ ಶಕ್ತಿಯನ್ನೂ ಎಚ್ಚರಿಕೆಯನ್ನೂ ಪಡೆದಿವೆ. ರಾತ್ರಿ-ಯಲ್ಲಿ ಅದೃಶ್ಯ ಸಂಗತಿಗಳನ್ನು ಗುರ್ತಿಸಿ ಅವುಗಳ ವಿರುದ್ಧ

ಏರಿಹೋಗುವ ನಾಯಿಗಳ ಶಕ್ತಿಯನ್ನು ನೋಡಿ ಕಾಡು-ಮಾನವರು ನಾಯಿಗಳಿಗೆ ಎರಡನೆಯ ದೃಷ್ಟಿ (Second Sight) ಇದೆಯೆಂದು ನಿಶ್ಚಯಿಸಿದರು. ಆದುದರಿಂದ ಮನುಷ್ಯರು ದೆವ್ವ ಭೂತಗಳನ್ನು ಕಾಣದಿದ್ದಾಗ ಸಹ ನಾಯಿಗಳು ಕಾಣುವವೆಂಬ ನಂಬಿಕೆ ಬಲಿಯಿತು. ನಾಯಿಗಳ ಬೊಗಳು-ವಿಕೆಯಿಂದ ಕೆಲವು ಭೂತಗಳು ಹೆದರಿ ಓಡುವವೆಂದು ಕಾಡುಜನರು ತಿಳಿಯುತ್ತಿದ್ದರು. ಬೆಂಕಿಯಂತೆ, ನೀರಿನಂತೆ ನಾಯಿಗಳೂ ಭೂತಗಳನ್ನು ನಿಯಂತ್ರಿಸುವವೆಂದು ತಿಳಿದರು. ಸತ್ತವರ ಪ್ರೇತಗಳು ಮನುಷ್ಯರ ಕಣ್ಣಿಗೆ ಕಾಣಿಸುವುದಿಲ್ಲ; ಆದರೆ ನಾಯಿಗಳು ಅವನ್ನು ನೋಡಬಲ್ಲವು ಎಂದು ಆಸಾಮದ ನಾಗಾಜನರು ನಂಬುತ್ತಾರೆ.

ಮನುಷ್ಯರು ಕೇಳಲಾರದ ಕೆಲವು ಶಬ್ದಗಳನ್ನು (ಶ್ರವಣಾತೀತ ಶಬ್ದ) ಪ್ರಾಣಿಗಳು, ಹಾಗು ಕ್ರಿಮಿಕೀಟಗಳು ಕೇಳುವವೆಂಬ ಸಂಗತಿಯು ವೈಜ್ಞಾನಿಕ ಸತ್ಯವಾಗಿದೆ. ಶ್ರವಣಾತೀತ ಶಬ್ದಗಳು ಚೈತನ್ಯದ (Energy) ಒಂದು ರೂಪ. ಅವುಗಳ ಶಕ್ತಿಯನ್ನು ಬಳಸಿಕೊಂಡು ವಿದ್ಯುತ್ ಪಂಖಗಳನ್ನು ತಿರುಗಿಸುವ, ಅಡಿಗೆ ಮಾಡುವ ಮುಂತಾದ ಅನೇಕ ಕೆಲಸ ಮಾಡುವ ಯಂತ್ರಗಳನ್ನು ಇತ್ತೀಚೆಗೆ ವಿಜ್ಞಾನಿಗಳು ಶೋಧಿ-ಸಿರುವರು. ಹಾಗೆಯೇ ಮನುಷ್ಯರ ಕಿವಿಗಳಿಗೆ ಕೇಳಿಸದ, ಆದರೆ ನಾಯಿಗಳು ಕೇಳಬಲ್ಲಂಥ ಶಬ್ದತರಂಗಗಳ ಸಹಾಯದಿಂದ ನಾಯಿಗಳ ಹತ್ತರ ಕೆಲಸ ಮಾಡಿಸಿಕೊಳ್ಳುವ ಯಂತ್ರವನ್ನು ಶೋಧಿಸಿರುವರು. ಭೂತಗಳೇ ಮಾಡಬಹುದಾದ ಕೆಲಸ-

ಗಳೆಂದು ನಂಬುತ್ತಿದ್ದಂಥ ರೀತಿಯ ಕೆಲಸಗಳನ್ನು ವಿದ್ಯುತ್ತು ಯಂತ್ರಗಳ ಮೂಲಕ ಮಾಡಿ ತೋರಿಸುತ್ತಿದೆ. ಹಾಗೆಯೇ ಇಂಥ ಯಂತ್ರಗಳ ಮೂಲಕ ಮಾಟಗಾರಿಕೆಯಿಂದ ವಿಜ್ಞಾನಿಗಳು ಬೇರೆಬೇರೆ ಭೂತಗಳನ್ನು (ಪಂಚಭೂತಗಳನ್ನೆಲ್ಲ) ವಶಪಡಿಸಿಕೊಂಡಿರುವರೆಂದು ಮೂಢನಂಬಿಕೆಯುಳ್ಳ ಅಜ್ಞಾನಿಗಳು ಹೇಳಬಹುದಾಗಿದೆ.

ವಿಜ್ಞಾನಿಗಳು ಪ್ರತಿಪಾದಿಸುವ, ಮತ್ತು ಉಪಯೋಗಿಸಿಕೊಳ್ಳುವ ಅದೃಶ್ಯಶಕ್ತಿಗೂ ಅಜ್ಞಾನಿಗಳು ನಂಬುವ ಅದೃಶ್ಯ ಶಕ್ತಿಗೂ ಮೂಲಭೂತವಾದ (ಮತ್ತೆ ಭೂತ ಬಂತು !) ಭೇದವಿದೆ. ವಿಜ್ಞಾನಿಗಳು ಶೋಧಿಸಿದ ತತ್ವಗಳು, ವೈಜ್ಞಾನಿಕ ಪ್ರಯೋಗಗಳಿಂದ ರುಜುವಾತಾಗಬೇಕಾಗುತ್ತದೆ. ಆ ಪ್ರಯೋಗಗಳು ನೈಸರ್ಗಿಕ ನಿಯಮಗಳಿಗೆ ಒಳಪಡಬೇಕಾಗುತ್ತವೆ. ಮಾಟಗಾರನು ನಂಬುವ ಅದೃಶ್ಯಶಕ್ತಿ ಪ್ರಾರ್ಥನೆ ಹಾಗು ಮಾಟದ ಬಲಪ್ರದರ್ಶನಗಳಿಗೆ ಒಳಪಡುವ ರೀತಿಯಲ್ಲಿ ವ್ಯಕ್ತಿತ್ವವನ್ನು ಪಡೆದಿರುವ ವಿಚಿತ್ರ ಜೀವಿಯಾಗಿದೆ. ನೈಸರ್ಗಿಕವಾಗಿ ವಿವರಣೆ ಕೊಡಬಲ್ಲ ಬಹಳ ಕಾರಣಗಳಿಗೆ ಪುರಾತನ ಮಾನವನು ಭೂತಶಕ್ತಿಯನ್ನು ಆರೋಪಿಸುತ್ತಾನೆ. ನೀನುವದರಿಂದ ಆಗುವ ಒಳಿತು ಕೆಡಕುಗಳಿಗೆ ಸಹ ನೀನು ಬರುವುದಕ್ಕೆ ಮೂಲಕಾರಣವಾದ ಅದೃಶ್ಯಭೂತವೇ ಕಾರಣವೆಂದು ಪುರಾತನ ಮಾನವನ ಕಲ್ಪನೆಯಿದ್ದಿತೆಂದು ಗೊರ್ಡನ್ ಅವರು ಅಭಿಪ್ರಾಯಪಡುತ್ತಾರೆ.

ಕಾಡುಮಾನವನು ನಿಸರ್ಗದ ರಹಸ್ಯಗಳ ಘಟನೆಗಳ ವಿವರಣೆಯಲ್ಲಿ ತನಗೆ ಸ್ಪಷ್ಟವಾಗಿ ತಿಳಿಯದ ವಿಷಯಗಳಿಗೆ ಕಾಲ್ಪನಿಕ ಕಾರಣಗಳನ್ನು ಕೊಡುತ್ತಾನೆ. ದೈಹಿಕವಾದ ದೋಷಗಳಿಂದ, ಆಹಾರ-ವಿಹಾರ, ಮಾನಸಿಕ ಬಾಹ್ಯ ಕಾರಣ-ಗಳಿಂದ ಉಂಟಾಗುವ ರೋಗಗಳು ದೆವ್ವ, ಭೂತ, ಪಿಶಾಚಿಗಳ ಕಾಟದಿಂದ ಬಂದವೆಂದು ತಿಳಿಯುವುದು ಸಾಮಾನ್ಯವಾಗಿದೆ. ಮಿದುಳಿಗೆ ಒಮ್ಮೆಲೆ ರಕ್ತವೇರುವುದರಿಂದಾದ ರೋಗದಲ್ಲಿ, ಧನುರ್ವಾತ (Titanus) ಹಾಗು ಅಪಸ್ಮಾರಗಳಲ್ಲಿ ಆಗುವ ದೈಹಿಕವಾದ ವಿಕಾರಗಳು ಭಯೋತ್ಪಾದಕವಾಗುತ್ತವೆ. ಹಾಗೆಯೆ ಹಿಸ್ಟೀರಿಯಾ, ಹುಚ್ಚು ಮುಂತಾದವುಗಳಿಂದ ಆಗುವ ವಿಕಾರಗಳು, ಮಾನಸಿಕ ರೋಗಗಳು ಭೂತಗ್ರಹದಿಂದಲೇ ಆಗುವವೆಂದು ಅರ್ಧ-ನಾಗರಿಕರಾದ ಜನರೂ ಸಹ ತಿಳಿಯುವ-ದುಂಟು. ಅಪಸ್ಮಾರದ ಚಡಪಡಿಕೆಯು ದೇಹದಲ್ಲಿನ ಆತ್ಮ ಹಾಗು ಬೇರೆ ಕಡೆಯ ಭೂತಗಳೊಳಗಿನ ಹೊಡೆದಾಟದ ಸ್ವರೂಪವಾಗಿವೆಯೆಂದು ಅಜ್ಞಜನರು ತಿಳಿಯಬಹುದು.

ವೈಜ್ಞಾನಿಕ ದೃಷ್ಟಿಯಿಂದಲೂ, ಬರಿಗಣ್ಣಿಗೆ ಅದೃಶ್ಯವಾದ ಅಸಂಖ್ಯ ಸೂಕ್ಷ್ಮ ಜೀವಿಗಳು ಕೆಲವು ಹಿತಕಾರಕಗಳಾದುವು, ಕೆಲವು ಅಹಿತಕಾರಕಗಳಾದುವು ಇರುವುದು ನಿಜ. ಮತ್ತು ಸೂಕ್ಷ್ಮಾತಿಸೂಕ್ಷ್ಮವಾದ ರೋಗಾಣುಗಳು ಅಮಿತವಾಗಿ ಬೆಳೆದು ಆನೆಯನ್ನೂ ಕೊಲ್ಲುವವೆಂಬುದೂ ನಿಜ. ಹಾಗು ಇತರ ಜೀವಿಗಳಿಗಿರುವಂತೆಯೆ ಅವುಗಳಿಗೂ ಸುಖ-ದುಃಖ ಮುಂತಾದ ಭಾವನೆಗಳಿರುವುದೂ ಒಪ್ಪುವಂಥದು. ಆದರೆ

ಅನಾಗರಿಕ ಮಾನವನು ಕಾಣುವ ಮತ್ತು ತಿಳಿಯುವ ಅದೃಶ್ಯಶಕ್ತಿಗಳು, ಪ್ರಾರ್ಥನೆಗಳಿಗೆ ಒಲಿಯುವಂಥವು, ಮಾಟ-ಗಳ ಮೂಲಕ ಮನುಷ್ಯನ ಹೇಳಿಕೆಯಂತೆಯೆ ಒಪ್ಪಿ ನಡೆಯ-ಬಲ್ಲಂತಹವು; ಅದೃಶ್ಯವಾದರೂ ಬೇಕಾದ ಆಕಾರ, ಗಾತ್ರ-ಗಳನ್ನು ತಾಳಬಲ್ಲಂಥವು; ಮಂತ್ರಶಕ್ತಿಗೆ ಅಧೀನವಾಗಿ ವ್ಯವಹರಿಸುವಂಥವು.

೩ ಮೂಢನಂಬಿಕೆಗಳ ತರ್ಕಸರಣಿ

ನಮ್ಮನ್ನು ಸಸ್ತನಿ ವರ್ಗದೊಡನೆ ಸೇರಿಸಿ, ಹಾವು ಕಪ್ಪೆಗಳ ಅವಸ್ಥೆಗಳಿಗಿಂತ ಹಿಂದೆ ಸರಿದು, ಮೊದಲಿನ ವಿಕಾಸದ ಹಂತಗಳ ಅನೇಕ ಅವಶೇಷಗಳನ್ನು ಮಾನವದೇಹವು ತೋರಿಸುವಂತೆಯೇ ಮಾನವನ ಮನಸ್ಸೂ, ಅದರ ಮೂಲ-ಸ್ಥಿತಿಯನ್ನು ಶೋಧಿಸುತ್ತ ಹೊರಟರೆ, ಅಸಂಖ್ಯ ಪ್ರಾಚೀನ ಗುರುತುಗಳನ್ನು ತೋರಿಸುತ್ತ ಬೆಳವಣಿಗೆ ಹೊಂದಿರುವುದು ಕಂಡುಬರುವುದು.

ಮುಪ್ಪಿನಿಂದ ಅಥವಾ ಮಾರಕವಾದ ರೋಗದಿಂದ ಜನರು ಸಾಯುವರೆಂಬುದು ನಮಗೆ ಸಮರ್ಪಕವಾಗಿ ತಿಳಿ-ಯುವುದಾದರೂ ಅನಾಗರಿಕ ಮನುಷ್ಯನಿಗೆ ಹಾಗಿಲ್ಲ. ಮುಪ್ಪಿ-ನವರು ವಯಸ್ಸಿನ ಮೂಲಕ ಸತ್ತರೆಂಬುದನ್ನು ಅವನು ನಂಬಲಾರನು. ಮತ್ತೂ ಹೆಚ್ಚು ವಯಸ್ಸಾದರು ಜೀವಂತ-ರಿದ್ದಾರೆಂದು ಅವನು ವಾದ ಮಾಡುವನು. ರೋಗದಿಂದಲೂ ಯಾರೂ ಸಾಯುವುದಿಲ್ಲ. ಯಾಕಂದರೆ ಅದೇ ರೋಗದಿಂದ ಗುಣವಾದವರಿದ್ದಾರೆ. ಅಥವಾ ರೋಗ ಬಾರದೆಯೆ ಇದ್ದವ-ರಿದ್ದಾರೆ. ಏನೋ ಮೋಡಿ ಮಾಡಿದ್ದಿರಬೇಕೆಂಬುದೇ

ಅವನ ನಿಜವಾದ ವಿವರಣೆ. ಭೂತವೋ ಮಾಟವೋ ಸತ್ತವನ ಕೊಲೆಗೆ ಕಾರಣವಾಗಿರಬೇಕು. ಅನೇಕ ಅನಾಗರಿಕ ಪಂಗಡ ಗಳವರು ಯುದ್ಧದಲ್ಲಿನ ಸಾವು ಮಾತ್ರ ಸಹಜವಾದದ್ದೆಂದು ತಿಳಿಯುವರು. ಇನ್ನಿತರ ಪಂಗಡಗಳವರು ಅದೂ ಅಸಹಜ-ವೆಂದು ತಿಳಿಯುವರು. ಯಾಕೆಂದರೆ ಯುದ್ಧದಲ್ಲಿ ಎಲ್ಲರೂ ಸಾಯುವದಿಲ್ಲ. ಸಾವನ್ನು ಉಂಟುಮಾಡಿದ ವಿರೋಧಿ ಪಕ್ಷದವನು ಮಾಟಗಾರನಾಗಿರಬೇಕು; ಅಥವಾ ಮಾಟಮಾಡಿದ ಆಯುಧವನ್ನು ಉಪಯೋಗಿಸಿರಬೇಕು. ಕೆಲವು ಸಂದರ್ಭ-ಗಳಲ್ಲಿ ಈ ವಿಚಿತ್ರ ವಿಚಾರವು ಮತ್ತೂ ಹೆಚ್ಚಿನ ಪರಿಣಾಮಕಾರಿ-ಯಾದ ರೂಪವನ್ನು ಧರಿಸಬಲ್ಲುದು. ಉದಾಹರಣೆಗೆ ಒಬ್ಬ ಯುರೋಪಿಯನ್ನನು ಹೊಡೆದು ಕೊಂದ ಮೊಸಳೆಯ ಹೊಟ್ಟೆಯಲ್ಲಿ ಕಾಲಿಗೆ ಹಾಕುವ ಎರಡು ಬಳೆಗಳು ದೊರೆತುವು. ಅಲ್ಲಿಯ ಮೂಲ ನಿವಾಸಿಗಳು ಆ ಬಳೆಗಳು ಕೆಲ ಸಮಯದ ಹಿಂದೆ ಮೊಸಳೆಯು ನುಂಗಿದ ಇಬ್ಬರು ಹೆಂಗಸರವೆಂದು ಗುರುತಿಸಿದರು. ಕೂಡಲೆ ಮಾಟದ ಆರೋಪವನ್ನು ತಂದರು. ಯಾರೋ ಒಬ್ಬ ಅಜ್ಞಾತ ಮಂತ್ರವಾದಿಯು ಆ ಮೊಸಳೆಯನ್ನು ಕರೆದು ಆ ಇಬ್ಬರು ಹೆಂಗಸರನ್ನು ತರಲು ಆಜ್ಞೆವಿಧಿಸಿದ್ದನೆಂದು ಈ ಸಹಜವಾದ ಘಟನೆಗೆ ತಮ್ಮ ವಿವರಣೆ ಹೇಳಿದರು. ಆ ಮೊಸಳೆಯು ಅವನ ಅಪ್ಪಣೆ ಪಾಲಿಸಿತು, ಅಷ್ಟೇ. ಯಾರಾದರೂ ಅಪ್ಪಣೆ ಮಾಡದಿದ್ದರೆ ಮೊಸಳೆಗಳು ಮನುಷ್ಯರನ್ನು ತಿನ್ನುವುದಿಲ್ಲವೆಂದೂ ಹೆಂಗಸರನ್ನು ಕೊಂದು-ದಕ್ಕಾಗಿ ಆ ಮಂತ್ರಗಾರನಿಂದ ಅದು ಬಳೆಗಳನ್ನು ಬಹುಮಾನ-

ವಾಗಿ ಹಿಡಿಯಿತೆಂದೂ ಅವರು ಸಾಧಿಸಿದರು. ನೈಸರ್ಗಿಕವಾದ ಕಾರಣಗಳನ್ನು ನಂಬದೆ ನಾವೂ ಅದೃಶ್ಯಶಕ್ತಿಗಳನ್ನೂ, ಮಾಟಗಾರರನ್ನೂ ನಂಬುವದಾದರೆ ಅವರ ಹೇಳಿಕೆಯು ಸಂಪೂರ್ಣವಾಗಿ ಸಕಾರಣವಾಗಿದೆಯೆಂದು ನಮಗೂ ಅನಿಸು-ತ್ತಿತ್ತು. ಇದಕ್ಕೆ ಅವರ ತರ್ಕಪೂರ್ವ ಮನಸ್ಥಿತಿಯ ಪೂರ್ವ ಸಿದ್ಧಾಂತವೇ ಕಾರಣ.

ಕಾಡು ಮಾನವರ ಮಾನಸಿಕಕ್ರಿಯೆ ನಮ್ಮದರಂತೆಯೇ ಇದೆ. ಆದರೆ ಆತನ ಮೂಲಗ್ರಹಿಕೆಗಳು ಬೇರೆ. ಪ್ರತಿ-ಯೊಂದಕ್ಕೂ ನೈಸರ್ಗಿಕವಾದ, ದೃಶ್ಯವಾದ ಕಾರಣವಿದೆ ಎಂಬುದು ಸಯುಕ್ತಿಕ ಸಿದ್ಧಾಂತವಾಗಿದೆ. ನಾವು ಆಕಸ್ಮಿಕ ಎನ್ನುವುದಕ್ಕೂ ಅನಾಗರಿಕ ಮನುಷ್ಯನು ವಿವರಣೆಯನ್ನು ಕೇಳುತ್ತಾನೆ ನಾವು ಆಕಸ್ಮಿಕವಾಗಿ ಎನ್ನುವುದು ಅವನಿಗೆ ಅನಿಯಂತ್ರಿತ ಶಕ್ತಿಯ ಸಂಕೇತ. ಅದ್ದರಿಂದ ಮೊಸಳೆಯು ತಿಂದ ಹೆಂಗಸಿನ ಮರಣವು ಆಕಸ್ಮಿಕವಲ್ಲ. ಇಬ್ಬರ ನಡುವೆ ಇರುವ ಒಬ್ಬ ಹೆಂಗಸನ್ನು ತಿನ್ನುವುದೇ ಮೊಸಳೆಯ ಉದ್ದೇಶ-ವಿತ್ತು. ಅದಕ್ಕೆ ಆ ಉದ್ದೇಶ ಇರುವುದಕ್ಕೆ ಕಾರಣವೇನು? ಸಾಮಾನ್ಯವಾಗಿ ಮೊಸಳೆಗಳು ಮನುಷ್ಯರನ್ನು ತಿನ್ನುವುದಿಲ್ಲ! ಈ ಮಾತು ಸಹರಾದಲ್ಲಿ ಮಳೆಯಿಲ್ಲ ಎಂಬ ಹೇಳಿಕೆಯಷ್ಟೇ ಸತ್ಯವಾಗಿದೆ. ಮೊಸಳೆಗಳು ನಿಜವಾಗಿ ಪುಕ್ಕ ಪ್ರಾಣಿಗಳು; ಸುಲಭವಾಗಿ ಹೆದರುತ್ತವೆ. ಅವುಗಳ ಸಂಖ್ಯೆಯನ್ನು ನೋಡಿ-ದರೆ ಅವು ಆಶ್ಚರ್ಯವಾಗುವಷ್ಟು ಅತಿ ಕಡಿಮೆ ಸಂಖ್ಯೆಯ ಜನರನ್ನು ತಿನ್ನುತ್ತವೆ. ಆದರಿಂದ ಅವು ಮನುಷ್ಯರನ್ನು

ತಿನ್ನುವುದು ಅನಪೇಕ್ಷಿತ ಹಾಗು ಅಸ್ವಾಭಾವಿಕ. ಆದ್ದರಿಂದ ಅದಕ್ಕೆ ವಿವರಣೆ ಬೇಕು.

ಅನುಭವದ ಮೇಲೆಯೇ ಅನಾಗರಿಕ ಮನುಷ್ಯನು ತನ್ನ ನಿರ್ಣಯಗಳನ್ನು ನಿಲ್ಲಿಸುತ್ತಾನೆ. ಅಸಾಧಾರಣ ಘಟನೆ-ಗಳಿಗೆ ಆತನು ಹೆದರುತ್ತಾನೆ. ಧೂಮಕೇತು, ಗ್ರಹಣ ಮುಂತಾದವು ಮುಂದೆ ನಡೆವ ಘಟನೆಗಳನ್ನು ತೋರಿಸುವ ಶಕುನ ಎಂದು ಅವನ ಅಭಿಪ್ರಾಯ. ರಾತ್ರಿಸಂಚಾರಿಯಾದ ಚಿಪ್ಪು ಹಂದಿ (Ant-eater) ಹಗಲಿನಲ್ಲಿ ಬಂದರೆ ಅದೊಂದು ಅಸಾಧಾರಣ ಘಟನೆ. ಆತನು ಅದನ್ನು ಕೊಂದು, ಅದರ ಮಾಂಸವನ್ನು ತಿಂದು, ಅದರ ಅನಿಷ್ಟಪರಿಹಾರ ಮಾಡಿಕೊಳ್ಳು-ತ್ತಾನೆ.

ಡರ್ಬಾನಿನ ವಿಶ್ವವಿದ್ಯಾಲಯದಲ್ಲಿ ಕಲಿತ ಒಬ್ಬ ಆಫ್ರಿಕನ್ನನು ಯುರೋಪಿಯನ್ ಮಿತ್ರನೊಡನೆ ಹೇಳಿದನಂತೆ. "ಹೌದು, ಯುರೋಪಿಯನ್ ಡಾಕ್ಟರನು ದೇಶೀ ವೈದ್ಯನಿಗಿಂತ ಚೆನ್ನಾಗಿ ರೋಗ ಗುಣಪಡಿಸಬಲ್ಲನೆಂದು ನನಗೆ ಗೊತ್ತಿದೆ. ಆದರೆ ಯಾರು ರೋಗವನ್ನು ಉಂಟುಮಾಡಿದರೆಂಬುದನ್ನು ಆತನು ಹೇಳಲಾರನು." ಅನಾಗರಿಕ ಮಾನವನ ನಂಬಿಕೆಗಳ ತರ್ಕವನ್ನು ಕುರಿತು ಕಾರ್ಲ್‌ಯೂಂಗ ಎಂಬ ಪ್ರಖ್ಯಾತ ಮನೋವಿಜ್ಞಾನಿ "ಆತ್ಮದ ಶೋಧನೆಯಲ್ಲಿ ಆಧುನಿಕ-ಮಾನವ" ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ:

"ಜಗತ್ತು ಎಳೆಯದಿದ್ದಾಗ ಜನತೆಯ ಅನುಭವದ ಜ್ಞಾನ ಈ ಮೂಢನಂಬಿಕೆಗಳಲ್ಲಿ ಶೇಖರಿತವಾಗಿತ್ತು. ಅವು ಸುಳ್ಳು ಎಂದು ನಮಗೆ ಇಂದು ಅನಿಸಿದರೂ, ಆ ನಂಬಿಕೆಗಳ ಮೂಲವು ಜೊಳ್ಳಾದರೂ ಸಹ ಅವುಗಳಲ್ಲಿ ಅಡಕವಾದ ತರ್ಕಬದ್ಧತೆಯ ಗುಣವನ್ನು ಅಲ್ಲಗಳೆಯಲಾಗದು. ಆದಕ್ಕಾಗಿ ಅನಾಗರಿಕ ಜನರಿಗೆ ಕೃತಜ್ಞರಾಗಿರುವುದರ ಬದಲು ತಿರಸ್ಕಾರ ಹಾಗು ಅಪಹಾಸ್ಯ ಮಾಡುವುದು ನಮ್ಮ ಪದ್ಧತಿಯಾಗಿದೆ." "ಕಾಡು ಜನರ ನಂಬುಗೆಗಳನ್ನು ಸತ್ಯಶೋಧನೆಯಲ್ಲಿ ಅಪರಿಹಾರ್ಯವಾಗಿದ್ದ ತಪ್ಪುಗಳೆಂದು ಸಹಾನುಭೂತಿಯಿಂದ ನೋಡಬೇಕು" ಎಂದು ಸರ್ ಜೇಮ್ಸ್ ಫ್ರೇಸರ್ ತಮ್ಮ ಪ್ರಖ್ಯಾತವಾದ "ಚಿನ್ನದ ಟೊಂಗೆ" "The Golden Bough" ಎಂಬ ಗ್ರಂಥದಲ್ಲಿ ಹೇಳುತ್ತಾರೆ.

೪ ಮಾಟಗಳ ಪ್ರಪಂಚ

ಪ್ರಾಚೀನ ಮಾನವನ ಪದ್ಧತಿಗಳನ್ನು ಬಹುಮಟ್ಟಿಗೆ ಉಳಿಸಿಕೊಂಡ ಕಾಡುಜನಾಂಗಗಳ ಆಚರಣೆಯಿಂದ ಅವರ ಪ್ರಾಚೀನ ಜೀವನದ ಕಲ್ಪನೆಯನ್ನೂ ಕೆಲಮಟ್ಟಿಗೆ ಮಾಡಿಕೊಳ್ಳ ಬಹುದು. ಅವರು ತಮ್ಮ ಅನೇಕ ಸಾಂಘಿಕವಾದ ಚಟು-ವಟಿಕೆಗಳಲ್ಲಿ ತಮ್ಮ ನಂಬಿಕೆಗಳ ಆಚರಣೆಗಳನ್ನು ಪ್ರಕಟಿಸು-ತ್ತಾರೆ. ಅವರ ಬೇಟೆ, ಬೇಟ, ಆಟ, ಊಟ, ನಿದ್ರೆ, ಮರಣ-ಜೀವನದಲ್ಲೆಲ್ಲ ಮಾಟದ ಪ್ರಭಾವವಿದೆ. ಮಾಟದಿಂದ ನಿಸರ್ಗದ ಅದೃಶ್ಯ ಶಕ್ತಿಗಳನ್ನು ತಮಗನುಕೂಲವಾಗಿ ಪರಿ-ವರ್ತಿಸಿಕೊಳ್ಳುವ, ಅಥವಾ ಅವನ್ನು ಬೆದರಿಸಿ ಅವುಗಳಿಂದಾಗುವ ಅಪಾಯವನ್ನು ತಪ್ಪಿಸಿಕೊಳ್ಳುವ ಹಲವು ಆಚರಣೆಗಳಿವೆ. ವೈರಿಗಳನ್ನು ನಾಶಮಾಡುವದಕ್ಕೂ ಮಾಟ, ಮೋಡಿಗಳನ್ನು ಉಪಯೋಗಿಸುವ ಕ್ರಮವಿದೆ. ಮಾಟಗಳನ್ನು ಮಾಡಿ ಭೂತ-ಗಳನ್ನು ಉಚ್ಚಾಟನೆ ಮಾಡುವ ಹಾಗೂ ಅವುಗಳನ್ನು ಇತರರ ಮೇಲೆ ಬಿಡುವ ಕ್ರಮಗಳನ್ನು ಪಂಗಡದಲ್ಲಿ ಕೆಲ ವಿಶಿಷ್ಟ ಜನರು ಅನುಸರಿಸಿ ಸಮಾಜದಲ್ಲಿ ತುಂಬಾ ಮಹತ್ವ-ವನ್ನು ಹೊಂದುತ್ತಿದ್ದರು. ಮಳೆಯನ್ನು ತರಿಸುವ ವಿಧಾನ-ವನ್ನು ಬಲ್ಲವರೂ ಅಧಿಕಾರದಲ್ಲಿ ಬರುತ್ತಿದ್ದರು. ಅನೇಕ ಕಡೆಗಳಲ್ಲಿ ಪುರೋಹಿತ ಅಥವಾ ಭೂತವೈದ್ಯನಾಗಿದ್ದವನೇ

ರಾಜನಾಗಿರುತ್ತಿದ್ದನೆಂದು ಸರ್ ಜೇಮ್ಸ್ ಫ್ರೇಸರ್ ಹೇಳು-ತ್ತಾರೆ. ಈಗಲೂ ಮಾಟದ ಶಕ್ತಿಯ ಮೂಲಕವೇ ಮೆಲ-ನೀಶಿಯಾ ಮತ್ತು ಉತ್ತರನೈಲನದಿಯ ಪಂಗಡಗಳವರು ತಮ್ಮ ನಾಯಕನ ಆಯ್ಕೆಯನ್ನು ಮಾಡುತ್ತಾರೆ. ಮಾಟದಲ್ಲಿ, ಮಳೆತರಿಸುವಲ್ಲಿ ಅಯಶಸ್ವಿಯಾದವನನ್ನು ಕೊಂದುಹಾಕಲು ಹಿಂದೆಮುಂದೆ ನೋಡುವದಿಲ್ಲ.

ಮಾಟವು ಅವಲಂಬಿಸುವ ವಿಚಾರವನ್ನು ವಿವೇಚಿ-ಸಿದರೆ ಬಹುಶಃ ಎರಡು ರೀತಿಗಳಲ್ಲಿ ನಿಶ್ಚಿತವಾಗುವುದು ಎಂದು ಫ್ರೇಸರರು ಹೇಳುತ್ತಾರೆ. ಮೊದಲನೆಯದು ಸಮಾನವಾದದ್ದು ಸಮಾನವಾದುದನ್ನು ಉಂಟುಮಾಡುತ್ತದೆ ಅಥವಾ ಕಾರ್ಯವು (ಪರಿಣಾಮವು) ಕಾರಣವನ್ನು ಹೋಲುತ್ತದೆ ಎಂಬುದು. ಎರಡನೆಯದು ಒಮ್ಮೆ ಪರಸ್ಪರ ದೈಹಿಕ ಸಂಪರ್ಕವನ್ನು ಪಡೆದ ವಸ್ತುಗಳು ಆ ಸಂಪರ್ಕ ತಪ್ಪಿದ ಮೇಲೆಯೂ ದೂರ ಇದ್ದರೂ ಪರಿಣಾಮ ಮಾಡುವವು ಎಂಬುದು. ಮೊದಲನೆ-ಯದು ಸಾದೃಶ್ಯತತ್ವ (Law of Similarity) ಎರಡನೆ-ಯದು ಸಾಂಸರ್ಗಿಕತತ್ವ (Law of contagion) ಎನ್ನ ಬಹುದು. ಮೊದಲನೆಯ ಸಾದೃಶ್ಯತತ್ವದ ಪ್ರಕಾರ ಯಾವದೇ ಪರಿಣಾಮವನ್ನು ಅದರ ಅನುಕರಣ ಮಾತ್ರದಿಂದಲೇ ಉಂಟು-ಮಾಡಬಹುದು. ಎರಡನೆಯ ತತ್ವದ ಪ್ರಕಾರ ಮಾಟಗಾರನು ಯಾನೊಬ್ಬನ ಸಂಪರ್ಕವನ್ನು ಹೊಂದಿದ್ದ ವಸ್ತುವನ್ನು, ಅದು ಆತನ ದೇಹದ ಭಾಗ (ಕೂದಲು, ಹಲ್ಲು ಇತ್ಯಾದಿ) ವಾಗಿದ್ದ-ದ್ದಾಗಿರಲಿ, ಅಥವಾ ಉಪಯೋಗಿಸಿದ ವಸ್ತುವಾಗಲಿ, ತನ್ನ

ಮಾಟಕ್ಕೊಳಪಡಿಸಿ ಅದರ ಮೇಲೆ ಮಾಡುವ ಕ್ರಿಯೆಗಳು ಆ ಮನುಷ್ಯನ ಮೇಲೆ ಸಹ ಸಮಾನವಾದ ಪರಿಣಾಮ ಮಾಡುವವು. ಸಾಂಸರ್ಗಿಕ ತತ್ವದ ಮೇಲೆ ಅವಲಂಬಿಸಿ ಮಾಡುವ ಮೋಡಿ (Charm) ಯನ್ನು ಸಾಂಸರ್ಗಿಕ ತಂತ್ರ (Contagious magic) ಎಂದೆನ್ನಬಹುದು.

ಇವುಗಳಲ್ಲಿ ಮೊದಲನೆಯ ಪ್ರಕಾರವನ್ನು ಸಮಾನ ಪ್ರವರ್ತಕತಂತ್ರ (Homoeopathic Magic) ಎಂದು ಕರೆಯುವುದು ಮೇಲು ಎಂದು ಫ್ರೇಸರನ ಅಭಿಪ್ರಾಯ. ಈ ಎರಡೂ ತರದ ಮಾಟಗಳು ಮನುಷ್ಯನ ಮೇಲೆ ಮಾತ್ರ ಪರಿಣಾಮ ಮಾಡುವದಿಲ್ಲ. ಜಗತ್ತಿನಲ್ಲಿ ಸಾರ್ವತ್ರಿಕವಾಗಿ ಪರಿಣಾಮ ಮಾಡುತ್ತವೆಯೆಂದು ಮಾಟಗಾರರು ನಂಬುತ್ತಾರೆ.

ಸಮಾನ ಪ್ರವರ್ತಕ ತಂತ್ರದ ಬಹು ಪರಿಚಿತವಾದ ಉದಾಹರಣೆಯೆಂದರೆ ಅನೇಕ ಶತಮಾನಗಳ ಹಿಂದಿನಿಂದಲೂ ತಮ್ಮ ವೈರಿಗಳನ್ನು ನಾಶಮಾಡಲು ವೈರಿಗಳ ಪ್ರತಿಮೆಗಳನ್ನು ಮಾಡಿಕೊಂಡು ಅವಕ್ಕೆ ಧಕ್ಕೆ ತಂದಾಗಲಿ ನಾಶಮಾಡಿಯಾಗಲಿ ಅದರಿಂದ ಆ ಪ್ರತಿಮೆಗಾದ ಗತಿಯೇ ತಮ್ಮ ವೈರಿಗೂ ಬರುವದು, ಎಂತಲೂ, ಪ್ರತಿಮೆ ನಾಶವಾದಾಗ ವೈರಿಯೂ ಸಾಯುವನು ಎಂಬ ನಂಬಿಗೆಯಿಂದಲೂ ಕಾರ್ಯಪ್ರವೃತ್ತ-ರಾಗುವುದು. ಈಗಲೂ ಆಫ್ರಿಕಾ, ಆಸ್ಟ್ರೇಲಿಯಾ, ಸ್ಕಾಟಲಂಡ ಗಳಲ್ಲಿ ಈ ಪದ್ಧತಿ ಪ್ರಚಾರದಲ್ಲಿದೆ. ಉಸುಬು, ಆರ್ಲು (clay), ಬೂದಿಗಳಲ್ಲಿ ಒಬ್ಬನ ಆಕೃತಿಯನ್ನು ಬರೆದು ಅದಕ್ಕೆ

ಹರಿತವಾದ ಆಯುಧದಿಂದ ಚುಚ್ಚುವ ಪರಿಪಾಠವಿದೆ. ಕಟ್ಟಿಗೆಯ ಗೊಂಬೆಗಳನ್ನು ಮಾಡಿ ಪೆರೂ ದೇಶದ ಇಂಡಿಯನ್ನರು ಅವನ್ನು ಸುಡುವರು.

ಬ್ರಿಟಿಶ್ ಕೊಲಂಬಿಯಾದ ಇಂಡಿಯನ್ನರು ಸಮುದ್ರದಲ್ಲಿ ತಮ್ಮ ಪ್ರದೇಶದಲ್ಲಿ ಮೀನುಗಳು ಬಾರದಿದ್ದರೆ ಮೀನಿನ ಆಕಾರವನ್ನು ಮಾಡಿ ಸಮುದ್ರದಲ್ಲಿ ಬಿಡುವರು. ಅದರಿಂದ ಅವರು ಮೀನುಗಳು ಅಲ್ಲಿ ಬರುವವೆಂದು ನಂಬುತ್ತಾರೆ. ಬಂಜೆಯಾದವಳು ಕಟ್ಟಿಗೆಯ ಗೊಂಬೆಯನ್ನು ತೊಡೆಯ ಮೇಲೆ ಇಟ್ಟುಕೊಳ್ಳುತ್ತಾಳೆ. ಬೋರ್ನಿಯೋದ ಡಯಾಕ ಜನರಲ್ಲಿ ಹಡೆಯುವ ಹೆಂಗಸು ಸುಲಭವಾಗಿ ಹಡೆಯಬೇಕೆಂದು ಅವಳ ಅವಸ್ಥೆಯನ್ನು ಅನುಕರಿಸುವ ವಿಧಾನವಿದೆ. ಒಳಗೆ ಅವಳ ಹತ್ತಿರ ಒಬ್ಬನು ಅವಳ ಹೊಟ್ಟೆಯನ್ನು ನೇವರಿಸುತ್ತ ಶಿಶು ಕೆಳಗೆ ಬರುವದಕ್ಕೆ ಅನುಕೂಲವಾದ ಸೇವೆಯನ್ನು ಮಾಡುವನು. ಹೊರಗೆ ಒಬ್ಬನು ತನ್ನ ಹೊಟ್ಟೆಯ ಮೇಲೆ ವಸ್ತ್ರದಲ್ಲಿ ದೊಡ್ಡ ಕಲ್ಲನ್ನು ಸುತ್ತಿಕೊಂಡು ತನ್ನ ಜೊತೆಗಾರನು ಒಳಗಿನಿಂದ ತಿಳಿಸಿದ ಸೂಚನೆಯಂತೆ ತನ್ನ ನಟನೆಯ ಶಿಶು-ವನ್ನು ನಿಜವಾದ ಶಿಶುವಿನಂತೆ ಚಲನೆ ಮಾಡಿಸುತ್ತಾನೆ. ಒಳಗೆ ಹಡೆಯಲಿಕ್ಕೆ ಕುಳಿತವಳು ಚಡಪಡಿಸುವಂತೆಯೇ ತಾನೂ ವೇದನೆಯಿಂದೆಂಬಂತೆ ಕೂಗುತ್ತಾನೆ. ಈ ಕಲ್ಲಿನ ಶಿಶುವನ್ನು ತಿರುಗಿಸಿ ಕೆಳಕೆ ತಂದು ಹೊರಕ್ಕೆ ಬಿಟ್ಟರೆ ಬಸುರಿಯ ಹೊಟ್ಟೆಯ ಶಿಶುವೂ ಹಾಗೆಯೇ ಕೆಳಗೆ ಬಂದು

ಸುಲಭವಾಗಿ ಪಡೆಯಲು ಸಹಾಯವಾಗುವದೆಂದು ಹಾಗೆ ನಟಿಸುತ್ತಾರೆ.

ವಶೀಕರಣದ ಸಲುವಾಗಿ ಮಾಟದ ಗೊಂಬೆಗಳನ್ನು ಪಯೋಗಿಸುವದುಂಟು. ಅರ್ಲಿನ ಗೊಂಬೆಯ ಹೃದಯ ಭಾಗಕ್ಕೆ ಬಾಣ ಹೊಡೆದರೆ ಹೆಂಗಸು ವಶಳಾಗುವಳು. ಆದರೆ ಬಿಲ್ಲಿನ ಹೆದೆ ಪುಂಡಿಸಾರಿಣಿಂದಲೆ ಮಾಡಿದ್ದಿರಬೇಕು.

ಜೋಡು ಬಾಳೆಹಣ್ಣು ತಿಂದರೆ ಅವಳಿ ಮಕ್ಕಳಾಗುವವೆಂಬ ಕಲ್ಪನೆ ನಮ್ಮಕಡೆ ಇದೆ. ಗಲಿಲಾರೀಸ ಜನರಲ್ಲಿ ತನ್ನ ಪ್ರಿಯಕರಳನ್ನು ಸಂಧಿಸಲು ಹೋಗುವವನು ಅವಳ ಮನೆಯ ಚಪ್ಪರದ ಮೇಲೆ ಮಣ್ಣು ಹಾಕುವದರಿಂದ ಅವಳ ತಂದೆ-ತಾಯಿ ಮಣ್ಣಿನ ಹಾಗೆಯೆ ನಿಶ್ಚೇತನ ಹೊಂದಿದವರಂತೆ ಮಲಗಿದ್ದು ಎಚ್ಚರ ಹೊಂದುವದಿಲ್ಲವೆಂದು ತಿಳಿಯುತ್ತಾನೆ. ಸ್ಮಶಾನದ ಮಣ್ಣನ್ನು ಕಳ್ಳರು ಉಪಯೋಗಿಸುತ್ತಾರೆ. ಅದರಿಂದ, ನಿದ್ರಿಸಿದ್ದವರು ಸತ್ತವರಂತೆಯೇ ಮಲಗಿರುವರೆಂಬುದು ಅವರ ನಂಬಿಕೆ.

ಒಂದು ಸಲ ಸಂಪರ್ಕ ಹೊಂದಿದ ವಸ್ತುಗಳು ಸಂಪರ್ಕ ತಪ್ಪಿದ ಮೇಲೆಯೂ ಸಂಪರ್ಕದ ಪರಿಣಾಮವನ್ನು ತೋರಿಸುವವೆಂಬ ನಂಬಿಕೆಯಿಂದ ಸಾಂಸರ್ಗಿಕ ತಂತ್ರದ ಆಚರಣೆಯನ್ನು ಮಾಡುತ್ತಾರೆ. ಮನುಷ್ಯನ ಹಲ್ಲು. ಕೂದಲು, ಉಗುರುಗಳನ್ನು ತೆಗೆದು ಹಾಕಿದ ಮೇಲೆಯೂ ಅವುಗಳ ಮಾಟದ ಸಂಬಂಧ ಆತನಿಗೆ ಇದೆಯೆಂದು ತಿಳಿಯುತ್ತಾರೆ. ಈ ಮೂಢನಂಬಿಕೆ ಸಾರ್ವತ್ರಿಕವಾಗಿದೆ. ಇಂಗ್ಲಂಡದ ಸಸೆಕ್ಸಪ್ರಾಂತ-

ದಲ್ಲಿ ಚಿಕ್ಕಮಕ್ಕಳ ಬಿದ್ದ ಹಲ್ಲುಗಳನ್ನು ಒಗೆಯಬಾರದೆಂದು ಒಬ್ಬ ಹೆಂಗಸು ಬಲವಾಗಿ ಪ್ರತಿಪಾದಿಸುತ್ತಿದ್ದಳು. ಯಾವು-ದಾದರೂ ಪ್ರಾಣಿಯು ಅವುಗಳನ್ನು ನುಂಗಿದರೆ ಆ ಚಿಕ್ಕ ಮಕ್ಕಳಿಗೆ ಹೊಸದಾಗಿ ಹುಟ್ಟುವ ಹಲ್ಲುಗಳು ಆ ಪ್ರಾಣಿಯ ಹಲ್ಲುಗಳ ಆಕಾರ ಹೊಂದುವವೆಂದು ಅವಳ ಹೇಳಿಕೆ. ಸಿಮನ್ಸ್ ಎಂಬ ಹೆಸರಿನ ಒಬ್ಬ ಮನುಷ್ಯನಿಗೆ ಹಂದಿಯ ಹುಲ್ಲುಗಳ ಹಾಗೆ ದೊಡ್ಡ ಹಲ್ಲು ಇದ್ದುವಂತೆ. ಆತನ ತಾಯಿಯು ಹಂದಿ ಗಳ ಹಕ್ಕೆಯಲ್ಲಿ ಆತನ ಬಿದ್ದ ಹಲ್ಲನ್ನು ಒಗೆದ ಮೂಲಕವೇ ಆತನಿಗೆ ಅಂಥ ಹಲ್ಲು ಬಂದವಂತೆ. ಬಿದ್ದ ಹಲ್ಲುಗಳನ್ನು ಇಲಿಯ ಬಿಲದಲ್ಲಿ ಇಟ್ಟು ಇಲಿ ಅದನ್ನು ನುಂಗಿದರೆ ಇಲಿಯ ಹಲ್ಲುಗಳಂಥ ಹಲ್ಲುಗಳು ಬರುವವೆಂದು ಜರ್ಮನಿಯಲ್ಲಿ ನಂಬಿಕೆ ಯಿದೆ. ನಮ್ಮ ಕಡೆ ಬಿದ್ದ ಹುಲ್ಲುಗಳನ್ನು ತೆಂಗಿನ ಮರದ ರಂಧ್ರದಲ್ಲಿಡಬೇಕೆಂದು ಹೇಳುತ್ತಾರೆ. ಇಲ್ಲದಿದ್ದರೆ ಸುಂದರವಾದ ಹುಲ್ಲುಗಳು ಹುಟ್ಟುವದಿಲ್ಲವಂತೆ. ಹೊಕ್ಕುಳನಾಳವನ್ನು ನೀರಿ ನಲ್ಲಿಟ್ಟರೆ ಮಾತ್ರ ಮುಂದೆ ದೊಡ್ಡವರಾದ ಮೇಲೆ ಈಸಾಡಲು ಬರುವುದೆಂದು ಆಸ್ಟ್ರೇಲಿಯಾದ ಕೆಲ ಪಂಗಡಗಳ ನಂಬಿಗೆ. ಹೊಕ್ಕುಳನಾಳ ಹಾಳಾದರೆ ಅವನತಿ ಎಂಬ ಕಲ್ಪನೆ ಕೆಲವ ರಲ್ಲಿದೆ. ಹೊಕ್ಕುಳ ನಾಳ ಹುಗಿದ ಜಾಗದ ಬಗ್ಗೆ ಆತ್ಮೀಯತೆ ಪ್ರತಿಯೊಬ್ಬನಿಗಿರುವದೆಂದು ನಮ್ಮಲ್ಲಿ ನಂಬುತ್ತಾರೆ.

ಗಾಯವಾದರೆ ಗಾಯಮಾಡಿದ ಆಯುಧಕ್ಕೂ ಗಾಯ-ವಾದ ಮನುಷ್ಯನಿಗೂ ಸಂಬಂಧ ಕಲ್ಪಿಸುತ್ತಾರೆ. ಯುರೋಪಿನಲ್ಲಿ

ಕತ್ತಿಯಿಂದ ಗಾಯವಾದರೆ ಗಾಯಕ್ಕೆ ಚಿಕಿತ್ಸೆ ಮಾಡದೆ ಕತ್ತಿಗೆ ಚಿಕಿತ್ಸೆ ಮಾಡುವದಕ್ಕೂ ಇದೇ ಕಾರಣವಿರಬೇಕು. ಇಂಗ್ಲಂಡಿನ ಸಫ್ಫೋಕ್ ಪ್ರಾಂತದಲ್ಲಿ ಕತ್ತಿಯಿಂದ ಗಾಯವಾದರೆ ಗಾಯಕ್ಕೆ ರಸಿಕೆಯಾಗಬಾರದೆಂದು ಕತ್ತಿಯನ್ನು ತಿಕ್ಕಿ ಹೊಳಪುಮಾಡುತ್ತಾರಂತೆ. ಆಸ್ಟ್ರೇಲಿಯಾ ಹಾಗೂ ಯುರೋಪಗಳಲ್ಲಿ ಒಬ್ಬನ ಹೆಜ್ಜೆಯ ಗುರುತಿಗೆ ಮೊಳೆ ಚುಚ್ಚಿದರೆ ಆತನಿಗೆ ಸಂಧಿವಾತವಾಗುವದೆಂಬ ನಂಬಿಕೆಯಿದೆ. ಆದುದರಿಂದ ಕೆಲವು ಪಂಗಡಗಳವರು ತಮ್ಮ ಹೆಜ್ಜೆಗಳ ಗುರುತುಗಳನ್ನು ಅಳಿಸಿಯೇ ಮುಂದೆ ಹೋಗುವರು.

೫ ನಿಸರ್ಗ ವ್ಯಾಪಾರ ನಿಯಂತ್ರಣ

ಇಂದಿಗೂ ಜಗತ್ತಿನ ಬಹುಭಾಗದ ಜನರು ಮಾಟದಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ನಿಸರ್ಗದ ಶಕ್ತಿಗಳನ್ನು ತಮ್ಮ ಅನುಕೂಲಕ್ಕೆ ತಿರುಗಿಸಿಕೊಳ್ಳುವ ಜಾದೂಗಾರರು ಮಾಟದ ವಿಧಾನಗಳು ಪ್ರಯೋಗವಾಗುತ್ತವೆ. ಜನರ ಕ್ಷೇಮಸಾಧನೆಗಾಗಿ ಮಳೆಯು ಸರಿಯಾಗಿ ನಡೆಸಿಕೊಳ್ಳುವುದು ಬಹಳ ಅಗತ್ಯವಾಗಿದೆ. ಆದ್ದರಿಂದ ಮಳೆ ಬೀಳದಿದ್ದರೆ ಅನೇಕ ಮಾಟದ ವಿಧಾನ ನಡೆಸುವುದು ಎಲ್ಲ ಕಡೆ ಪ್ರಚಲಿತವಿದೆ. ರಶಿಯದ ಡೊರ್ಪಾಟ್ ಎಂಬ ಹಳ್ಳಿಯಲ್ಲಿ ಮಳೆ ತರಿಸುವುದಕ್ಕಾಗಿ ಮೂರು ಜನರು ಫರ್‌ವೃಕ್ಷ ಹತ್ತಿಕೊಳ್ಳುತ್ತಾರೆ. ಅವರಲೊಬ್ಬನು ಪಾತ್ರೆಗಳನ್ನು ಬಡಿದು ಗುಡುಗಿನ ಅನುಕರಣ ಮಾಡುವನು. ಎರಡನೆಯವನು ಎರಡು ಕೆಂಡಗಳನ್ನು ಕುಟ್ಟಿ ಕಿಡಿಹಾರುವಂತೆ ಮಾಡಿ ಮಿಂಚಿನ ಅನುಕರಣ ಮಾಡುವನು. ಮೂರನೆಯವನು ಕೆಲ ಟೊಂಗೆಗಳನ್ನು ಕೂಡಿಸಿ ಒಂದು ಪಾತ್ರೆಯಿಂದ ನೀರನ್ನು ಟೊಂಗೆಗಳಿಂದ ಸುತ್ತೆಲ್ಲ ಚಿಮುಕಿಸುವನು. ಓರಿನೋಕೋದ ಇಂಡಿಯನರು ಬಾಲಗಪ್ಪೆ ನೀರಿನ ದೇವತೆಯೆಂದು ನಂಬುತ್ತಿದ್ದರು. ಅದನ್ನು ಕೊಲ್ಲಲು ಹೆದರುತ್ತಿದ್ದರು. ನಮ್ಮಲ್ಲಿಯೂ ಕಪ್ಪೆಗಳನ್ನು ಕೊಲ್ಲುವದು ನಿಷಿದ್ಧ. ಗೋಕರ್ಣದಲ್ಲಿ ಮಳೆಯು ಬಹಳದಿನ

ಬಾರದಿದ್ದರೆ ಇಂದ್ರನ ಮೂರ್ತಿಯ ಕಣ್ಣಿಗೆ ಮೆಣಸಿನ ಪುಡಿ ಹಾಕಿ ಅದನ್ನು ಬಿಸಿಲಿನಲ್ಲಿ ಇಡುತ್ತಾರೆ. ಆಸ್ಟ್ರೇಲಿಯದ ಡೀರಿ ಜನರು ಶರೀರದಲ್ಲಿ ಗಾಯ ಮಾಡಿಕೊಂಡು "ಮುರ-ಮುರ" ಎಂಬ ದೇವತೆಗೆ ರಕ್ತದ ಬಲಿಕೊಡುತ್ತಾರೆ. ರಕ್ತ ಬೀಳು-ವುದು ಮಳೆಯ ಅನುಕರಣವಾಗಿರಬಹುದು. ಅನೇಕ ಕಾಡು ಜನರಲ್ಲಿ ಪರಂಪರೆಯ ರಹಸ್ಯ ವಿಧಾನಗಳಿಂದ ಮಳೆಯನ್ನು ತರಿಸುವ ಕುಟುಂಬಗಳಿವೆ. ತಲೆಯ ಮೇಲೆ ಹತ್ತಿಪ್ಪತ್ತು ಫೂಟು ಉದ್ದವಾದ ಟೊಪ್ಪಿಗೆ ಧರಿಸಿಕೊಂಡು ನರ್ತನಮಾಡುವ ವಿಧಾನವೂ ಕೆಲ ಕಡೆ ಇದೆ. ನೀರಿನಲ್ಲಿ ಮುಳುಗುವ, ಜಲಕ್ರೀಡೆ ಮಾಡುವ ವಿಧಾನಗಳೂ ರಶ್ಯಾ, ಸಿಲೆಬಸ್ ಹಾಗು ಉತ್ತರ ಆಫ್ರಿಕಾಗಳಲ್ಲಿವೆ. ಜಾಳಿಗೆಗಳಿಂದ ನೀರು ಹರಿಸುವುದು ಮಳೆ ತರಿಸುವ ಮತ್ತೊಂದು ವಿಧಾನ.

ಮಳೆಯನ್ನು ನಿಲ್ಲಿಸಲು ಅನೇಕ ಜನಾಂಗಗಳಲ್ಲಿ ಬೆಂಕಿಯ ಉಪಯೋಗ ಮಾಡುತ್ತಾರೆ. ನ್ಯೂ ಬ್ರಿಟನ್ನಿದ ಸಲ್ಕಾ ಜನ ಕಲ್ಲುಗಳನ್ನು ಕೆಂಪಗೆ ಕಾಸಿ ಮಳೆಯಲ್ಲಿಡು-ತ್ತಾರೆ, ಅಥವಾ ಬಿಸಿಬೂದಿಯನ್ನು ಚಲ್ಲುತ್ತಾರೆ. ಅವುಗಳಿಂದ ಸುಟ್ಟುಕೊಳ್ಳಲು ಆಶಿಸದೆ ಮಳೆ ನಿಲ್ಲುವುದೆಂದು ಅಥವಾ ಅವುಗಳಿಂದ ಸ್ವಲ್ಪ ಮಳೆನೀರು ಆರಿದಂತೆ ಪೂರ್ಣ ಮಳೆಯೂ ನಿಲ್ಲುವುದೆಂಬ ಕಲ್ಪನೆಯಿರಬಹುದು. ತೆಲುಗರಲ್ಲಿ ಬೆತ್ತಲೆಯಾದ ಸಣ್ಣ ಹುಡುಗಿಯನ್ನು ಉರಿಯುವ ಕೊಳ್ಳಿ ಹಿಡಿಸಿ ಮಳೆಯಲ್ಲಿ ಕಳಿಸುತ್ತಾರೆ. ಬೆತ್ತಲೆ ಹೆಂಗಸರು ಆಕಾ-ಶಕ್ಕೆ ಬೆಂಕಿಯನ್ನು ತೂರಿದರೆ ೧೨ ವರ್ಷ ಮಳೆ ಬರುವದಿಲ್ಲ–

ವೆಂದು ಧಾರವಾಡ ಜಿಲ್ಲೆಯ ಕುಂದಗೋಳದ ಜನರಲ್ಲಿ ಹೇಳಿಕೆಯಿದೆ.

ನ್ಯೂಗಿನಿಯ ಬಿಬಿಲಿ ದ್ವಿಪದ ಜನ ಗಾಳಿ ಬೀಸುವಂತೆ ಮಾಡಲು ಬಾಯಿಯಿಂದ ಹವೆ ಊದುತ್ತಾರೆ. ಕೆಲ ಜನಾಂಗಗಳವರು ಸಿಳ್ಳು ಹಾಕಿದರೆ ಗಾಳಿ ಬೀಸುವುದೆಂದು ತಿಳಿಯುತ್ತಾರೆ. ಗ್ರಾನ್ ಚಾಕೋದ ಲೆಂಗುವಾ ಇಂಡಿಯನ್ನರು ಸುಂಟರಗಾಳಿ ಬಂದರೆ ಭೂತದ ಚಲನ ಎಂದು ತಿಳಿಯುತ್ತಾರೆ. ದಕ್ಷಿಣ ಅಮೇರಿಕದ ಪಯುಗುವಾ ಜನರು ಬೆಂಕಿ ಕೊಳ್ಳಿ ಹಿಡಿದು ಬಿರುಗಾಳಿಯ ಮೇಲೇರಿ ಹೋಗುತ್ತಾರೆ.

ಅಜ್ಞಾನದ ಮೂಲಕ ಮನುಷ್ಯನ ಭೀತಿ ನಾನಾತರದ ಕಲ್ಪನೆಗಳಿಗೆ ಎಡೆ ಕೊಡುತ್ತದೆ. ಸೂರ್ಯಗ್ರಹಣ, ಚಂದ್ರಗಹಣಗಳಲ್ಲಿ ಸೂರ್ಯ-ಚಂದ್ರರು ನಾಶವಾಗಿ ಹೋಗಬಹುದೆಂಬ ಭಯ ಅನೇಕ ಪ್ರಾಚೀನ ಜನಾಂಗಗಳಿಗಿದ್ದಿರಬೇಕು. ಹಾಗಾದರೆ ಆಗುವ ಕಷ್ಟಗಳನ್ನು ತಪ್ಪಿಸಲು ಪ್ರಾಚೀನ ಮಾನವರು ತಮ್ಮ ಪ್ರಯತ್ನಗಳನ್ನು ಮಾಡಿರಬೇಕು. ಕೆಲ ಕಾಡು ಜನಾಂಗಗಳವರು ಸೂರ್ಯಗ್ರಹಣದಲ್ಲಿ ಸೂರ್ಯನ ಪ್ರಕಾಶವು ನಂದಿದರೂ ಪುನಃ ಹೊತ್ತಿಕೊಳ್ಳಲೆಂದು ಬಾಣಗಳಿಗೆ ಬೆಂಕಿಯನ್ನು ಕಟ್ಟಿ ಮೇಲೆ ಬಿಡುತ್ತಾರೆ. ಸುಮಾತ್ರಾದಲ್ಲಿ ಗ್ರಹಣದಲ್ಲಿ ಸೂರ್ಯ-ಚಂದ್ರರು ಪರಸ್ಪರ ನುಂಗುವುದನ್ನು ತಪ್ಪಿಸಲು ಭೇರಿಗಳನ್ನು ಬಡಿದು ದೊಡ್ಡ ಶಬ್ದ ಮಾಡುತ್ತಾರೆ. ಹೀಗೆ ಮಾಡುವುದರಿಂದ ಕಷ್ಟಗಳನ್ನು ತಪ್ಪಿಸಿಕೊಳ್ಳುವೆವೆಂದಾಗಲಿ ಅನಿಷ್ಟ ಕಡಿಮೆಯಾಗುವುದೆಂದಾಗಲಿ

ಅನಾಗರಿಕ ಜನರು ತಿಳಿದಿದ್ದಿರಬೇಕು. ಬೌದ್ಧಿಕ ದೃಷ್ಟಿಯಿಂದ ಎಷ್ಟೋ ವಿಷಯಗಳಲ್ಲಿ ಬಾಲ್ಯಾವಸ್ಥೆಯಲ್ಲಿದ್ದ ಪ್ರಾಚೀನ ಮಾನವ ತನ್ನ ಇಂಥ ಕ್ರಮಗಳಿಂದ ತಾನು ನಿಸರ್ಗದಲ್ಲಿರುವ ಶಕ್ತಿಗಳನ್ನು ಮತ್ತು ಪ್ರತ್ಯಕ್ಷ ನಿಸರ್ಗವ್ಯಾಪಾರಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬಲ್ಲೆನೆಂದು (ಬಾಲಕರು ನಂಬಿ ನಟಿಸುವ ಹಾಗೆ) ನಂಬಿ ಅನೇಕ ಮಾಟಗಳನ್ನು ಕಲ್ಪಿಸಿ-ಕೊಂಡಿರಬೇಕು. ಸರ್ಕಸ್ಸಿನ ಹಾಸ್ಯಗಾರನು ಪ್ರೇಕ್ಷಕರನ್ನು ನಗಿಸುವುದಕ್ಕೆ ಮಾಡಿದಂತೆ ಕೋಟು, ಪ್ಯಾಂಟು, ಹ್ಯಾಟು-ಗಳನ್ನು ತಿರುವು ಮರುವಾಗಿ ಹಾಕಿಕೊಂಡರೆ ಭೂತಗಳು ತಿರುಗಿ ಹೋಗುವವೆಂಬ ನಂಬಿಕೆಯಿಂದ ಅಮೇರಿಕಕ್ಕೆ ಆಫ್ರಿಕ-ದಿಂದ ವಲಸೆಬಂದ ನಿಗ್ರೋಜನರು ಉಡುಪುಗಳನ್ನು ತಿರುವು ಮುರುವು ಮಾಡುತ್ತಾರೆ.

೬ ಆತ್ಮದ ಕಲ್ಪನೆ

ಅದೃಶ್ಯಶಕ್ತಿಗಳನ್ನು ಸುಲಭವಾಗಿ ನಂಬುವ ಮಾನವನು ಆತ್ಮದ ವಿಷಯದಲ್ಲಿ ಅನೇಕ ವಿಚಿತ್ರವಾದ ಕಲ್ಪನೆಗಳನ್ನು ಇಟ್ಟುಕೊಂಡಿದ್ದಾನೆ. ಸಂಸ್ಕೃತದಲ್ಲಿ 'ಅನ್' ಕ್ರಿಯಾಪದದ ಅರ್ಥ 'ಉಸಿರಾಡಿಸು' ಎಂದು ಇದೆ. ಅದರಿಂದ ಆತ್ಮ ಎಂಬ ಶಬ್ದ ಬಂದಿದೆ. ಆತ್ಮವು ಉಸಿರೆಂದು ಕೆಲವು ಜನಾಂಗಗಳವರು ಸಹಜವಾಗಿ ತಿಳಿಯುತ್ತಾರೆ. ಸೇನ್ ಕ್ರಿಸ್ಟೋವಾಲ್ ಜನರು ಆತ್ಮಕ್ಕೆ 'ಮನ' ಎಂದರೆ 'ಉಸಿರು' ಎನ್ನುತ್ತಾರೆ. 'ಮನ' ಆತ್ಮದ ಶಕ್ತಿ ಅಥವಾ ಭೂತಶಕ್ತಿ ಎಂಬರ್ಥವೂ ಇದೆ.

ಕಾಡು ಜನರು ಎಲ್ಲ ಪ್ರಾಣಿಗಳಲ್ಲಿಯೂ ಸೂಕ್ಷ್ಮ ಆಕಾರದ ಪ್ರಾಣಗಳಿವೆಯೆಂದು ತಿಳಿಯುತ್ತಾರೆ. ಮನುಷ್ಯನ ಶರೀರದ ಸೂಕ್ಷ್ಮಮಾನವ ಆತ್ಮ. ಸಾವಿನಲ್ಲಿ ಆ ಸೂಕ್ಷ್ಮ ಮಾನವ ಹೊರಟು ಹೋಗುತ್ತಾನೆ. ಆದ್ದರಿಂದ ಆ ಆತ್ಮ ಪಾರಾಗಿ ಹೋಗದಂತೆ, ಅಥವಾ ಹೋದರೂ ತಿರುಗಿ ಬರುವಂತೆ ಎಚ್ಚರಿಕೆ ತೆಗೆದುಕೊಳ್ಳಬೇಕು. ಅದು ಶರೀರದ ರಂಧ್ರಗಳಿಂದ, ವಿಶೇಷವಾಗಿ, ಬಾಯಿ, ಮೂಗುಗಳಿಂದ ಹೋಗುವುದೆಂದು ಕಲ್ಪನೆಯಿದೆ. ಸೆಲೆಬಸ್ ದ್ವೀಪದಲ್ಲಿ

ರೋಗಿಯ ಮೂಗಿಗೆ, ಕಾಲಿಗೆ, ಹೊಕ್ಕುಳಿಗೆ ಕಬ್ಬಿಣದ ಕೊಂಡಿಗಳನ್ನು ಕಟ್ಟಿಡುತ್ತಾರೆ. ಪಾರಾಗಿ ಹೋಗಲೆಳಸುವ ಆತ್ಮವನ್ನು ಹಿಡಿದಿಡಬೇಕೆಂಬ ಉದ್ದೇಶವೇ ಅದಕ್ಕೆ ಕಾರಣ. ಮಾರ್ಕ್ವೆಸಾನರು ಸಾಯುವ ಮನುಷ್ಯನ ಬಾಯಿ, ಮೂಗು-ಗಳನ್ನು ಒತ್ತಿ ಹಿಡಿಯುತ್ತಿದ್ದರು. ಸೆಲೆಬಸ್ಸಿನ ಆಲ್ ಫೋರ ಜನರಲ್ಲಿ ಹಡೆಯುವ ಮನೆಯಲ್ಲಿ ಎಲ್ಲರೂ ಬಾಯಿ ಮುಚ್ಚಿ-ಕೊಳ್ಳಬೇಕು. ಯಾರಾದರೂ ಶಿಸುವಿನ ಆತ್ಮವನ್ನು ನುಂಗ ಬಹುದೆಂಬ ಹೆದರಿಕೆಯೇ ಅದಕ್ಕೆ ಕಾರಣ. ಮೂಗನ್ನು ಮುಚ್ಚುವುದು ಏಕೆ ಅಗತ್ಯವಿಲ್ಲ ಎಂದು ಕೇಳಿದರೆ ಆ ಜನರು ಮೂಗಿನ ಮೂಲಕ ಆತ್ಮವು ಉಸಿರು ತಕ್ಕೊಳ್ಳುವಾಗ ಒಳಗೆ ಹೋದರೂ ಉಸಿರು ಬಿಡುವಾಗ ಹೊರಗೆ ಬರುವುದೆಂಬ ಸಮಾಧಾನ ಹೇಳುತ್ತಾರೆ. ನಮ್ಮ ಜನರಲ್ಲಿ ಆಕಳಿಸುವಾಗ ಬಾಯಿಗೆ ಕೈ ಹಿಡಿಯುವ ಪದ್ಧತಿಯು ಆತ್ಮವು ಹೊರಗೆ ಹೋಗಬಾರದೆಂಬ ಉದ್ದೇಶದಿಂದಲೇ ಇದ್ದಿರಬೇಕು. ಕೆಲವರು ಆಕಳಿಸುವಾಗ ಬಾಯಿ ಮುಂದೆ ಚಿಟಿಕೆ ಹೊಡೆದು ನಂತರ 'ರಾಮ ರಾಮ' ಎಂದು ಉಚ್ಚರಿಸುವರು. ಗಡುತರ ಮನುಷ್ಯರ ಆತ್ಮವು ಗಡುತರವಾಗಿಯೂ ಸೀರಾದವರ ಆತ್ಮವು ಸೀರಾಗಿಯೂ ಇರುವುದೆಂದೂ ಸಣ್ಣವರ ಆತ್ಮವು ಸಣ್ಣದೆಂದೂ ಕೆಲವು ಜನಾಂಗಗಳವರು ತಿಳಿಯುತ್ತಾರೆ. ಆತ್ಮವು ಅಂಗುಷ್ಠಮಾತ್ರ ಆಕಾರವುಳ್ಳುದೆಂದೂ ತಿಳಿಯುತ್ತಿ-ದ್ದರು.

ನಿದ್ದೆ ಮಾಡಿದಾಗ ಆತ್ಮವು ತಿರುಗಲು ಹೋಗುವು ದೆಂಬ ಕಲ್ಪನೆಯಿದೆ. ಒಂದಕ್ಕಿಂತ ಹೆಚ್ಚು ಆತ್ಮಗಳ ಕಲ್ಪನೆ-

ಯನ್ನೂ ಮಾಡುತ್ತಾರೆ. ಸ್ವಪ್ನದಲ್ಲಿ ಮಾಡಿದ ಎಲ್ಲ ಕೆಲಸಗಳನ್ನೂ ಆತ್ಮವು ನಿಜವಾಗಿ ಮಾಡಿತೆಂದು ನಂಬಿಕೆಯಿದೆ. ಸ್ವಪ್ನದಲ್ಲಿ ನಡೆದ ಎಲ್ಲ ಸಂಗತಿಗಳೂ ನಿಜವೆಂದೇ ಅನೇಕ ಅಮೇರಿಕನ್ ಇಂಡಿಯನರು ನಂಬುತ್ತಾರೆ. ಅನೇಕ ಕಾಡುಜನರಲ್ಲಿದ್ದಂತೆಯೇ ನಮ್ಮಲ್ಲಿಯೂ ನಿದ್ದೆಯಲ್ಲಿದ್ದವನನ್ನು ಒಮ್ಮೆಲೆ ಎಚ್ಚರಿಸಬಾರದು. ಯಾಕಂದರೆ ಹೊರಟುಹೋದ ಆತ್ಮ ತಿರುಗಿ ಬಂದು ಸೇರಲು ವೇಳೆ ಸಾಲದೆ ಹೋಗಬಹುದು. ಶರೀರದ ಉಡುಪನ್ನು ಬದಲಿಸಬಾರದು. ನಿದ್ದೆಯಲ್ಲಿದ್ದವನ ಮೋರೆಗೆ ಬಣ್ಣವನ್ನೂ ಬಳಿಯಬಾರದು. ಯಾಕಂದರೆ ಹೊರಗೆ ಹೋದ ಆತ್ಮವು ತಿರುಗಿ ಬಂದ ಮೇಲೆ ತನ್ನ ಶರೀರದ ಗುರತು ಹಿಡಿಯದೆ ಹೋಗಬಹುದು.

ಆತ್ಮವು ಜೇರೆ ಜೇರೆ ಪ್ರಾಣಿಗಳ ಅಥವಾ ಕೀಟಕಗಳ ರೂಪವನ್ನು ಧರಿಸಿ ಹೊರಟು ಹೋಗಬಹುದು. ಸೈಬೀರಿಯದ ಬುರ್ಯಾಟ್ ಎಂಬ ಜನರು ಆತ್ಮವು ಕಣ್ಣಿಗೆ ಕಾಣುವುದೆಂದು ತಿಳಿಯುತ್ತಾರೆ. ಸಾಮಾನ್ಯವಾಗಿ ಜೇನ್ನೊಣದ ಆಕಾರ ಹೊಂದಿದೆಯೆಂದು ತಿಳಿಯುತ್ತಾರೆ. ಜರ್ಮನಿಯಲ್ಲಿ ಆತ್ಮ ಹಕ್ಕಿ ಅಥವಾ ಇಲಿಯ ಆಕಾರದಿಂದ ನಿದ್ದೆಮಾಡುವವನ ಬಾಯಿಂದ ಹೋಗುವುದೆಂದು ತಿಳಿಯುತ್ತಾರೆ. ಶಿಶು ಬಾಯಿ ತೆರೆದುಕೊಂಡು ನಿದ್ದೆ ಮಾಡಲು ಕೊಡಬಾರದೆಂದು ನಂಬುತ್ತಾರೆ.

ಸೊಲೊಮನ್ ದ್ವೀಪಸ್ತೋಮಗಳ ಎಡ್ಡಿಸ್ಟೋನ್ ಎಂಬಲ್ಲಿ ಆತ್ಮಕ್ಕೆ 'ಗಲಗಲ' ಅಂದರೆ 'ನೆರಳು' ಎಂಬ

ಅರ್ಥದ ಶಬ್ದವಿದೆ. ಕರೇ ಸರೋವರದಲ್ಲಿ ಝುಲು ಜನರ್ರು ಇಣಿಕಿ ನೋಡುವುದಿಲ್ಲ. ಅಲ್ಲಿರುವ ಯಾವುದಾದರೂ ಪ್ರಾಣಿ ತಮ್ಮ ನೆರಳನ್ನು ನುಂಗಿದರೆ ತಾವು ಸಾಯುವೆವೆಂಬ ಹೆದರಿ-ಕೆಯೇ ಅದಕ್ಕೆ ಕಾರಣ. ಬಸುಟೋ ಜನರಲ್ಲಿ, ಮೊಸಳೆಗಳು ಮನುಷ್ಯನ ನೆರಳನ್ನು ನೀರಿನಲ್ಲಿ ಳೆದುಕೊಂಡು ಹೋಗಿ ಆತ-ನನ್ನು ಕೊಲ್ಲಬಹುದೆಂಬ ಹೆದರಿಕೆಯಿದೆ.

ಅನೇಕ ಕಾಡು ಜನ ಕೆಮರಾಕ್ಕೆ ಹೆದರುತ್ತಾರೆ. ಮೆಕ್ಸಿಕೋದ ಟಿಪಿಹುವನೆ ಜನ ಫೋಟೋ ತೆಗೆಸಿಕೊಳ್ಳಲು ಅಂಜುತ್ತಾರೆ. ಆ ಕೆಮರಾ ಪೆಟ್ಟಿಗೆಯಲ್ಲಿ ಆತ್ಮವನ್ನು ಸೆರೆ-ಹಿಡಿಯುವರೆಂಬ ಹೆದರಿಕೆ ಅನೇಕ ಜನಾಂಗಗಳಿಗಿದೆ. ಸಿಕ್ಕಿಂ ಪ್ರಾಂತದ ಜನರು ಕೆಮರಾದಲ್ಲಿ ಆತ್ಮವನ್ನು ಸೆರೆಹಿಡಿದವರು ಆತ್ಮದ ಮೇಲೆ ಅಧಿಕಾರ ನಡೆಸಬಹುದೆಂದೂ ಅದನ್ನು ಮೋಡಿ ಮಾಡಿ ಹಾಕಲೂ ಉಗಯೋಗಿಸಬಹುದೆಂದೂ ಹೆದರುತ್ತಾರೆ.

ಗ್ರೀನಲ್ಯಾಂಡಿನ ಎಸ್ಕಿಮೊ ಜನರಲ್ಲಿ ಮನುಷ್ಯನು ಶರೀರ, ಆತ್ಮ, ಹೆಸರು ಈ ಮೂರು ಘಟಕಗಳಿಂದ ಸಮೇತವಾಗಿ-ದ್ದಾನೆಂದು ತಿಳವಳಿಕೆಯಿದೆ. ಕೆಲವು ಕಾಡು ಜನರು ತಮ್ಮ ನಿಜವಾದ ಹೆಸರು ಹೇಳಲು ಸಿದ್ಧರಿರುವುದಿಲ್ಲ. ತಮ್ಮ ನಿಜವಾದ ಹೆಸರು ತಿಳಿದರೆ ತಮ್ಮ ಮೇಲೆ ಮಾಟಗಾರನ ಅಧಿಕಾರ ನಡೆಯುವುದೆಂದು ತಿಳಿಯುತ್ತಾರೆ. ಕೆಲವರಿಗೆ ಅನೇಕ ಹೆಸರು-ಗಳಿವೆ. ಹೆಸರು ಹೇಳಿದರೆ ತಮ್ಮ ಒಂದು ಮುಖ್ಯ ಅಂಶವನ್ನು ಕಳಕೊಂಡಂತಾಗುವದೆಂಬ ಕಾರಣದಿಂದ ಕೆನ್ಯಾದ

ತರುಣರು ತಮ್ಮ ಮೊದಲನೆ ಹೆಸರು ಹೇಳುವುದಿಲ್ಲ. ಹೆಂಗಸರು ತಮ್ಮ ತಂದೆ ಅಥವಾ ಗಂಡಂದಿರ ಮೊದಲನೆಯ ಹೆಸರು ಹೇಳುವುದಿಲ್ಲ. ಗಂಡಸರು ತಮ್ಮ ಹೆಂಡಿರ ಹೆಸರು ಹೇಳುವುದಿಲ್ಲ. ಕೈಟಾ, ಹೆಂಡತಿ ಅಥವಾ ಯಾವುದಾದರೂ ಅಡ್ಡ ಹೆಸರಿನಿಂದ ಕರೆಯುತ್ತಾರೆ ಎಂದು ಬಾರ್ಟನ್ ಅವರು ಹೇಳುತ್ತಾರೆ. ನಮ್ಮಲ್ಲಿಯೂ ಗಂಡಹೆಂಡಿರು (ವಿಶೇಷವಾಗಿ ಸಂಪ್ರದಾಯ-ವಂತರು) ತಮ್ಮ ಹೆಂಡತಿ ಅಥವಾ ಗಂಡನ ಹೆಸರನ್ನು ಹೇಳು-ವುದಿಲ್ಲ. ಇದು ಆಧುನಿಕ ದೃಷ್ಟಿಯ ಸ್ತ್ರೀಪುರುಷರಿಗೆ ಅನ್ವ-ಯಿಸುವುದಿಲ್ಲ. ಹೆಸರಿನಲ್ಲೇನಿದೆ ಎಂದು ಹಿಂದಿನ ಜನ ತಿಳಿಯು-ತ್ತಿದ್ದಿಲ್ಲ. ಒಬ್ಬ ಮನುಷ್ಯನ ಜೀವಾಳವೇ ಅದರಲ್ಲಿ ಅಡಕ-ವಾಗಿದೆಯೆಂದು ತಿಳಿಯುತ್ತಿದ್ದರು.

‘‘ವೈಜ್ಞಾನಿಕವಾಗಿ ನಿರುಪಯುಕ್ತ (useless) ಎಂದು ಸಿದ್ಧವಾದ ಭವ್ಯ ಕಲ್ಪನೆಗಳಲ್ಲಿ ಆತ್ಮವೊಂದು. ಮನುಷ್ಯರಿಗೆ ಆತ್ಮವಿಲ್ಲ ಎಂದು ತೋರಿಸಲು ಸ್ಪಷ್ಟವಾದ ಪ್ರಮಾಣವಿದೆ-ಯೆಂದು ನನ್ನ ಅಭಿಪ್ರಾಯವಲ್ಲ. ಆತ್ಮದ ಅಸ್ತಿತ್ವವಿದ್ದರೂ, ಇದ್ದರೆ ಶೋಧಿಸಲು ಶಕ್ಯವಾದ ಯಾವುದೆ ಸಕಾರಣ ಸಿದ್ಧಾಂತ (Cusal Law) ದಲ್ಲಿ ಅದು ಭಾಗವಹಿಸುವದಿಲ್ಲ ಎಂದು ನನ್ನ ಅಭಿಪ್ರಾಯ’’ ಎಂದು ಗಸೇಲ್ ಹೇಳುತ್ತಾರೆ.

೭. ಮರಣದ ಕಲ್ಪನೆ

ಸತ್ತ ಮೇಲೆ ಆತ್ಮ ಇಂತಿಷ್ಟು ದಿನ ಸತ್ತ ಜಾಗದ ಸುತ್ತಲು ಇರುವುದೆಂದು ಕೆಲ ಜನಾಂಗದವರ ಕಲ್ಪನೆ. ಅದು ಭೂಮಿಯ ಕೆಳಗೆ ಸುಂದರವಾದ ಸ್ಥಳಕ್ಕೆ ಹೋಗುವುದೆಂದು ಎಸ್ಕಿಮೊ ಜನರ ಕಲ್ಪನೆ. ಅವರಲ್ಲಿ ನರಕದ ಕಲ್ಪನೆಯಿಲ್ಲ. ಫಿನ್ ಜನರಲ್ಲಿ ಸತ್ತವರ ಆತ್ಮ ನದಿಯನ್ನು ದಾಟಿ ಹೋಗ-ಬೇಕೆಂದಿದೆ. ಪಾಪುವಾ ಜನರಲ್ಲಿ ಸತ್ತವರ ಆತ್ಮಗಳನ್ನು ಒಂದು ದ್ವೀಪಕ್ಕೆ ತಕ್ಕೊಂಡು ಹೋಗಿ ಬಿಡುವ ನಾವಿಕರಿಂ-ದ್ದಾರೆ. ಕಿವಿ ಸುರಿಸಿ (ಚುಚ್ಚಿಸಿ) ಕೊಳ್ಳದವರಿಗೆ ಆ ದ್ವೀಪ-ದಲ್ಲಿ ಪ್ರವೇಶವಿಲ್ಲವೆಂದು ಆ ಜನರು ನಂಬುತ್ತಾರೆ. ಸತ್ತ ಮೇಲೆಯೂ ಜೀವಿಸಿದ್ದಾಗಿನಂಥ ಜೀವನವಿದೆಯೆಂದು ಕೆಲವು ಅನಾಗರಿಕ ಜನಗಳ ಕಲ್ಪನೆ. ಆಫ್ರಿಕಾದ ಒಂದು ನಿಗ್ರೋ ಪಂಗಡದ ಮುಖಂಡ ಸತ್ತಾಗ ಆತನೊಡನೆಯೆ ಆತನ ಜೀವಂತ ಹೆಂಡಿರನ್ನು ಜೀವಂತ ಹೂಳುವ ಪದ್ಧತಿಯಿದೆಯಂತೆ. ಇಜಿಪ್ತದಲ್ಲಿ, ಸತ್ತ ಅರಸರ, ಹಾಗೂ ಸರದಾರರ ಹೆಣಗಳ ಕರುಳು ತೆಗೆದು ಸುಗಂಧ ದ್ರವ್ಯ ಹಾಕಿ ಪಿರಾಮಿಡ್ಡುಗಳಲ್ಲಿ ಹೂಳಿಡುತ್ತಿದ್ದರು. ಅವರೊಡನೆ ಅವರ ಸೇವಕರು, ಹೆಂಡಂದಿ-ರನ್ನೂ ಹೂಳಿದ ಉದಾಹರಣೆಗಳವೆ. ಅವರು ಜೀವಿಸಿದ್ದಾಗ ಬೇಕಾದ ಆಯುಧ, ಊವೆ ಅಂಚಡಿ ಹಾಗು ರೊಟ್ಟಿಗಳನ್ನು

ಸಂಗಡ ಹೂಳುತ್ತಿದ್ದರು. ಕಟ್ಟಿಗೆಯ ತುಂಡುಗಳನ್ನು ಬ್ರೆಡ್ಡಿನ ಆಕಾರ ಮಾಡಿ ಇಟ್ಟಿರುವುದೂ ಉಂಟು. ಕಜ್ಜಾಯದ ಹೆಸರು-ಗಳನ್ನು ಬರೆದು ಸಹ ಇಡುತ್ತಿದ್ದರು. ಆಫ್ರಿಕಾದ ಒಬ್ಬ ನಾಯಕನು ತನ್ನ ಸತ್ತ ಮಗನ ಸೇವೆಗೆಂದು ವೈರಿಗಳ ಹೆಂಗಸ ರನ್ನು ಕೊಲ್ಲುತ್ತಿದ್ದನು.

ನಾವು ಕಾಣುವ ಜಗತ್ತು ಅದೃಶ್ಯಜಗತ್ತಿನ ಹತ್ತ-ರಲ್ಲೊಂದು ಪಾಲು ಮಾತ್ರ ಎಂದು ಲೆಡ್‌ಬೀಟರ್ ಎಂಬ ಥಿಯೊಸೊಫಿಸ್ಟರು ಹೇಳುತ್ತಾರೆ. ಸತ್ತವರೊಡನೆ ಇದ್ದವರ ಸಂಗಡ ಮಾತನಾಡುವಂತೆಯೆ ಮಾತನಾಡಬಹುದು ಎಂದು ಅವರು ಹೇಳುತ್ತಾರೆ. ಸತ್ತವರ ಫೋಟೋ ಸಹ ಮೂಡಿದು ದನ್ನು ಅಚ್ಚು ಹಾಕಿದ್ದಾರೆ. ಸತ್ತವರು ತಮ್ಮ ಸಂಬಂಧಿಕರಿಗೆ ಗಂಡಾಂತರದ ಸೂಚನೆಯನ್ನೂ ಕೊಡುತ್ತಾರೆ ಎಂದು ಥಿಯೂ-ಸೊಫಿಸ್ಟರು ನಂಬುತ್ತಾರೆ.

“ ಮನುವಿನ ಪ್ರಕಾರ, ಸತ್ತವರಿಗೆ ತರ್ಪಣಗಳನ್ನು, ಸರಿಯಾದ ರೀತಿಯಲ್ಲಿ ಪಿತೃದೇವತೆಗಳು ತಕ್ಕೊಂಡು ಹೋಗಿ ಮುಟ್ಟಿಸುತ್ತಾರೆ. ಪಿತೃಗಳು ಮನುಷ್ಯರಾಗಿ ಹುಟ್ಟಿದರೆ ಮನುಷ್ಯರ ಆಹಾರವನ್ನೂ, ಅನುಕೂಲವಸ್ತುಗಳನ್ನೂ, ಪ್ರಾಣಿ, ಗಳಾಗಿ ಹುಟ್ಟಿದರೆ ಪ್ರಾಣಿಗಳ ಆಹಾರವನ್ನೂ ತಲುಪಿಸು-ತ್ತಾರೆ. ದೇವಲೋಕಕ್ಕೆ ಪಿತೃಗಳು ಹೋದರೆ ಅಲ್ಲಿ ಅಮೃತ-ವಿದೆ; ಆಹಾರದ ಅಗತ್ಯವೇ ಇಲ್ಲವಲ್ಲ? ಎಂದು ಪ್ರಶ್ನಿಸಿದರೆ ಆ ತರ್ಪಣ ನೂರುಮಡಿ ಶ್ರೇಯಸ್ಸಿನೊಂದಿಗೆ ತಿರುಗಿ ತರ್ಪಣ ಬಿಟ್ಟ ವಂಶಜನಿಗೆ ಸಿಗುತ್ತಿದೆ ಎಂದುತ್ತರವಿದೆ. ಇದಕ್ಕೆ

ಸಂಶಯ ಹೊಂದಿದವರಿಗೆ, ಒಂದು ದೇಶದ ನಾಣ್ಯದಲ್ಲಿ ಮಾಡಿದ ಮನಿಯಾರ್ಡರು ಮತ್ತೊಂದು ದೇಶದ ನಾಣ್ಯರೂಪದಲ್ಲಿ ಪರದೇಶದಲ್ಲಿದ್ದವನಿಗೆ ದೊರೆಯುತ್ತದೆ ಎಂದು ಉತ್ತರ. ಹಾಗಿದ್ದರೆ ಭಾರತದಲ್ಲಿ ಒಬ್ಬನಿಗೆ ಊಟಹಾಕಿದರೆ ಇಂಗ್ಲಡಿನಲ್ಲಿ ಇದ್ದ ತಂದೆಯ ಹೊಟ್ಟೆ ತುಂಬುವದೆ ಎಂದು ಪ್ರಶ್ನೆ ಎತ್ತಲ್ಪಟ್ಟಿತು. ಮರ್ತ್ಯರು ತಿಳಿದ ಅರ್ಥದಲ್ಲಿ ಸತ್ತವರ ಸಲುವಾಗಿ ದೇವರು ಇಂಥ ಅನುಕೂಲ ನಿಯಮ ಮಾಡಿದ್ದಾನೆಂಬ ವಿವರಣೆ ಲೇಖನದಲ್ಲಿ ಇದೆ. (ಭವನ್ಸ್ ಜರ್ನಲ್. ಸಪ್ಟಂಬರ ೧೯೫೬ ಲೇಖನದ ಸಾರಾಂಶ.)

ಮರಣವು ಸ್ವಾಭಾವಿಕವಲ್ಲ ಎಂದು ತಿಳಿದ ಅನಾಗರಿಕ ಜನರು ಭೂತಗಳಿಂದ ಅನಿಷ್ಟವಾಗುವುದನ್ನು ತಪ್ಪಿಸಿಕೊಳ್ಳಲು ಅನೇಕ ಉಪಾಯಗಳನ್ನು ಯೋಜಿಸುತ್ತಾರೆ. ಸಿಲೋನದ ವೆಡ್ಡರು ಸತ್ತಮನೆಯನ್ನೆ ಬಿಟ್ಟು ಹೋಗುತ್ತಾರೆ. ಗುಜರಾತಿನ ಭಿಲ್ಲ ಪಂಗಡದವರು ಪ್ರತಿಯೊಂದು ಮರಣವಾದಾಗ ತಮ್ಮ ನಿವೇಶನಗಳನ್ನು ಬಿಟ್ಟು ಹೊಸ ನಿವೇಶನಗಳಿಗೆ ಹೋಗುತ್ತಾರೆ. ಇಂಡೊ ಆರ್ಯನ್ ಕುಲಕ್ಕೆ ಸೇರಿದ ಖಾಸಾ ಜನರು ದೈವದ ಸಿಟ್ಟಿನ ಹೆದರಿಕೆಯಿಂದ ತಾವು ಬಹು ಪರಿಶ್ರಮಪಟ್ಟು ನೈಪುಣ್ಯದಿಂದ ಕಟ್ಟಿದ ಮನೆಗಳನ್ನು ಬಿಟ್ಟು ಹೋಗುತ್ತಾರೆ. ಮೈಲಿ, ಕಾಲರಾ, ಮುಂತಾದ ಸಾಂಸರ್ಗಿಕ ರೋಗಗಳಿಂದ ಸಾವುಂಟಾದರೆ ಅವರು ಹೆಣಗಳ ಸಂಸ್ಕಾರವನ್ನು ಮಾಡುವದು ಸಹ ಅಪರೂಪ. ಮತ್ತು ಹೆಣಗಳನ್ನು ಹೊತ್ತುಕೊಂಡು ಹೋದ ದಾರಿಯಲ್ಲಿ ಸತ್ತವರ ಆತ್ಮಗಳು ತಿರುಗಿ ಬಂದು

ಉಳಿದವರಿಗೆ ಅಪಾಯುವನ್ನು ಮಾಡಬಾರದೆಂದು, ಮುಳ್ಳು ಗಳನ್ನು ಚೆಲ್ಲುತ್ತಾರೆ. ಮತ್ತು ಮಂತ್ರಿಸಿದ ಧಾನ್ಯದ ಕಾಳು-ಗಳನ್ನು ಚೆಲ್ಲಿಕೊಡುತ್ತಾರೆ. ಹಡೆಯುವಾಗ ಸತ್ತ ಹೆಂಗಸರು ದುಷ್ಟ ಪ್ರೇತಗಳಾಗುವರೆಂದು ಅವರು ನಂಬುತ್ತಾರೆ. ಮತ್ತು ಬಸುರಿಯರ ಹೆರಿಗೆಯ ಹಾಗು ಇತರ ತೊಂದರೆಗಳಿಗೆ ಕಾರಣ-ರಾಗುವರೆಂದು ತಿಳಿಯುತ್ತಾರೆ. ಸತ್ತ ಶಿಶುಗಳ ಭೂತಗಳ ಮೂಲಕ ಮಕ್ಕಳಿಗೆ ರಿಕೆಟ್ಸ್ (ಸವಕಳಿ ರೋಗ) ಬರುವು-ದೆಂದು ನಂಬುತ್ತಾರೆ. "ರೊಕ್ತಿ ಭೊವಾನಿ"ಯು ಪುಪ್ಪುಸ-ದಲ್ಲಿ ತೂತು ಕೊರೆಯುವುದರಿಂದ ಕ್ಷಯರೋಗವಾಗುವುದೆಂದು ಖಾಸಾಜನ ನಂಬುತ್ತಾರೆ. ಸತ್ತವರ ಪ್ರೇತ ತಿರುಗಿ ಬಾರದಂತೆ ದಾರಿ ತಪ್ಪಿಸುವ, ಹಾಗು ಹೆಣ ತೆಗೆದುಕೊಂಡು ಹೋಗು-ವಾಗ ವೇಷ ಬದಲಿಸಿಕೊಳ್ಳುವ ಅನೇಕ ರೀತಿಗಳಿವೆ. ಗೋಲ್ಡ್ ಕೋಸ್ಟಿನಲ್ಲಿ ಹೆಣ ಹೊತ್ತುಕೊಂಡು ಗೋರಿಗೆ ತೆಗೆದುಕೊಂಡು ಹೋಗುವಾಗ ಗಂಡಸರು ಹೆಂಗಸರಂತೆ, ಹೆಂಗಸರು ಗಂಡಸ-ರಂತೆ ವೇಷ ಹಾಕಿಕೊಂಡು ಹೋಗುತ್ತಾರೆ. ಸತ್ತವರನ್ನು ಕಿಡಕಿಯಿಂದ ಹೊತ್ತುಕೊಂಡು ಹೋಗುವ ಸಂಪ್ರದಾಯವೂ ಅನೇಕ ಕಡೆ ಇವೆ. ಕೆಲ ಕಾಡು ಜನಾಂಗಗಳಲ್ಲಿ ಸತ್ತವರ ಹೆಂಡಂದಿರು ತಮ್ಮ ಗುರುತು ಮರೆಯಾಗಬೇಕೆಂದು ತಲೆ ಬೋಳಿಸಿಕೊಳ್ಳುವರು. ಹೆಂಡತಿ ಸತ್ತಾಗ ಗಂಡಸರು ತಲೆಯ ಕೂದಲು ಬೋಳಿಸಿಕೊಳ್ಳುತ್ತಾರೆ. ಬೋಹಿಮಿಯನ್ನರು ಸತ್ತವರನ್ನು ಹೂಳಿ ಬರುವಾಗ ಮುಖವಾಡ ಧರಿಸಿಕೊಂಡು ವಿಚಿತ್ರವಾಗಿ ಬರುವರು. ರಜಸ್ವಲೆಯರಾದ ಹೆಂಗಸರೂ, ಹಡೆದ ಹೆಂಗಸರೂ, ಸತ್ತವರ ಮನೆಯವರೂ, ಭೂತಗಳ

ಆಶ್ರಯಸ್ಥಾನಗಳೆಂಬ ಕಾರಣದಿಂದ ಗಂಡಾಂತರ ಉಂಟು ಮಾಡಬಹುದೆಂದು ಕೆಲವು ಜನಾಂಗಗಳವರು ಕೆಲವು ಕಾಲ ಅವರನ್ನು ಮುಟ್ಟಲು ಹೆದರುತ್ತಾರೆ. ಆಸ್ಟ್ರೇಲಿಯಾದ ನಿವಾಸಿಯೊಬ್ಬನು ರಜಸ್ವಲೆಯಾದ ತನ್ನ ಹೆಂಡತಿಯು ತನ್ನ ಕಂಬಳಿಯ ಮೇಲೆ ಮಲಗಿದ್ದಕ್ಕಾಗಿ ಆಕೆಯನ್ನು ಕೊಂದು ಆ ಸ್ಪರ್ಶದ ಅನಿಷ್ಟದ ಹೆದರಿಕೆಯಿಂದಲೇ ಹದಿನೈದು ದಿನಗಳಲ್ಲಿ ಪ್ರಾಣಬಿಟ್ಟನು. ಸತ್ತವರ ಕಣ್ಣು ಮುಚ್ಚಿಸುವುದು ಅವರು ತಿರುಗಿ ಬಂದು ತೊಂದರೆ ಕೊಡಬಾರದೆಂಬ ಕಾರಣದಿಂದಲೇ.

ಸತ್ತವರ ಆತ್ಮಗಳು ಪ್ರಾಣಿಗಳ ದೇಹಗಳನ್ನು ಪ್ರವೇಶಿಸುವವೆಂಬ ನಂಬಿಕೆ ಅನೇಕ ಆಫ್ರಿಕನ್ ಜನಾಂಗಗಳಲ್ಲಿದೆ. ಪಶ್ಚಿಮ ಆಫ್ರಿಕನ್ನರು ಸತ್ತವರು ಸರ್ಪಗಳಾಗುವರೆಂದು ನಂಬುತ್ತಾರೆ. ದಕ್ಷಿಣ ಆಫ್ರಿಕದ ಝುಲು ಜನರು ಸತ್ತ ಮೇಲೆ ಝೀಬ್ರಾಗಳಾಗಿ ಹುಟ್ಟುವರು. ಕಾಫಿರರು ಮೊಸಳೆಗಳಾಗಿ ಜನ್ಮ ತಾಳುವರು. ಬಾಹಿಮಾ ಜನರಲ್ಲಿ ಸತ್ತವರ ಆತ್ಮಗಳು ಸಿಂಹಗಳಾಗುವವು.

೮. ಕಾಕತಾಲೀಯ ಸಂಬಂಧ

ಕಾರ್ಯಕಾರಣ ಸಂಬಂಧವಿಲ್ಲದ ಅನೇಕ ಘಟನೆಗಳು ಏಕಕಾಲಕ್ಕೇ ಸಂಭವಿಸಿದರೆ ಅವುಗಳಲ್ಲಿಯೇ ಒಂದುತರದ ಸಂಬಂಧವನ್ನು ಅನಾಗರಿಕ ಅಥವಾ ಭಾವಿಕವ್ಯಕ್ತಿ ಕಾಣು-ತ್ತಾನೆ. ಆಕಸ್ಮಿಕ ಘಟನೆಗಳಿಂದಲೂ ಭ್ರಾಮಕ ಜ್ಞಾನದಿಂದಲೂ ತಪ್ಪುತರ್ಕವನ್ನು ಅವರು ಮಾಡುತ್ತಾರೆ. ಮೊಲೆಂಬೊದಲ್ಲಿ ಒಬ್ಬ ಪೋರ್ತುಗೀಜನು ಸತ್ತಕೂಡಲೇ ಒಂದು ಪಿಡುಗು ಹಬ್ಬ-ತೊಡಗಿತು. ಆನಂತರ ಮೂಲನಿವಾಸಿಗಳು ಅಲ್ಲಿ ಯುರೋ-ಪಿಯನ್ನರು ಸಾಯದಂತೆ ಎಚ್ಚರಿಕೆಯ ಕ್ರಮಗಳನ್ನು ತೆಗೆದು-ಕೊಂಡರು. ನಿಕೋಬಾರ ನಡುಗಡ್ಡೆಗಳಲ್ಲಿ ಮಣ್ಣಿನಪಾತ್ರೆ ಮಾಡಲು ತೊಡಗಿದ ಮೂಲನಿವಾಸಿಗಳು ಕೆಲವರು ಸತ್ತು ಹೋದರು. ಪಾತ್ರೆಮಾಡುವ ವ್ಯವಸಾಯದಿಂದಲೆ ಅವರ ಮರಣವಾಯಿತೆಂದು ಆ ಜನರು ಆ ವ್ಯವಸಾಯವನ್ನೇ ಬಿಟ್ಟು ಬಿಟ್ಟರು. ಒಬ್ಬ ಬಿಳಿಯ ಮನುಷ್ಯನು ಒಬ್ಬ ಬುಶ್‌ಮನ್ನನಿಗೆ (ಆಸ್ಟ್ರೇಲಿಯದ ಮೂಲನಿವಾಸಿ) ಬಟನ್ನುಗಳಿಂದಲಂಕೃತವಾದ ಒಂದು ಬಡಿಗೆಯನ್ನು ಅಧಿಕಾರದ ಚಿಹ್ನೆಯೆಂದು ಕೊಟ್ಟನು. ಆ ಬಡಿಗೆಯನ್ನು ಮಗನಿಗೆ ಬಿಟ್ಟು ಆ ಬುಶ್‌ಮನ್ (Bushman) ನು ಸತ್ತನು. ಅವನ ಮಗನೂ ಸತ್ತು-ಹೋದನು. ಎಲ್ಲರೂ ಸಾಯಬಹುದೆಂಬ ಹೆದರಿಕೆಯಿಂದ

ಆ ಸಂಗಡದವರು ಬಡಿಗೆಯನ್ನು ತಿರುಗಿ ತಂದುಕೊಟ್ಟರು. ಸೈಬೇರಿಯಾದ ಯಾಕುತ್ ಜನರು ಮೊದಲನೆ ಸಲ ಒಂಟೆ-ಯನ್ನು ನೋಡಿದನಂತರ ಅಲ್ಲಿ ಮೈಲಿಬೇನೆ ಪ್ರಾರಂಭವಾ-ಯಿತು. ಆ ಒಂಟೆಯೇ ಮೈಲಿಬೇನೆಯ ಕಾರಣವೆಂದು ಅವರು ನಿರ್ಣಯಿಸಿದರು. ಒಂದು ಸಂಗತಿಯ ನಂತರ ಮತ್ತೊಂದು ಸಂಗತಿ ಜರುಗಿದರೆ ಮೊದಲಿನ ಸಂಗತಿ ನಂತರದ್ದರ ಕಾರಣ ಎಂದು ಅವರು ತಿಳಿಯುವರು. ಒಂದು ಹಲ್ಲಿಯು ನೀರಿನ ಕೊಡವನ್ನು ಹೊಕ್ಕಿತು. ಆಗ ಒಬ್ಬ ರೋಗಿಯು ಮೂರ್ಛೆ-ಹೋದನು. ಪುನಃ ಆ ಹಲ್ಲಿಯೇ ನೀರಿನ ಕೊಡದಿಂದ ಹೊರಟು ಆ ವ್ಯಕ್ತಿಯ ಹತ್ತಿರ ಬಂತು. ಆ ರೋಗಿಗೆ ಎಚ್ಚರಾಯಿತು. ಹಲ್ಲಿಯ ರೂಪದಲ್ಲಿ ಹೊರಟುಹೋದ ಆ ರೋಗಿಯ ಪ್ರಾಣವು ಪುನಃ ಬಂದು ಆತನ ಶರೀರವನ್ನು ಸೇರಿತೆಂದು ಅವರು ತಿಳಿದರು. ಒಬ್ಬನು ಯಾವುದೋ ಕೆಲಸಕ್ಕೆ ಹೊರಟಿರುತ್ತಾರೆ. ಮಧ್ಯದಲ್ಲಿ ಯಾರಾದರೂ ಸಂಭಾಷಣೆಯಲ್ಲಿ ತಮಗೆ ಸಂಬಂಧಿಸಿದ ವ್ಯವಹಾರದಲ್ಲಿ ಅದು ಒಳ್ಳೆಯದು ಅಥವಾ ಕೆಟ್ಟದ್ದು, ಆದೀತು ಅಥವಾ ಆಗಲಿಕ್ಕಿಲ್ಲ ಇಂಥ ಮಾತುಗಳನ್ನು ತಮ್ಮಷ್ಟಕ್ಕೆ ಆಡಿಕೊಂಡರೆ ಈತನು ಅದು ತನ್ನ ಉದ್ದೇಶದ ಫಲವನ್ನು ತಿಳಿಸುವುದೆಂದು ನಂಬುತ್ತಾನೆ. ಇದಕ್ಕೆ ಸಾದೃಷ್ಟ ಎನ್ನುತ್ತಾರೆ. ಧೂಮಕೇತು ಕಂಡಾಗ ಯುದ್ಧವಾದರೆ, ಯಾವನಾದರೂ ಪ್ರಸಿದ್ಧ ಪುರುಷನು ಸತ್ತರೆ ಅದು ಧೂಮಕೇತುವಿನ ಪರಿಣಾಮ ಎಂದು ತಿಳಿಯುತ್ತಾರೆ. ಧೂಮಕೇತು ಪ್ರತಿಸಲ ಬಂದು ಎಲ್ಲ ಪ್ರಸಿದ್ಧಪುರುಷರ ಸಾವನ್ನು ಏಕೆ ಸೂಚಿಸುವುದಿಲ್ಲ ಎಂದು ಯಾರೂ ವಿಚಾರಿ-

ಸುವದಿಲ್ಲ. ಧೂಮಕೇತು ಬಂದ ವರ್ಷ ಏಳನೇ ಎಡ್ವರ್ಡರು ತೀರಿದ್ದರು. ಸೀಝರನು ಸಾಯುವ ಮೊದಲು ಧೂಮಕೇತು ಬಂದಿತ್ತೆಂದು ಶೇಕ್ಸ್‌ಪಿಯರನ "ಜೂಲಿಯಸ್ ಸೀಝರ್" ನಾಟಕದಿಂದ ತಿಳಿಯುತ್ತದೆ. ವಲ್ಲಭಭಾಯಿ ಪಟೇಲರು ತೀರಿದ ವರ್ಷವೂ ಧೂಮಕೇತು ಕಂಡಿತ್ತು. ಧೂಮಕೇತು ಅನಿಷ್ಟ ಎಂದು ಸಿದ್ಧಮಾಡಲು ಇಂಥ ದೃಷ್ಟಾಂತಗಳು ವಿಜ್ಞಾನವನ್ನು ಅಲಕ್ಷಿಸುವವರಿಗೆ ಸಾಕಾಗುತ್ತವೆ. ಬಹಳಷ್ಟು ಶಕುನಗಳು ಇಂಥ ಕಾಕತಾಲೀಯ ಘಟನೆಗಳನ್ನೇ ಅವಲಂಬಿಸಿ ಪ್ರಚಾರ ಹೊಂದುತ್ತವೆ. ಪ್ರಖ್ಯಾತ ನಾಟಕಕಾರ ಕೈಲಾಸಂ ಸಾಹಿತ್ಯ ಸಮ್ಮೇಲನದಲ್ಲಿ ಬಾವುಟವನ್ನು ಏರಿಸುತ್ತಿದ್ದಾಗ ಬಾವುಟ ಬಿದ್ದು ಹೋಯಿತು. ಆಗ ಅವರ ಕ್ಷೇಮದ ಕುರಿತು ಆಶಂಕೆ ವ್ಯಕ್ತ-ಮಾಡಲ್ಪಟ್ಟಿತು. ಅದೇ ವರ್ಷ ಅವರು ದಿವಂಗತರಾದರು. ಒಬ್ಬನು ಒಂದು ಹೊಲವನ್ನು ಕೊಳ್ಳುತ್ತಾನೆ. ನಂತರ ಅವನಿಗೆ ಅನೇಕ ವಿಷಯಗಳಲ್ಲಿ ಹಾನಿಯಾಗುತ್ತದೆ. ಆ ಹೊಲ ಕೊಂಡಿದ್ದರಿಂದಲೇ ಅನಿಷ್ಟ ಪರಿಣಾಮಗಳು ಸಂಭವಿಸಿದವೆಂದು ಅವನ ತರ್ಕವಾಗುತ್ತದೆ. ಆ ಹೊಲ ಕೊಂಡುದು ಅವನ ನಷ್ಟಕ್ಕೆ ನಿಮಿತ್ತವಾಗುತ್ತದೆ. ಹೆಂಗಸರ ಕಾಲ್ಗುಣದ ವಿಷಯವೂ ಅನುಭವದಿಂದ ನಿರ್ಣಯವಾಗುತ್ತದೆ. ತಮ್ಮ ಸಂಪತ್ತನ್ನು ಕಳೆದುಕೊಂಡವರೊಬ್ಬರು ತಮ್ಮ ಮೊದಲನೆ ಹೆಂಡತಿ ತೀರಿದ ನಂತರ ಎರಡನೇ ವಿವಾಹವಾದರು. ನಂತರ ಅವರಿಗೆ ಹಿಡಿದ ಕೆಲಸದಲ್ಲಿ ಜಯವಾಗುತ್ತ ಬಂದು ಬತ್ತಿಹೋದ ನದಿಗೆ ಮಹಾ-ಪೂರ ಬಂದಂತೆ ಸಂಪತ್ತು ಹೆಚ್ಚುತ್ತ ಬಂತು. ''ಈಕೆ ಬಡವರ ಮನೆಯವಳಾದರೂ ಇವಳನ್ನು ಕೈಹಿಡಿದ ಮೇಲೆಯೇ ನನಗೆ

ಇಷ್ಟು ಭಾಗ್ಯ ಬಂದದ್ದು" ಎಂದವರು ಹೇಳುವುದುಂಟು. ಆದ್ದ-ರಿಂದಲೇ ಪ್ರತಿದಿನ ಮುಂಜಾನೆ ಎದ್ದಕೂಡಲೇ (ಅಥವಾ ಏಳುವಾಗಲೇ) ಹೆಂಡತಿಯ ಮುಖದರ್ಶನವನ್ನು ಮಾಡಿ-ಕೊಂಡು ನಂತರ ಅವರು ಇತರ ಕೆಲಸಗಳನ್ನು ಕೈಕೊ-ಳ್ಳುತ್ತಾರೆ. ಉಪ್ಪನ್ನು ಚೆಲ್ಲಬಾರದೆಂಬ ನಂಬಿಕೆ ನಮ್ಮ ಜನರಲ್ಲಿಯೂ ಯುರೋಪಿಯನ್ನರಲ್ಲಿಯೂ ಇದೆ. ಉಪ್ಪನ್ನು ಬಡಿಸಿಕೊಳ್ಳುವಾಗ ಎಚ್ಚರಿಕೆಯಿಂದ ಬಡಿಸಿಕೊಳ್ಳಬೇಕು. ಅನ-ವಶ್ಯಕವಾಗಿ ಚೆಲ್ಲಿಕೊಡಬಾರದು ಎಂದು ಹೇಳಿದರೆ ಸಮಂಜಸ. ಅನ್ನವು ಲಕ್ಷ್ಮೀದೇವಿ, ಅದನ್ನು ಚಲ್ಲಬಾರದು ಎಂಬಲ್ಲಿ ಈ ರೀತಿಯ ಉದ್ದೇಶ ಸ್ಪಷ್ಟವಾಗಿ ಕಾಣುತ್ತದೆ. ಒಮ್ಮೆ ಒಬ್ಬ ಹೆಂಗಸು ಉಪ್ಪನ್ನು ಚೆಲ್ಲಿದಳು. ಮಧ್ಯಾಹ್ನದ ಮೇಲೆ ಅವಳ ಚಿಕ್ಕ ಗುಡಿಸಲು ಬಿದ್ದುಹೋಯಿತು. ಉಪ್ಪು ಚೆಲ್ಲಿದ್ದರಿಂದಲೇ ಗುಡಿಸಲು ಕುಸಿದು ಬಿತ್ತು ಎಂಬ ನಿರ್ಣಯ ದೃಢವಾಯಿತು. ಮೂಢನಂಬಿಕೆ ಬಲವಾಗಿ ಬೇರೂರಿತು. ಉಪ್ಪು ಚೆಲ್ಲಿದಾಗ ಅನಿಷ್ಟ ಘಟನೆಯಾಗದ ನೂರಾರು ಉದಾಹರಣೆಗಳಾಗಿದ್ದರೂ (ನೂರು ಅಪರಾಧಿಗಳು ತಪ್ಪಿಸಿಕೊಂಡರೂ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದೆಂಬ ತತ್ವದಂತೆ) ಒಂದು ಮೂಢನಂಬಿಕೆ-ಯನ್ನು ತಜ್ಞರ ಮನದಿಂದ, ಸುಲಭವಾಗಿ ತೆಗೆದುಹಾಕುವುದ-ಕ್ಕಾಗುವುದಿಲ್ಲ.

ಸತ್ತ ಸೂತಕದಲ್ಲಿ ಮದುವೆ ಮಾಡಿದ ಒಂದು ಉದಾ-ಹರಣೆಯಿದೆ. ಇತರರು ಆ ಮದುವೆ ಅನಿಷ್ಟ ಎಂದು ಬಲವಾಗಿ ವಿರೋಧಿಸಿದರೂ ಮದುವೆ ನಡೆದು ಹೋಯಿತು. ಎರಡು

ವರ್ಷಗಳ ಮೇಲೆ ಗಂಡ-ಹೆಂಡತಿ ಇಬ್ಬರೂ ಒಂದು ತಿಂಗಳ ಅವಧಿಯಲ್ಲಿ ತೀರಿಕೊಂಡರು. ಸೂತಕದಲ್ಲಿ ಮದುವೆ ಮಾಡಿದ್ದರ ಪರಿಣಾಮ ಇದು ಎಂದು ಜನರು ಭಾವಿಸಿದರು. ಅದರ ನಂತರ ಮೂರು ನಾಲ್ಕು ಮದುವೆಗಳು ನಮ್ಮೂರಿನಲ್ಲಿ (ಹೊಲನಗದ್ದೆ) ನಡೆದರೂ ಮದುವೆಯಾದವರಿಗೆ ಅದರಿಂದ ಅನಿಷ್ಟವೇನೂ ಆಗಲಿಲ್ಲ. ಆದರೆ ಕೆಡುಕಿನ ಪರಿಣಾಮ ಜನರ ಮೇಲೆ ಮೂಡಿದಷ್ಟು ಒಳ್ಳೆಯದರ ಪರಿಣಾಮ ಮೂಡುವದಿಲ್ಲ. ಸೂತಕವನ್ನೇ ಪಾಲಿಸದ ಐರೋಪ್ಯ ಹಾಗು ಮತ್ತಿತರ ಜನಾಂಗಗಳಿಗೆ ಅದರಿಂದ ಕೇಡಾಗಿಲ್ಲ ಎಂಬುದು ಜನಸಾಮಾನ್ಯರಿಗೆ ಹೊಳೆಯುವುದಿಲ್ಲ.

೯ ಹಗಲುಗನಸುಗಳು, ಸ್ವಪ್ನಗಳು

ಮನುಷ್ಯನ ಹಗಲುಗನಸುಗಳು, ಇರುಳ ಕನಸುಗಳು ಅನೇಕ ಕಲ್ಪನಾಚಮತ್ಕೃತಿಯ ಕತೆಗಳನ್ನು ರೂಪಿಸುತ್ತವೆ. "ದೃಷ್ಟಿಯಂತೆ ಸೃಷ್ಟಿ". "ಮನುಷ್ಯನು ತಾನು ಅರಸುವುದನ್ನು ಸುಲಭವಾಗಿ ಕಾಣುತ್ತಾನೆ. ಭೂತದಲ್ಲಿ ನಂಬಿಕೆಯಿರುವವನು ನಿಶ್ಚಯವಾಗಿಯೂ ಭೂತವನ್ನು ಕಾಣುತ್ತಾನೆ" ಎಂದು ಜೋರ್ಟರ (Rjorter) ಅವರು ಹೇಳುತ್ತಾರೆ. ಪ್ರಖ್ಯಾತ ಹಗಲುಗನಸುಗಾರ ಡಾನ್ ಕಿವೋಟಿ (Don Quixote) ಚಲಿಸುವ ಗಾಳಿಯಂತ್ರ (Wind mill) ವನ್ನು ನೋಡಿ ದೊಡ್ಡ ರಾಕ್ಷಸನೆಂದು ಅದರ ಮೇಲೆ ಏರಿಹೋಗಿ, ಯಂತ್ರಕ್ಕೆ ಸಿಕ್ಕು ತನ್ನ ಭಲ್ಲೆಯು ತಿರುಗಿದ ರಭಸಕ್ಕೆ ಕುದುರೆಯಿಂದ ಬಿದ್ದು ದೊಡ್ಡ ಪೆಟ್ಟು ಮಾಡಿಕೊಂಡನು. ಮತ್ತೊಮ್ಮೆ ಧೂಳನ್ನು ಮೇಲಕ್ಕೆ ಹಾರಿಸುತ್ತ ಬರುತ್ತಿದ್ದ ಕುರುಬರ ಎರಡು ಕುರಿ-ಮಂದೆಗಳು ತಮ್ಮ ತಮ್ಮೊಳಗೆ ಯುದ್ಧಮಾಡಲು ಬರುತ್ತಿದ್ದ ಎರಡು ಸೈನ್ಯಗಳೆಂದು ತಿಳಿದು, ನಾನು ದುರ್ಬಲರ ರಕ್ಷಣೆಗೆ ಅವತರಿಸಿದ ವೀರನೆಂದು ದೊಡ್ಡ ಕುರಿ ಮಂದೆಯ ಮೇಲೇರಿ ಹೋಗಿ, ಕೆಲವು ಕುರಿಗಳನ್ನು ಕೊಂದು ಕುರುಬರಿಂದ ಪೆಟ್ಟು ತಿಂದನು. ಡಾನ್ ಕಿವೋಟಿಯ ಕಥೆ ಸ್ಪೇನಿನ ಸರ್ವಾಂಟೀಸ್

ಬರೆದ ಕಟ್ಟು ಕಥೆ. ಆದರೆ ತನ್ನ ದೈನಂದಿನ ಕಾರ್ಯಗಳಲ್ಲೆಲ್ಲ ಭೂತಶಕ್ತಿಯನ್ನೂ ಮಾಟದ ವಿಧಾನಗಳನ್ನೂ ನಂಬಿಕೊಂಡು ಹಗಲುಗನಸು ಕಾಣುವ ಅನಾಗರಿಕನು ತನ್ನ ಮನಸ್ಸಿನ ಕಲ್ಪನೆಯ ಭೂತಗಳೆಲ್ಲ ನಿಜವೆಂದೇ ತಿಳಿದು ವ್ಯವಹರಿಸುತ್ತಾನೆ. ಕೆಲ ಅನಾಗರಿಕರು ಸಂಜೆಯ ಹೊತ್ತಿನಲ್ಲಿ ಬಿಸಿಬಿಸಿ ಗಾಳಿ ಬಂದರೆ ಭೂತಸಂಚಾರವೆಂದು ತಿಳಿಯುತ್ತಾರೆ. ಪ್ರಾಣಿಗಳನ್ನು ಕೊಂದ ಮೇಲೆ ಪ್ರಾಣಿಗಳ ಭೂತಶಕ್ತಿಗೆ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಝುಲುಜನರು ಹಿಪೊಪೊಟಿಮಸ್ (ನೀರಾನೆ)ಪ್ರಾಣಿಯನ್ನು ಕೊಂದ ಮೇಲೆ ತಪ್ಪನ್ನು ಕ್ಷಮಿಸೆಂದು ಪ್ರಾರ್ಥಿಸುತ್ತಾರೆ. ನಂಬಿ ನಟಿಸುವ ಎಳೆಯ ಹುಡುಗರ ಆಸೆಯ ಹಾಗೆ ಎಂದು ಕಾಡುಜನರ ಮಾಟವನ್ನು ಕುರಿತು ಹೇಳಬಹುದು. ವೈರಿಯನ್ನು ಕೊಲ್ಲುವ ಆಶೆಯಿಂದ ಆತನ ಗೊಂಬೆಗೆ ಬಾಣವನ್ನು ಚುಚ್ಚಿ ಆತನನ್ನು ಕೊಂದ ಸಮಾಧಾನ ಹೊಂದುವುದು ನಂಬಿ ನಟಿಸುವುದರ ರೂಪವೇ ಆಗಿದೆ. ಮಾಟಗಾರನು ಮಾಟಮಾಡಿದ್ದರಿಂದ ಮಳೆ ಬಂದಿತೆಂದು ತಿಳಿಯುವುದು, ಗ್ರಹಣಗಳಲ್ಲಿ ಸೂರ್ಯಚಂದ್ರರು ಪರಸ್ಪರ ನುಂಗುವುದನ್ನು ತಾನು ಗದ್ದಲ ಮಾಡುವುದರಿಂದಲೂ ಭೇರಿ ಬಡಿದು ತುತೂರಿ ಊದಿದುರಿಂದಲೂ ತಡೆದೆನೆಂದು ತಿಳಿಯುವುದು ಅನಾಗರಿಕ ಮಾನವನು ನಂಬಿ ನಟಿಸುವ ರೀತಿಯೇ ಸರಿ.

ಸ್ವಪ್ನ, ನಿದ್ದೆ, ಸಮಾಧಿಯ ಸ್ಥಿತಿಗಳ ಕಾರಣವನ್ನು ತಿಳಿಯಲು ಟ್ಸೆ ಭಾಷೆಯನ್ನು ಮಾತನಾಡುವ ನಿಗ್ರೋನು ತನಗೆ ಎರಡನೆಯದೊಂದು ವ್ಯಕ್ತಿತ್ವವಿದೆಯೆಂದು ಕಲ್ಪಿಸು-

ತ್ತಾನೆ. ಸ್ವಪ್ನಗಳಲ್ಲಿ ತಮ್ಮ ಬೇರೆಯ ಆತ್ಮಗಳು ರಾತ್ರಿ ಸಂಚಾರಕ್ಕೆ ಹೊರಡುವವೆಂದೂ ಅವು ಅದೃಶ್ಯ ಆಕಾರದಿಂದ ಹೊರಟು ಬೇರೆ ಪಿಲ್ಲಿ (ಜೀವಂತ ಜನರ ಆತ್ಮ) ಗಳನ್ನು ಸಂಧಿಸುವುವೆಂದೂ ಲಿಕಾಕಾನಿಯನ್ ಇಂಡಿಯನರು ತಿಳಿಯು-ತ್ತಾರೆ. ಸ್ವಪ್ನವು ಹೇಗೆ ಬಿದ್ದಿ ವೆಯೋ ಹಾಗೆಯೇ ನಡೆದದ್ದೆಂದಾಗಲಿ, ನಡೆಯುವುದೆಂದಾಗಲಿ ಅವರು ತಿಳಿಯುತ್ತಾರೆ. ಅನೇಕ ಅಸ್ಪಷ್ಟ ಹಾಗು ವಿವರಣೆ ಕೊಡಲಾಗದ ಅವರ ಅನೇಕ ನಂಬುಗೆಗಳಿಗೆ ಸ್ವಪ್ನವೇ ಮೂಲವಾಗಿದೆ. ಜಾಗ್ರದವಸ್ಥೆಯಲ್ಲಿ ಹತ್ತಿಕ್ಕಿದ ಆಶೆಗಳು, ಹೆದರಿಕೆಗಳು, ಸ್ವಪ್ನದಲ್ಲಿ ಬೇರೊಂದು ರೀತಿಯಿಂದ ಸಫಲವಾಗುವವೆಂದು ಮನೋವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಶೇಕ್ಸ್ಪಿಯರನ "ಜೂಲಿಯಸ್ ಸೀಝರ್" ನಾಟಕದಲ್ಲಿ ಮರ್ಕ್ಯುಶಿಯೊ ಸ್ವಪ್ನಗಳು ಆಲಸಿ ಮನಸ್ಸಿನ ಹಗಲುಗನಸಿನ ಮೂಲಕ ಹುಟ್ಟಿದ ಮಕ್ಕಳೆಂದೂ ಹವೆಯ ಹಾಗೆ ವಿರಲವೆಂದೂ ಗಾಳಿಗಿಂತ ಚಂಚಲವೆಂದೂ ಹೇಳುತ್ತಾನೆ. "ರಾತ್ರಿಯ ಬಹಳಷ್ಟು ಸ್ವಪ್ನಗಳು ನಮ್ಮ ಆಶಾಪೂರ್ತಿಯ ಚಿತ್ರದ ಪರಿಣಾಮಗಳೆಂದು ಸಿಗ್ಮಂಡ್ ಫ್ರಾಯ್ಡ್ ತೋರಿಸಿದ್ದಾನೆ. ಹಗಲುಗನಸುಗಳೂ ಹಾಗೆಯೇ ಎಂದು ಅಷ್ಟೇ ಸತ್ಯವಾಗಿ ಹೇಳಿದ್ದಾನೆ. ನಾವು ನಂಬಿಕೆ-ಗಳೆಂದು ಕರೆಯುವ ಹಗಲುಗನಸುಗಳನ್ನು ಅವುಗಳೊಡನೆಯೇ ಸೇರಿಸಬೇಕಾಗಿತ್ತು" ಎಂದು ಬರ್ಟ್ರಾಂಡ್ ರಸೆಲ್ ಹೇಳು-ತ್ತಾರೆ. ತನ್ನ ಧರ್ಮ, ತನ್ನ ಕುಲ, ತನ್ನ ರಾಜಕೀಯ ಪಕ್ಷ, ತನ್ನ ಸಾಮಾಜಿಕ ಆಚಾರ ವಿಚಾರಗಳು ಇತರರ ನಂಬಿಕೆ-ಗಳಿಗಿಂತ ಶ್ರೇಷ್ಠ ಎಂದು ತಿಳಿಯುವ ಪ್ರತಿಯೊಬ್ಬನೂ ಕೆಲ-

ಮಟ್ಟಿನ ಹಗಲುಗನಸು ಅರ್ಥಾತ್ ಮೂಢನಂಬಿಕೆಗಳಿಗೆ ಒಳಗಾಗಿರುವವನೆಂದೂ ಅವರು ಹೇಳುತ್ತಾರೆ Spirits and demons were nothing but the projection of premitive man's emotional impulses. He personified his affects, populated the world with them and rediscoverd his inner psychic processes outside of himself" (Sigmund Freud. collected papers. Part II.)

" ಭೂತಪಿಶಾಚಿಗಳು ಪುರಾತನ ಮಾನವ ಭಾವನೆಯ ಪ್ರೇರಣೆಗಳ ಬಾಹ್ಯರೂಪದ ಒಡಮೂಡಿಸುವಿಕೆಯಲ್ಲದೆ ಬೇರೆ–ಯಲ್ಲ. ತಾನು ಗ್ರಹಿಸಿದ ಕಲ್ಪನೆಗಳಿಗೆ ಮೂರ್ತಸ್ವರೂಪವನ್ನು ಕೊಟ್ಟು ಅವುಗಳನ್ನು ವ್ಯಕ್ತಿಗಳೆಂದು ತಿಳಿದು ಜಗತ್ತನ್ನು ಆ ವ್ಯಕ್ತಿಗಳಿಂದ ತುಂಬಿದನು. ಹಾಗೂ ತನ್ನ ಅಂತರ್ಯದ ಮಾನಸಿಕ ವ್ಯಾಪಾರಗಳನ್ನು ತನ್ನ ದೇಹದ ಹೊರಗೆ ಪುನಃ ಶೋಧಿಸಿದನು," ಎಂದು ಪ್ರಖ್ಯಾತ ಮನೋವಿಜ್ಞಾನಿ ಸಿಂಗ್ಮಡ್ ಫ್ರೂಡ್ ಬರೆಯುತ್ತಾರೆ.

೧೦ ಭಯದಿಂದ ದೆವ್ವ, ಭೂತಗಳ ಸೃಷ್ಟಿ

ರಾತ್ರಿಯಲ್ಲಿ ಮರಗಳ ನೆರಳು, ಓಡಾಡುವ ಮನುಷ್ಯ ಹಾಗೂ ಪ್ರಾಣಿಗಳ ನೆರಳನ್ನು ನೋಡಿ ಭೀತನಾದ ಮಾನವನು ರಾಕ್ಷಸ–ಭೂತಗಳ ವಿಕಾರರೂಪಗಳನ್ನು ಕಲ್ಪಿಸಿರಬೇಕು. ರಾತ್ರಿಯ ಭೀಕರಸ್ವಪ್ನಗಳು ಆ ನಂಬಿಕೆಗಳನ್ನು ಹೆಚ್ಚು ದೃಢವಾಗಿ ಮಾಡಿರಬೇಕು. ಗ್ರೀಕದೇಶದ ಸಾಹಿತ್ಯದಲ್ಲಿ ಭೂತಗಳು ನೆರಳಿನಂತೆ ಇರುವವೆಂದು ವರ್ಣಿತವಾದುದನ್ನು ಸ್ಮರಿಸಬಹುದು. ಮರಣದ ಹೆದರಿಕೆ ಭೂತಗಳ ಭಾವನೆಗೆ ಪುಟಕೊಟ್ಟಿರಬೇಕು. ತನ್ನ ಹೆದರಿಕೆಯ ಗುಂಗಿನಲ್ಲಿ ಕಾಡು-ಪ್ರಾಣಿಗಳನ್ನು ನೋಡಿದ ಪ್ರಾಚೀನ ಮಾನವನು ಪಿಶಾಚಿ-ಗಳನ್ನು ಕಲ್ಪಿಸಿರಬೇಕು. (ಪಿಶಾಚಿಗಳು ಹಸೀ ಮಾಂಸ ತಿನ್ನುವ ಅಡವಿಯ ಕಾಡು ಜನಾಂಗಗಳವರು ಎಂಬ ಅಭಿಪ್ರಾಯವೂ ಇದೆ.) ಪಿಶಾಚಿಗಳು ನಾಯಿ, ನರಿ, ಹುಲಿ, ಕರಡಿ ಮುಂತಾದ ಪ್ರಾಣಿಗಳ ಮೋರೆಗಳನ್ನುಳ್ಳವೆಂಬ ಕಲ್ಪನೆಯಿದೆ. ಪ್ರಾಣಿಗಳ ಹೆದರಿಕೆ ಅನೇಕ ಕಾಡುಪ್ರಾಣಿಗಳನ್ನು ಪೂಜಿಸಲು ಮಾನವ-ನನ್ನು ಪ್ರೇರಿಸಿರಬೇಕು. ಹುಲಿರಾಯ, ಸರ್ಪ ಮುಂತಾದವುಗಳ ಪೂಜೆಗೆ ಅವುಗಳನ್ನು ಕುರಿತಾದ ಭಯವು ಕಾರಣವಾಗಿರಬೇಕು.

ಕೆಲವು ಸನ್ನಿವೇಶಗಳು ಭಯವನ್ನು ಮತ್ತೂ ಹೆಚ್ಚು ಮಾಡುತ್ತವೆ. ಜನಸಂಖ್ಯೆ ಕಡಿಮೆ ಇರುವ ಜಾಗಗಳಲ್ಲಿಯೇ ಭೂತ-ದೆವ್ವ-ಪಿಶಾಚಿಗಳ ಭಯ ಹೆಚ್ಚು. ಅನೇಕ ವರ್ಷ ಮನುಷ್ಯರ ವಸತಿಯಿಲ್ಲದ ಮನೆಗಳಲ್ಲಿ ದೆವ್ವಗಳು ಬಂದು ಆಶ್ರಯ ಪಡೆಯುವವೆಂದು ಕಲ್ಪನೆಯಿದೆ. ಅಲ್ಲಿ ರಾತ್ರಿ ಹೊತ್ತು ಅನೇಕ ತರದ ಒದರಾಟ ಚೀರಾಟಗಳು ಕೇಳುವವೆಂದು ಹೇಳುತ್ತಾರೆ. ಜನಸಂಖ್ಯೆ ಹೆಚ್ಚಾದರೆ ದೆವ್ವಗಳು ಆ ಸ್ಥಳವನ್ನು ಬಿಟ್ಟು ಹೋಗುವವೆಂದು ಕೆಲವರನ್ನುವರು. ಮನುಷ್ಯನ ಅಜ್ಞಾನದ ಭಯವೇ ದೆವ್ವಭೂತಗಳ ಕಾಟಕ್ಕೆ ಕಾರಣವಾಗಿರಬೇಕು. ದೃಷ್ಟಿಯಂತೆ ಸೃಷ್ಟಿ ಎಂಬ ಮಾತು ಈ ವಿಷಯದಲ್ಲಿಯೂ ನಿಜ. ನಮ್ಮ ಹಿರಿಯರೊಬ್ಬರು ಹೆಡ-ತಲೆಯಲ್ಲಿ (ತಲೆಯ ಹಿಂದೆ) ದೆವ್ವವಿದೆ. ಅದೇ ಹೆಡತಲೆಯ ದೆವ್ವ; ದೆವ್ವಗಳು ಇಲ್ಲದಿದ್ದರೂ ನಮ್ಮ ತಲೆಯಲ್ಲಿಯ ದೆವ್ವ-ಗಳ ಹೆದರಿಕೆಯೇ ಅವನ್ನು ಕಾಣುವಂತೆ, ಅವುಗಳಿಗೆ ಹೆದರು-ವಂತೆ ಮಾಡುತ್ತದೆ ಎನ್ನುತ್ತಿದ್ದರು. ದೆವ್ವವನ್ನು ಪ್ರತ್ಯಕ್ಷ ನೋಡಿರುವೆವೆಂದು ಹೇಳುವವರಿದ್ದಾರೆ. ಬಿಳೀ ಸೀರೆಯುಟ್ಟು ಅಪರಾತ್ರಿಯಲ್ಲಿ ಅಳುವ ದೆವ್ವವನ್ನೂ ನೋಡಿದವರಿದ್ದಾರೆ. ದೊಡ್ಡ ಕೋಣ ಓಡಿ ಬಂದು ಕೆರೆಯಲ್ಲಿ ಹಾರಿದಂತೆ ಶಬ್ದ ಕೇಳಿ ಮೂರ್ಛೆ ಹೊಂದಿದವರಿದ್ದಾರೆ. ಕತ್ತನ್ನು ನೂಕಿದ ಹೆದರಿಕೆ ಯಿಂದ ಪ್ರಾಣ ಬಿಟ್ಟ ಉದಾಹರಣೆಗಳಿವೆ. ಅವರಿಗೆ ಮೃತ್ಯು ಹೊಡೆಯಿತೆಂದು ಭಾವಿಕರು ವಿವರಣೆ ಕೊಡುತ್ತಾರೆ. ಹೆದ-ರಿದ್ದರಿಂದ ಜ್ವರ ಬಂದು ನಂತರ ಸತ್ತವರ ಉದಾಹರಣೆಗಳೂ ಇವೆ. ದೆವ್ವ ಭೂತ ಇಲ್ಲದಿದ್ದರೂ ಅವುಗಳ ಹೆದರಿಕೆಯ-

ಪರಿಣಾಮ ತೀರ ನಿಜವಾದ ಸಂಗತಿ. ರಾಬರ್ಟ್ ಬ್ಲೂಮ್‌ಫೀಲ್ಡ್ ಬರೆದ "ಫೆಕನ್ ಹೇಮ್ ಭೂತ" ಎಂಬ ಕವನದಲ್ಲಿ ರಾತ್ರಿ ಹೊತ್ತಿನಲ್ಲಿ ಒಬ್ಬ ಮುದುಕಿಯು ಮನೆಗೆ ಮರಳುವಾಗ ಭೂತದ ಆಕೃತಿ ಕಂಡು, ಅದು ಬರುವ ಶಬ್ದವನ್ನೂ ಕೇಳುತ್ತ ಬಂದವಳು ಮನೆ ಬಾಗಿಲಿನಲ್ಲಿ ಮೂರ್ಛೆಹೊಂದಿ ಬೀಳುತ್ತಾಳೆ. ಜನರು ಏನಾಯಿತೆಂದು ನೋಡಲು ಒಂದು ಕತ್ತೆಯ ಮರಿ ಆ ಕಡೆ ಬರುವುದನ್ನು ನೋಡಿ ಭೂತವೆಂದು ಆಕೆ ಹೆದರಿದ್ದು ಸ್ಪಷ್ಟವಾಯಿತು.

ಪ್ರಮಾಣಿಕವಾಗಿ ಭೂತವನ್ನು ನಂಬುವವರಿರು-ವಂತೆಯೇ ತಮ್ಮ ಲಾಭಕ್ಕಾಗಿ, ಉದ್ದೇಶಸಾಧನೆಗಾಗಿ ದೆವ್ವ-ಭೂತಗಳನ್ನು ಸೃಷ್ಟಿಸುವವರೂ ಕಂಡುಬರುತ್ತಾರೆ. ಜನರ ನಂಬಿಕೆ ಅಂಥ ತಂತ್ರ ಯಶಸ್ವಿಯಾಗಲು ಸಹಾಯಮಾಡುತ್ತದೆ. ಆಲ್ಡಸ್ ಹಕ್ಸಲಿಯುವರು " ಲೋಡನ್ನದ ದೆವ್ವಗಳು " ಎಂಬ ಅತ್ಯುತ್ತಮ ಕಾದಂಬರಿಯಲ್ಲಿ ಗ್ರೆಂಡಿಯರ್ ಎಂಬ ಪಾದ್ರಿಯ ಮೇಲೆ, ಆತನು ತಮ್ಮ ಆಶಾಪೂರ್ತಿ ಮಾಡಲಿಲ್ಲವೆಂಬ ಕಾರಣದಿಂದ ದ್ವೇಷವುಂಟಾದ ಪೂಜಾರಿಣಿಯರು ಹಾಗು ಇತರರು ಆತನು ಮಾಟಗಾರನಾಗಿ ಲೋಡನ್ನದ ಚರ್ಚಿನ ಪೂಜಾರಿಣಿಯರ ಮೇಲೆ ದೆವ್ವಮಾಡಿ ಹಾಕಿದನೆಂಬ ಆರೋಪ-ವನ್ನು ಸಿದ್ಧಮಾಡಿ ಆತನನ್ನು ಚಿತ್ರಹಿಂಸೆಯಿಂದ ಜೀವಂತ ಸುಡಿಸಿದ, ೧೭ನೇ ಶತಮಾನದಲ್ಲಿ ನಡೆದ, ಘಟನೆಗಳನ್ನು ವರ್ಣಿಸಿದ್ದಾರೆ. ಚೌಡಿ ಎಂಬ ದೆವ್ವದ ವಿಷಯದಲ್ಲಿ ಅನೇಕ ಕಥೆ ಹೇಳುತ್ತಾರೆ. ಅದು ಪೂಜೆಯನ್ನು ಬಯಸುತ್ತದೆ.

ಪೂಜೆ ಸರಿಯಾಗಿ ದೊರೆಯದಿದ್ದರೆ ಅನೇಕ ರೀತಿಯ ಪೀಡೆ ಕೊಡುತ್ತದೆ. ಕಲ್ಲುಗಳನ್ನು ತೂರುವುದು, ಒಮ್ಮೆಲೆ ಬೆಂಕಿ ಎಬ್ಬಿಸುವುದು, ಅದೃಶ್ಯವಾಗಿದ್ದುಕೊಂಡು ಹೊಡೆಯುವದು, ಸಾಮಾನುಗಳನ್ನು ಇದ್ದಕ್ಕಿದ್ದಲ್ಲೇ ಅಡಗಿಸುವುದು, ಆಹಾರ ಉಣ್ಣಲು ಅಯೋಗ್ಯವಾಗಿ ಮಾಡುವುದು ಮುಂತಾದ ರೀತಿ ಘಟೋತ್ಕಚನ ಮಾಯಾಬಜಾರವನ್ನೇ ಮಾಡುತ್ತದೆ. ಇಲ್ಲಿಯಂತೆ ಮಲಬಾರದಲ್ಲಿ ಕುಟ್ಟಿಚಾಟನ್ ಎಂಬ ದೈವ ಕಾಟಕೊಡುತ್ತದೆ. ಚೌಡಿ ಹೆಣ್ಣಾದರೆ ಕುಟ್ಟಿಚಾಟನ್ ಹುಡುಗ.

ಕೆಲವರ್ಷಗಳ ಹಿಂದೆ ನಮ್ಮೂರಿನಲ್ಲಿ ಒಂದು ಚೌಡಿಯ ಪ್ರಕರಣ ನಡೆಯಿತು. ಮೂರುಸಂಜೆಯಾಗುವುದರೊಳಗೆ ಒಂದು ಕೇರಿಯಲ್ಲಿ ಎಲ್ಲಿಂದಲೋ ಕಲ್ಲುಗಳು ಬರುತ್ತಿದ್ದವು. ಸಾಮಾನುಗಳನ್ನು ಅಲ್ಲಲ್ಲಿ ಒಗೆಯುವುದು, ಎಲ್ಲಿಯಾದರೂ ಪಟಪಟ ಒಡೆದು ಶಬ್ದ ಮಾಡುವುದು, ಅಕಸ್ಮಾತ್ ಒಂದು ಕಡೆ ಹುಲ್ಲಿನ ಬಣವೆಗೆ ಬೆಂಕಿ ಹಚ್ಚುವುದು ಹೀಗೆಲ್ಲ ನಡೆಯುತ್ತಿದ್ದವು. ಇಲ್ಲಿಯ ಚೌಡಿಯು ಮಾತನಾಡುವ ಚೌಡಿಯಾಗಿತ್ತು. ಕನ್ನಡದಲ್ಲಿ ಕೀರುದನಿಯಲ್ಲಿ ಕೂಗುತ್ತಿತ್ತು. ಒಮ್ಮೊಮ್ಮೆ ಅಳುತ್ತಿತ್ತು. ಈ ಆಶ್ಚರ್ಯವನ್ನು ನೋಡಲು ಊರವರೂ ಪರಸ್ಥಳದವರೂ ಅಧಿಕ ಸಂಖ್ಯೆಯಲ್ಲಿ ಬಂದು ಸೇರುತ್ತಿದ್ದರು. ಬಂದ ಜನರಲ್ಲಿ ಪ್ರತಿಷ್ಠಿತರ ಹೆಸರೆತ್ತಿ ಕರೆಯುತ್ತಿತ್ತು ಚೌಡಿ. ಪೂಜೆಪುರಸ್ಕಾರಗಳು ಬರುತ್ತಿದ್ದವು. ಚೌಡಿಯು ಮನೆಯ ಮಾಲಿಕನು ಪೂಜಾರಿಯಾಗಿ ಪ್ರತಿಷ್ಠೆ ಪಡೆದನು. ಪ್ರಕೃತ ಲೇಖಕನೂ ತಿಂಗಳುಗಟ್ಟಲೆ ನಡೆದ ಜಾತ್ರೆಯಲ್ಲಿ ನಾಲ್ಕೈದು ದಿನ ಅಲ್ಲಿ ಸಂಜೆಹೊತ್ತಿನಲ್ಲಿ ಹೋಗಿ ಅಲ್ಲಿನ ವಿದ್ಯಮಾನಗಳನ್ನು

ನೋಡಿದುದುಂಟು. ಚೌಡಿ ಒಮ್ಮೆ ಮನೆಯ ಮಾಳಿಗೆಯ ಮೇಲೆ ಮಾತಾಡುತ್ತಿತ್ತು. ಹಾಗೆಯೇ ಅಲ್ಲಿಂದ ಆಚೆ ಮರವನ್ನು ಹತ್ತಿಕೊಂಡು ಮಾತಾಡುತ್ತಿತ್ತು. ಒಮ್ಮೆ ಕೊಟ್ಟಿಗೆಯಲ್ಲಿ ಮಾತಾಡಿದರೆ ಮತ್ತೊಮ್ಮೆ ಬಚ್ಚಲ ಕೊಟ್ಟಿಗೆಯಲ್ಲಿ ಅದರ ಸ್ವರ ಕೇಳಿಸುತ್ತಿತ್ತು. ನೋಡಿದ ಜನರಿಗೆ ಆಶ್ಚರ್ಯವಾಗುವಷ್ಟು ವೇಗದಿಂದ ಚೌಡಿ ಇದನ್ನೆಲ್ಲ ಮಾಡುತ್ತಿತ್ತು. ಭಕ್ತರು ತಂದ ಬಾಳೆಹಣ್ಣಿನ ಗೊನೆ, ಇತರ ಹಣ್ಣುಹಂಪಲಗಳನ್ನು ಮಾಳಿಗೆಯ ಮೇಲಿದ್ದಾಗ ಸ್ವೀಕರಿಸಿ ತಿಂದು ಉಳಿದುದನ್ನು ಬೀಸಾಡುತ್ತಿತ್ತು. ಆ ಪ್ರಸಾದವನ್ನು ತಿನ್ನಲು ಜನರಲ್ಲಿ ನೂಕುನುಗ್ಗಲೇ ನಡೆಯುತ್ತಿತ್ತು. ಎಂಟು ಮೈಲು ದೂರದ ಹಿತ್ತಲಿನ ಕಾಯಿಪಲ್ಲೆಯನ್ನು ಕೊಯ್ದು ಕಿತ್ತು ತಂದು ಚೌಡಿಯು ರಾಶಿ ಹಾಕುತ್ತಿತ್ತು (ಹಗಲಿನಲ್ಲೇ ತಂದದ್ದು). ಮಾತನಾಡುವ ಚೌಡಿಯು ಹತ್ತರ ದೂರದೂರ ಭಕ್ತರು ತಮ್ಮ ಕಳೆದ ಸಾಮಾನುಗಳ ಹಾಗು ರೋಗರುಜೆಗಳ ಕುರಿತು ಪ್ರಶ್ನೆಕೇಳುತ್ತಿದ್ದರು. ಅದು ಉತ್ತರ ಹೇಳುತ್ತಿತ್ತು. ಕಾಣಿಕೆಗಳು ಹಣದ ರೂಪದಲ್ಲಿಯೂ ಬರುತ್ತಿದ್ದವು. ಪೂಜಾರಿಯ ಆರ್ಥಿಕ ಸ್ಥಿತಿ ಸುಧಾರಿಸಿತು. ತಿಂಗಳುಗಟ್ಟಲೆ ನಡೆದ ಈ ಮೋಸವನ್ನು ಪತ್ತೆ ಹಚ್ಚಲು ನಿಶ್ಚಯಿಸಿ ಒಬ್ಬ ಮಹನೀಯರು ಟಾರ್ಚಿನ ಸಹಾಯದಿಂದ ಒಂದು ರಾತ್ರಿ ಚೌಡಿಯನ್ನು ಬೆಂಬತ್ತಿದರು. ಮಾಳಿಗೆಯಿಂದಿಳಿದು ಓಡಿದ ಚೌಡಿಯು ಕೊನೆಗೊಮ್ಮೆ ಬಚ್ಚಲ ಕೊಟ್ಟಿಗೆಯಲ್ಲಿ ಸಿಕ್ಕಳು. ಆ ಚೌಡಿ ಇಪ್ಪತ್ತೈದು ವರ್ಷ ಪ್ರಾಯದ ಸದೃಢದೇಹದ ಒಬ್ಬ ಹೆಣ್ಣುಮಗಳಾಗಿದ್ದಳು. ಟಾರ್ಚಿನ ಬೆಳಕಿನಲ್ಲಿ ಪತ್ತೆ

ಮಾಡಿ ಅವಳನ್ನು ಹಿಡಿದು ಚನ್ನಾಗಿ ಹೊಡೆದರು. ಮರುದಿನ-ದಿಂದ ಕಲ್ಲು ತೂರಾಟ ಮುಂತಾದ ಎಲ್ಲ ಬಗೆಯ ಚೌಡಿಯ ಆಟವು ನಿಂತುಹೋಯಿತು. ಆ ಮೇಲೆಯೂ ಜನರು ನಿಜ-ವಾಗಿಯೂ ಅಷ್ಟೆಲ್ಲ ಸಾಹಸ ಮಾಡುವುದು ಆ ಹೆಣ್ಣುಮಗ-ಳೊಬ್ಬಳಿಂದ ಸಾಧ್ಯವಲ್ಲ ಎಂದೂ ಚೌಡಿಯೇ ಅವಳ ಮೈಯಲ್ಲಿ ಆವೇಶವಾಗಿ ಹೀಗೆಲ್ಲ ನಡೆಯಿಸಿತೆಂದೂ ವಿವರಣೆ ಕೊಡುತ್ತಿ-ದ್ದರು. ಹೀಗೆಯೇ ಇನ್ನೂ ಅನೇಕ ಚೌಡಿಯ ಘಟನೆಗಳಲ್ಲಿ ದಾಯಾದಿಗಳ ಜಗಳ, ತಂದೆಮಕ್ಕಳ ಕಲಹ, ಆಗದವರ (ವೈರಿಗಳ) ಹೊಂತಕಾರಿತನ ಮುಂತಾದ ಹಿನ್ನೆಲೆಯಿದ್ದು ಹಸ್ತಕರ ಕೈವಾಡವು ನಡೆದಿರುವುದು ಕಾಣುತ್ತದೆ.

೧೧ ಅಪೂರ್ವ, ವಿಕೃತ ರೀತಿಗಳಿಂದ ಹೆದರಿಕೆ

ಅಪಸ್ಮಾರ, ಹಿಸ್ಟೀರಿಯಾ ಹಾಗೂ ಹುಚ್ಚು ಇವು ಭೂತಪಿಶಾಚಿಗಳ ಹೆದರಿಕೆಯನ್ನು ಪ್ರೋಷಿಸುತ್ತವೆ. ಸಿಡಿಲಿನ ಶಬ್ದವು ಹೆದರಿಕೆಯಿಂದ ಬಸುರಿಯರಿಗೆ ಗರ್ಭಪಾತವಾಗುವಂತೆ ಮಾಡುವುದುಂಟು. ಅಶಕ್ತರೋಗಿಗಳು ಸಿಡಿಲಿನ ಶಬ್ದಕೇಳಿ ಮರಣಪಟ್ಟಿದ್ದಿದೆ. ರಾತ್ರಿಯಲ್ಲಿ ವಿಕಾರವಾಗಿ ಕೂಗುವ ಬಳ್ಳುವಿನ ಸ್ವರವೂ ಸಾವ ಭೀತಿಯನ್ನು ರೋಗಿಗಳಲ್ಲಿ ಉಂಟು ಮಾಡುತ್ತದೆ. ಬಳ್ಳು ಕೂಗಿದ ಕಾಲಕ್ಕೆ ಆದ ಮರಣಗಳ ಮೂಲಕ ಆದರ ಕೂಗಿಗೂ ಮರಣಕ್ಕೂ ಗಂಟುಹಾಕಿರಬೇಕು. ಅಪರಿಚಿತ ಬಳ್ಳುವಿನ ಸ್ವರದ ಹೆದರಿಕೆ ಪರಿಚಿತ ನಾಯಿಗಳು ಕೂಗಿದುದರಿಂದ ಶಮನವಾಗುವುದುಂಟು. ಸಿರ್ಸಿ–ಸಿದ್ದಾಪುರ ಮುಂತಾದ ಘಟ್ಟದ ಹಳ್ಳಿಗಳಲ್ಲಿ ಒಂದು ಜಾತಿಯ ಹಕ್ಕಿ ಇದೆಯಂತೆ. ಅದು "ಸುಟೆರ್" ಎಂಬ ಧ್ವನಿಮಾಡಿ ಕೂಗುವು-ದಂತೆ. ಅದರ ಕೂಗಿನಿಂದ ರೋಗಿಗಳಿಗೆ ಮರಣದ ಭೀತಿ ಆಗುತ್ತದೆ. "ಸುಟೆರ್‌ಹಕ್ಕಿ" ಎಂದು ಕರೆಯಲ್ಪಡುವ ಆ ಹಕ್ಕಿಯ ಸ್ವರ ಸುಡುವ ಸ್ಮಶಾನವನ್ನು ನೆನಪಿಗೆ ತರುವುದೆಂದು ಅನಿಸುತ್ತದೆ. ಅದು ಕೂಗಿದರೆ ರೋಗಿಗಳಿಗೆ ಮರಣ ಸಂಭವ ಎಂಬ ಕಲ್ಪನೆ ಜನರಲ್ಲಿ ಪ್ರಚಾರವಾಗಿದೆ.

ಕೆಲ ಅಪೂರ್ವ ಸಂಗತಿಗಳು ವಿಶೇಷಾರ್ಥದ ನಿಮಿತ್ತ ಅಥವಾ ಶಕುನಗಳಾಗುತ್ತವೆ. ಧೂಮಕೇತು, ಗ್ರಹಣಗಳು ಅಪಾಯಸೂಚಕಗಳು. ಅದರಂತೆ ಕಂಕಣಾಕೃತಿಯ ಖಗ್ರಾಸ ಸೂರ್ಯಗ್ರಹಣಗಳಲ್ಲಿ ಹಗಲಿನಲ್ಲಿ ನಕ್ಷತ್ರ ಕಂಡರೆ ಅದು ಆಗ ಹುಟ್ಟುವದರಿಂದಾಗುವ ಅನಿಷ್ಟ ಸೂಚಕ. ದುರ್ಯೋಧನನ ಹುಟ್ಟಿನ ಕಾಲಕ್ಕೆ ಆದ ಉತ್ಪಾತ ಸೂಚನೆಯ ಕವಿ-ವರ್ಣನೆಗಳನ್ನು ನೋಡಬೇಕು.

ನರಿಯ ಮೋರೆಯನ್ನು ನೋಡಿ ಅದರ ಬಾಲವನ್ನು ನೋಡದಿರುವುದು ಅಪೂರ್ವ. ಪುಕ್ಕಲು ಪ್ರಾಣಿಯಾದ ನರಿ ಯಾರನ್ನಾದರೂ ಕಂಡ ಕೂಡಲೆ ಬೆನ್ನು ತಿರುವಿ ಓಡ ಹತ್ತುತ್ತದೆ. ಆಗ ಅದರ ಬಾಲ ದೃಷ್ಟಿಗೆ ಬೀಳುತ್ತದೆ. ಒಮ್ಮೊಮ್ಮೆ ಅದರ ಬಾಲವನ್ನು ನೋಡದೆ ಮೋರೆಯನ್ನು ಮಾತ್ರ ನೋಡಲು ಸಾಧ್ಯವಾದರೆ ಆ ದಿನ ಅಪೂರ್ವ ಲಾಭವೆಂದು ನಮ್ಮ ಜನರ ಕಲ್ಪನೆ. ಅದೃಷ್ಟ ಒದಗಿ ಬಂದರೆ 'ನರಿಯ ಮೋರೆ ನೋಡಿದ್ದೆ' ಎನ್ನುವುದುಂಟು. ಗೂಬೆಯು ಸಾಮಾನ್ಯ-ವಾಗಿ ಹಗಲಿನಲ್ಲಿ ಕಾಣುವುದು ಅಪೂರ್ವ. ಅದು ಹಗಲಿನಲ್ಲಿ ಕಂಡರೆ ಅನಿಷ್ಟವೆಂದು ತಿಳಿಯುವುದುಂಟು. ಮನುಷ್ಯರ ಮೋರೆಯನ್ನು ಸ್ವಲ್ಪ ಹೋಲುವ ಅದರ ಮೋರೆಯೂ, ಸ್ವರವೂ ಅದು ಭೂತದ ಪಕ್ಷಿ ಎಂಬ ಕಲ್ಪನೆಗೆ ಕಾರಣವಾಗಿರ-ಬಹುದು. ಅನೇಕ ಆಫ್ರಿಕನ್ ಪಂಗಡಗಳವರು ಅವಳಿಮಕ್ಕಳ ಜನ್ಮ ನೈಸರ್ಗಿಕವಲ್ಲ ಎಂದು ತಿಳಿಯುತ್ತಾರೆ. ಒಂದು ಮಗು ಗಂಡನದಲ್ಲ, ಭೂತನದೇ ಎಂದು ಅವರ ಕಲ್ಪನೆ. ಆಫ್ರಿಕದ

ಕೆಲವು ಭಾಗಗಳಲ್ಲಿ ಅವಳಿ ಮಕ್ಕಳು ಹುಟ್ಟಿದ ಕೂಡಲೇ ಕೊಂದು ಬಿಡುತ್ತಿದ್ದರು. ಅದು ತಾಯಿಯೇ ಮಾಡಬೇಕಾದ ಕೆಲಸವಾಗಿತ್ತು. ಪ್ರವಾಸದಲ್ಲಿ ಒಕ್ಕಣ್ಣಿನ ಮನುಷ್ಯನನ್ನು ಆರು ಮೈಲುಗಳೊಳಗೆ ಭೆಟ್ಟಿಯಾಗುವವನಿಗೆ ಗಂಡಾಂತರವೆಂಬ ಕಲ್ಪನೆಯಿದೆ.

ಪರದೇಶೀಯರು ಬಂದರೆ ಅವರ ಸಂಗಡ ವಿದೇಶೀಯ ಭೂತಗಳು ಬರುವವೆಂದು ಕಾಡುಜನರು ಹೆದರುತ್ತಾರೆ. ಭೂತವೈದ್ಯನು ಬಂದು ಕೆಲ ಕ್ರಮ ಜರುಗಿಸಿದ ನಂತರವೇ ಅನೇಕ ಕಡೆ ವಿದೇಶಿಯರನ್ನು ತಮ್ಮಲ್ಲಿ ಬರಮಾಡಿಕೊಳ್ಳು-ತ್ತಾರೆ. ಕ್ರೆವೊ ಎಂಬ ಯುರೋಪಿಯನ್ನನು ದಕ್ಷಿಣ ಅಮೇರಿಕಾದ ಅಪಲ್ಕೆ ಇಂಡಿಯನರ ಪ್ರದೇಶಕ್ಕೆ ಹೋದಾಗ ಅನೇಕ ದೊಡ್ಡ ಇರುವೆಗಳನ್ನು ತಂದು ಅವನ ಹತ್ತಿರ ಕೊಟ್ಟು 'ತಮಗೆ ಇರುವೆಗಳಿಂದ ಕಡಿಸು' ಎಂದು ಅನೇಕ ದೊಡ್ಡವರು ಚಿಕ್ಕವ-ರೆಲ್ಲಾ ಇರುವೆಗಳಿಂದ ಕಡಿಸಿಕೊಂಡು ಮುಖಗಳಿಂದ ಊದಿಸಿಕೊಂಡರಂತೆ. ಅಲ್ಲಿಯ ಇರುವೆಗಳ ತೀಕ್ಷ್ಣ ಕಡಿತಕ್ಕೆ ಹೆದರಿ ವಿದೇಶೀಯ ಭೂತಗಳು ಪಲಾಯನಮಂತ್ರ ಪಠಿಸಿರಬೇಕು!

೧೨ ರೋಗಗಳ ಚಿಕಿತ್ಸೆ

ರೋಗಗಳು ನಿಸರ್ಗಾತೀತವಾದ ಶಕ್ತಿಗಳಿಂದ ಬರುವವೆಂದು ಅನಾಗರಿಕರ ಕಲ್ಪನೆಯಿದೆ. ಸಾಮಾನ್ಯವಾಗಿ ಮಾಟದ ಮೂಲಕ ಶರೀರದಲ್ಲಿ ಪ್ರವೇಶಮಾಡಿದ ಶಕ್ತಿಯಿಂದಾಗಲಿ ಅಥವಾ ಮಾಟದಿಂದಲೇ ಶರೀರದಿಂದ ಎಳೆದು ತೆಗೆಯಲ್ಪಟ್ಟ ಶಕ್ತಿಯಿಂದಾಗಲಿ ರೋಗಬರುವುದೆಂದು ಹೀಗೆ ಅನಾರಗಿಕನು ರೋಗ ಬರಲು ಎರಡು ಮುಖ್ಯವಾದ ಕಾರಣಗಳನ್ನು ಹೇಳುತ್ತಾನೆ. ಅನೇಕ ಅನಾಗರಿಕ ಜನಾಂಗಗಳವರು ವನಸ್ಪತಿಗಳನ್ನೂ ಔಷಧವಸ್ತುಗಳನ್ನೂ ಉಪಯೋಗಿಸುತ್ತಾರೆ. ಹಾಗು ಅವು ನಿಜವಾದ ಔಷಧ ಗುಣಗಳನ್ನು ಹೊಂದಿವೆ. ಆದರೆ ಅವು ಮೋಡಿಯ ವಿಧಾನದ ಅಥವಾ ಮಾಟದ ಘಟಕಗಳೆಂದು ತಿಳಿಯಲ್ಪಡುತ್ತವೆಯೇ ಹೊರತು ಔಷಧಗಳೆಂದಲ್ಲ. ಭೂತವೈದ್ಯನ ಮೋಡಿಯ ಶಕ್ತಿಯೇ ರೋಗಗಳನ್ನು ಗುಣಮಾಡಲು ಕಾರಣವೆಂದೂ ತಿಳಿಯುತ್ತಾರೆ. ಅಸ್ಟ್ರೇಲಿಯದ ಭೂತವೈದ್ಯನು ರೋಗಿಯನ್ನು ನೆಲದ ಮೇಲೆ ಮಲಗಿಸಿ ಕೆಲವು ಮಂತ್ರಗಳನ್ನು ಪಠಿಸಿ, ರೋಗಿಯ ಭೂತವನ್ನು ಬಾಯಿಯಿಂದ ಹೀರಿತೆಗೆದು ದೂರದ ಜಾಗಾದಲ್ಲಿ ಹುಗಿಯುತ್ತಾನೆ.

ಆಫ್ರಿಕಾ, ಮೊಂಗೋಲಿಯಾ, ಹಿಂದುಸ್ತಾನ, ಮಲಯಾ, ಸಿಲೋನ ಮೊದಲಾದ ಬಹಳ ದೇಶಗಳಲ್ಲಿ ಭೀಕರವಾದ ದೆವ್ವದ

ಮುಖವಾಡ ಹಾಕಿಕೊಂಡು ಕುಣಿಯುವ, ದೆವ್ವವನ್ನು ಬಿಡಿಸುವ ಪದ್ಧತಿಯಿದೆ. ಮಾನಸಶಾಸ್ತ್ರದ ಮಾನಸಿಕ ಚಿಕಿತ್ಸೆಯ ಹಾಗೆ ಅನೇಕ ಸಂದರ್ಭಗಳಲ್ಲಿ ಅವುಗಳ ಪ್ರಯೋಜನ ಕಂಡು ಬರುತ್ತದೆ. ವಿಶೇಷವಾಗಿ ಮನೋರೋಗಗಳನ್ನು, ಭೂತೋನ್ಮಾದ ಮೊದಲಾದ ವಿಕಾರಗಳನ್ನು ಗುಣಮಾಡುವಲ್ಲಿ ಅವುಗಳಿಂದ ಸಹಾಯವಾಗುತ್ತದೆ.

ಸಲಹೆ (Suggestion) ಕೊಡುವುದರಿಂದ ಮನಸ್ಸಿನ ಮೇಲಿನ ಪರಿಣಾಮವು ದೇಹದ ಮೇಲೆಯೂ ಬದಲಾವಣೆ ಮಾಡಬಹುದೆಂಬುದು ಸಿದ್ಧವಾಗಿದೆ. ದೆವ್ವಭೂತಗಳನ್ನು ನಂಬಿದ ಜನರಿಗೆ ಅಂಥ ರೀತಿಯಲ್ಲಿ ಗುಣವಾಗುವ ಭರವಸೆಯನ್ನು ಕೊಡುವ ಶಕ್ತಿ ಅವುಗಳಿಗಿದೆ. ಈ ರೀತಿ "ಮೈಮೇಲೆ" ಬರುವವರು ಅಪಸ್ಮಾರ, ಉನ್ಮಾದ (ಹಿಸ್ಟೀರಿಯಾ) ಮುಂತಾದ ರೋಗಿಗಳಂತೆ ಮೈಯನ್ನು ವಿಕಾರವಾಗಿ ಕುಣಿಸಿ, ದೇಹಭಾನವಿಲ್ಲದ ಅವಸ್ಥೆಯನ್ನು ಪಡೆದು ರೋಗಿಗಳ ಮನದ ಮೇಲೆ ನಿಯಂತ್ರಣವಿಡಬಲ್ಲರು. ಹಾಗೆ ಭೂತದ ಅಥವಾ ದೇವರ ಆವೇಶವಾದವರನ್ನು ಭೂತ ಅಥವಾ ದೇವರೆಂದೇ ತಿಳಿದು ಸಂಬೋಧಿಸಿ ರೋಗನಿದಾನವನ್ನೂ ಭವಿಷ್ಯವನ್ನೂ ಕೇಳಿಕೊಳ್ಳುತ್ತಾರೆ. ಕೊಡಗಿನಲ್ಲಿ ಪಿತೃಪೂಜೆಯ ಹಬ್ಬದಲ್ಲಿ ಭೂತಪಾತ್ರಿಯು ಸತ್ತುಹೋಗಿದ್ದ ಪಿತೃಗಳಲ್ಲಿ ಯಾರಾದರೊಬ್ಬನ ಆವೇಶವನ್ನು ಪಡೆದು ಪಿತ್ರಾರ್ಜಿತ ಆಸ್ತಿಯ ವ್ಯವಸ್ಥೆಯ ಹಾಗು ಆಚಾರ-ವಿಚಾರಗಳ ಪ್ರಶ್ನೆ ಕೇಳುತ್ತಾನೆ. ಆಗ ಬದುಕಿದ್ದ ಆತನ ಪರಿವಾರದವರು ತಮ್ಮ ಕಷ್ಟಸುಖಗಳಿಗೆ ಸಂಬಂಧಿ

ಸಿದ ಅನೇಕ ಪ್ರಶ್ನೆಕೇಳಿ ಉತ್ತರ ಪಡೆಯುತ್ತಾರೆ. "ನನ್ನಮಗು ರೋಗದಿಂದ ಗುಣಹೊಂದಬಹುದೋ ?" "ನನಗೆ ಗಂಡು ಮಗುವೇಕೆ ಆಗಿಲ್ಲ?" ಮುಂತಾಗಿ. ಉತ್ತರ ಕನ್ನಡ ಜಿಲ್ಹೆಯ ದೇವಾಲಯಗಳಲ್ಲಿ ವಿಶೇಷ ಪೂಜೆಯ ಅಥವಾ ಉತ್ಸವದ ದಿನಗಳಲ್ಲಿ ಕೆಲ ವಿಶಿಷ್ಟ ಜನರಿಗೆ "ಬಾಗಿಲಜಟ್ಗ" ಬರುತ್ತದೆ. ಜಟ್ಗ "ಜಟ್ಟಿಗ," ಪರಾಕ್ರಮದಿಂದ ಹೋರಾಡಿ ಸತ್ತ ವೀರನ ಭೂತವಿರಬೇಕು ಆರತಿಯ ಕಾಲಕ್ಕೆ ಅವರಿಗೆ ಭೂತವು ಮೈಮೇಲೆ ಬರುತ್ತದೆ. ಅವರು ಗರ್ಭಗುಡಿಯ ಬಾಗಿಲಪಟ್ಟಿ ಹಿಡಿದುಕೊಂಡು ಆವೇಶದಿಂದ ಕುಣಿಯುತ್ತಾರೆ. ಆವೇಶದಿಂದ ಕೂಗುತ್ತ ಪಾತಿಗಳ ಭೂತವು ಪಾತ್ರಿಗಳ ಬೆನ್ನ ಮೇಲೆ ಮುಷ್ಟಿಯಿಂದ ಪೆಟ್ಟುಕೊಡುತ್ತದೆ. ಅನೇಕ ಖಟ್ಲೆ-ಕಂದಾಚಾರಗಳ ವಿಷಯಗಳ ಕುರಿತು ಕೂಗಾಡಿ, ಭಕ್ತರಿಗೆ ಬೆದರಿಕೆ ಹಾಕಿ ಬಾಗಿಲಜಟ್ಗವು ಸೇವೆಗಳ, ಪೂಜೆಗಳ ಭರವಸೆ-ಯನ್ನು ಭಕ್ತರಿಂದ ಪಡೆಯುತ್ತದೆ. ಜನರು ಊರಲ್ಲಿ ಬಂದ ರೋಗರುಜಿನ, ಹಾಗು ಇತರ ಸಂಕಷ್ಟಗಳ ವಿಷಯ ಹೇಳಿ ಪರಿಹಾರವನ್ನು ಕೇಳಿಕೊಳ್ಳುತ್ತಾರೆ. ಗ್ರೀಸಿನ ಡೆಲ್ಫಿಯ ಅಪೋಲೊ ದೇವಾಲಯದ ಹಾಗು ಡೊಡೊನಾದ ಪೂಜಾರಿ-ಗಳು ಕಣಿಹೇಳುತ್ತಿದ್ದದು ಪ್ರಸಿದ್ಧವಿದೆ. ಇರಾಣದ ಚಕ್ರವರ್ತಿ ಸರ್ಕ್ಸ (Xerxes) ಗ್ರೀಸಿನ ಮೇಲೆ ದಾಳಿ ಮಾಡಿದರೆ ಪರಿಣಾಮವೇನಾಗಬಹುದೆಂದು ಡೊಡೊನಾದ ಕಣಿಹೇಳುವ ಪೂಜಾರಿಣಿಯನ್ನು ಕೇಳಿದಾಗ ಅವಳು "ದೊಡ್ಡ ಸಾಮ್ರಾಜ್ಯ ನಾಶವಾಗುವದು" ಎಂದು ಭವಿಷ್ಯ ಹೇಳಿದಳು. ಗ್ರೀಸಿನ ನಾಶವಾಗುವುದೆಂದು ತಿಳಿದು ಧೈರ್ಯಪಡೆದು ರಾಜನು ಗ್ರೀಸಿನ

ಮೇಲೆ ದಾಳಿಮಾಡಲು, ನಂತರ ಅವನಿಗೇ ಸೋಲಾಗಿ ಅವನ ಸಾಮ್ರಾಜ್ಯವೇ ನಾಶವಾಯಿತು. ಹೀಗೆ ಅನೇಕ ಸಂದರ್ಭಗಳಲ್ಲಿ ಸಂದಿಗ್ಧ ಉತ್ತರಗಳನ್ನು ಈ 'ಮೈಮೇಲೆ' ಬರುವವರು ಕೊಡುತ್ತಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಜಾತ್ರೆ ನಡೆಯುವ ಸಂದರ್ಭದಲ್ಲಿ ಕಲಶಗಳ ಮೇಲೆ ಅಡಕೆಯ ಸಿಂಗಾರ ಹಾಗು ಇತರ ಹೂಗಳಿಂದ ಅರ್ಧವರ್ತುಲದ ಸುಂದರವಾದ ಕಮಾನನ್ನು ರಚಿಸಿ ಸಿಂಗರಿಸಿ, ನಡುವೆ ದೇವರ ಮುಖವನ್ನು ಕಲಶದ ಮೇಲೆ ಕೂಡ್ರಿಸಿಕೊಂಡು ತಲೆಯ ಮೇಲೆ ರುಮಾಲು ಸುತ್ತಿಕೊಂಡು, ಅದಕ್ಕೆ ಕಲಶವನ್ನು ಕಟ್ಟಿಕೊಂಡು ತಲೆಯ ಮೇಲಿಟ್ಟುಕೊಂಡು "ಕಲಶದವರು" ಬರುತ್ತಾರೆ. ಅವರಿಗೂ ದೇವರು "ಮೈಮೇಲೆ" ಬರುತ್ತದೆ. ಆಗಲೂ ಸುತ್ತಲಿನ ಜನರು ತಮ್ಮ ಕಷ್ಟಗಳನ್ನು ಹೇಳಿಕೊಂಡು ದೇವರ ಹತ್ತಿರ ಪರಿಹಾರದ ಕ್ರಮಗಳನ್ನು ಕೇಳಿಕೊಳ್ಳುತ್ತಾರೆ. ಭೂತಬಾಧೆ ಆದ ಹುಚ್ಚರು ಹಾಗು ಇತರ ರೋಗಿಗಳನ್ನು ಮುಂದೆ ನಿಲ್ಲಿಸಿದರೆ ಕಲಶದವರು ಆ ರೋಗಿಗಳಿಗೆ ಅರ್ಥಾತ್ ಅವರನ್ನು ಆಕ್ರಮಿಸಿದ ಭೂತ-ಪಿಶಾಚಿಗಳಿಗೆ ದೊಡ್ಡದಾಗಿ ಕೂಗಿ ಹೆದರಿಕೆ ಹಾಕಿ ಬೆತ್ತದಿಂದ ಹೊಡೆದು ಭೂತಗಳ ಉಚ್ಚಾಟನೆಯನ್ನು ಮಾಡುತ್ತಾರೆ. "ಮೈಮೇಲೆ" ಬಂದಾಗ ಕಲಶಹೊತ್ತವರ ಮೈಯೆಲ್ಲ ನಡುಗುತ್ತಿರುತ್ತದೆ.

ಯಾರಿಗಾದರೂ ರೋಗ ಬಂದರೆ ನಮ್ಮಲ್ಲಿಯ ಹಳ್ಳಿಗಳಲ್ಲಿ ದೈವದ ಉಪದ್ರವದಿಂದಲೇ ರೋಗ ಬಂದಿದೆಯೆಂಬ ಕಲ್ಪನೆ ಮಾಡುತ್ತಾರೆ. ರೋಗವನ್ನು ಗುಣಮಾಡಲು ಮೊದಲು

"ನೋಟಗಾರ"ರ ಹತ್ತಿರ ನೋಟ ನೋಡಿಸುವುದು ವಾಡಿಕೆಯಾಗಿದೆ. ಮಣೆಯ ಮೇಲೆ ಕವಡೆ ಅಥವಾ ಅಕ್ಕಿಯ ಕಾಳು ಇಟ್ಟುಕೊಂಡು ಅದನ್ನು ತಿರುಗಿಸುತ್ತ, ಕೆಲಭಾಗ ಬೇರೆ ಮಾಡಿ ಅದನ್ನು ಲೆಕ್ಕಮಾಡುತ್ತ, ಅದರ "ಆಯು"ದ ಮೇಲಿಂದ ಇಂಥ ದೆವ್ವನ ಪೀಡೆಯಿಡೆಯೆಂದು ನಿರ್ಣಯಿಸುವರು. ಇದಕ್ಕೆ ಸೋದಿಕೆ (ದೆವ್ವವನ್ನು ಶೋಧಿಸುವಿಕೆ) ಎನ್ನುವರು. ನೋಟನೋಡುವಾಗ ಚಂಡಿ, ರಣಗೊಲೆ, ಮಾರಿ, ರಕ್ತದೇವತೆ, ಗಂಡುಗೊಲೆ-ಹೆಣ್ಣುಗೊಲೆ (ಕೊಲೆಯಾಗಿ ಸತ್ತ ಗಂಡು-ಹೆಣ್ಣುಗಳ ಭೂತಗಳು) ಮುಂತಾದ ಅನೇಕ ಭೂತ, ದೆವ್ವ, ಪಿಶಾಚಿಗಳ ಹೆಸರು ಹಿಡಿದು ಕೂಗುತ್ತ, ಕುಳಿತಲ್ಲಿಯೇ ಮೈಯನ್ನೆಲ್ಲಾ ಸುತ್ತು ತಿರುಗಿಸುತ್ತ ಮಧ್ಯೆಮಧ್ಯೆ ವಿಕಾರವಾಗಿ ಧ್ವನಿಯನ್ನು ಒಳಗೆ ತಕ್ಕೊಳ್ಳುತ್ತ, ಹುಂಕಾರ ಧ್ವನಿಮಾಡುತ್ತ, ಛೀ, ಥೂ ಮುಂತಾಗಿ ಕೂಗುತ್ತ, ದೆವ್ವಗಳ, ಭೂತಗಳ ಉಚ್ಚಾಟನೆ ನಡೆಸುತ್ತಾರೆ. ಕೋಳಿಗಳ ಬಲಿ ಕೊಡಿಸುವೆವೆಂತಲೂ ಆಸೆ ತೋರಿಸಿ ರೋಗಿಯನ್ನು ಬಿಟ್ಟು-ಹೋಗುವಂತೆ ಮನ ಒಲಿಸುತ್ತಾರೆ. ಸಾಮ, ದಾನ, ಭೇದ, ದಂಡಗಳ ಉಪಾಯಗಳನ್ನು ಉಪಯೋಗಿಸಿ ತಮ್ಮ ಆರ್ಭಟಿಯಿಂದಲೇ ದೆವ್ವ, ಭೂತಗಳೂ ಇವರ ಸ್ವರೂಪ ಗೊತ್ತಿಲ್ಲದ ಮಕ್ಕಳು ಮರಿಗಳೂ, ಪ್ರಾಣಿಗಳೂ, ಅಪರಿಚಿತರೂ ತತ್ತರಿಸಿ ಹೋಗುವಂತೆ ಶ್ವಾಸವನ್ನು ಹಾರಿಸಿ ಗದ್ದಲವನ್ನು ಮಾಡುತ್ತಾರೆ. ದೆವ್ವದಿಂದಲೇ ರೋಗ ಬಂದಿದ್ದಾದರೆ ಔಷಧ ಕೊಟ್ಟರೂ ನೋಟನೋಡಿಸದ ಹೊರತು ಕಡಿಮೆಯಾಗುವದಿಲ್ಲವೆಂಬ ಮನಸ್ಸಿನ ಭ್ರಮೆ ಅನೇಕರಿಗಿದೆ. ಕಾಲಿಗೆ ಕಲ್ಲು

ತಾಕಿ ಪೆಟ್ಟಾದರೂ, ತಲೆನೋವು ಮಾತ್ರ ಇದ್ದರೂ ಅಥವಾ ಹೆಚ್ಚಿಗೆ ಉಂಡು ಅಜೀರ್ಣವಾದರೂ ಸಹ ಅನೇಕರು ನೋಟ ನೋಡಿಸುತ್ತಾರೆ ಔಷಧೋಪಚಾರ ಮಾಡಿಕೊಂಡೂ ತಮಗೆ ನೋಟ ನೋಡಿಸಿದ್ದರಿಂದಲೇ ಲಘುವಾಯಿತೆಂದು ತಿಳಿಯು-ತ್ತಾರೆ. ಕುಮಟಾ ತಾಲೂಕಿನ ಹೆಗಡೆ ಗ್ರಾಮದಲ್ಲಿ "ಅಮ್ಮನ ಗದ್ದಿಗೆ" ಎಂಬ ಹರಿಜನರ ಭೂತಸ್ಥಾನವಿದೆ. ಅಲ್ಲಿ ಶುಕ್ರವಾರ ಪೂಜಾಂಗೆ ದೇವರ ಆವೇಶ ಬರುತ್ತದೆ. ಅಲ್ಲಿಯೂ ರೋಗಗಳ ಪರಿಹಾರ ಕುರಿತು, ತಮ್ಮ ಇತರ ಸಮಸ್ಯೆಗಳ ಕುರಿತು ದೇವರ ಸಲಹೆಯನ್ನು ಕೇಳುತ್ತಾರೆ. ಇಂಥವರ ಔಷಧ ಮಾಡಿಸಲೋ? ಎಂದು ಕೇಳಿ ದೇವರ ಒಪ್ಪಿಗೆ ಪಡೆದೇ ಡಾಕ್ಟರರ ಔಷಧವನ್ನು ತರುತ್ತಾರೆ. ಕಾಣಿಕೆ ಕೊಟ್ಟು ಅಮ್ಮನ ಗದ್ದುಗೆಯ ಪ್ರಸಾದವನ್ನು ತಂದೇ ತರುತ್ತಾರೆ. ಅಜ್ಞಜನರ ಮಾನಸಿಕ ಆಗತ್ಯವನ್ನು ಮನಗಂಡೇ ವೇದಗಳಲ್ಲಿ ರೋಗಗಳಿಗೆ ಔಷಧಗಳೊಡನೆ ಮಂತ್ರಗಳನ್ನೂ ಜೊತೆಯಾಗಿಯೇ ಹೇಳಿರು ವುದು. ನೋಟಗಾರರು ಯಾರ ಮೇಲಾದರೂ ದೆವ್ವ ಮಾಡಿ ಹಾಕಲೂ ಬಲ್ಲರಂತೆ. ಹಾಗೆ ಮಾಡುವಾಗ ಅವರ ಮನೆಯ ಸಹಾಯದ ದೆವ್ವಗಳ ಮುಖ ಕಟ್ಟಿ ಇತರ ದೆವ್ವಗಳನ್ನು ಅವರ ಮೇಲೆ ಬಿಡುತ್ತಾರೆಂದು ಹೇಳುತ್ತಾರೆ. ಆ ದೆವ್ವ ಮಾಡಿದ್ದರಿಂದ ಕಷ್ಟಹೊಂದಿದವರು ಇತರ ಸಮರ್ಥ ನೋಟಗಾರರಿಂದಾಗಲಿ ಇಲ್ಲವೆ ಮಾಂತ್ರಿಕರಿಂದಾಗಲಿ ದೆವ್ವದ ಉಪದ್ರವವನ್ನು ಕಡಿಮೆಮಾಡಿಕೊಳ್ಳಬೇಕಾಗುತ್ತದೆ. ದೆವ್ವ-ಮಾಡಿಸಿ ಹಾಕಿದ್ದಾರೆಂಬ ಸಂಶಯದಿಂದ ಸಂಬಂಧಿಕರೊಳಗೂ ಕಲಹ ಏಳುತ್ತದೆ. ಪರಸ್ಪರ ವೈರಗಳಾದನಂತೂ ಪರಸ್ಪರ

ದೆವ್ವ ಮಾಡಿಸುವ, ತಮ್ಮ ಮೇಲಿನ ದೆವ್ವ ಬಿಡಿಸುವ ಕೆಲಸವೇ ಇಬ್ಬರಿಗೂ. ಬ್ರಾಹ್ಮಣರಲ್ಲಿಯೂ ದೆವ್ವದ ನಂಬಿಕೆಯುಳ್ಳವರು, ರೋಗವು ಔಷಧದಿಂದ ಸುಲಭದಲ್ಲಿ ಗುಣವಾಗದಿದ್ದರೆ, ನೋಟ ನೋಡಿಸುವವರು, ಹಳ್ಳಿಗಳಲ್ಲಿ ಇದ್ದಾರೆ. ಇಬ್ಬರು ಅಣ್ಣ-ತಮ್ಮಂದಿರ ದಾಯಾದಿಮತ್ಸರದಲ್ಲಿ ಹಿರಿಯನು ತಮ್ಮನ ಮನೆಯ ಮೇಲೆ ದೆವ್ವ ಮಾಡಿ ಹಾಕಿದನಂತೆ. ನಂತರ ತಮ್ಮನ ಮನೆಯವರಿಗೆ ಎಲ್ಲರಿಗೂ ಒಂದಿಲ್ಲೊಂದು ಕಾಹಿಲೆ ಪ್ರಾರಂಭವಾಯಿತಂತೆ. ಕೊಟ್ಟಿಗೆಯಲ್ಲಿ ಎಮ್ಮೆಗಳು ಹಾಲು ಕೊಡುವುದನ್ನು ಕಡಿಮೆ ಮಾಡಿದುವು. ದನಗಳು ಸಾಯುಹತ್ತಿದುವು ದೆವ್ವ ಮಾಡಿ ಹಾಕುವ ಮೊದಲು ಉಂಡಷ್ಟು ಅನ್ನಸಾಲದೆ ಆ ತಮ್ಮನ ಮನೆಯ ಪ್ರತಿಯೊಬ್ಬರೂ ಮೊದಲಿನ ಎರಡು ಪಟ್ಟು ಹೆಚ್ಚು ಆಹಾರವನ್ನು ಬಕ್ಕರಿಸಹತ್ತಿದರು. ಉಣ್ಣುವವರ ಹೊಟ್ಟೆಯಲ್ಲಿಯೇ ಭೂತಹೊಕ್ಕಿದೆಯೋ ಎನ್ನುವ ಹಾಗೆ. ನೋಟ ನೋಡಿಸಿದ್ದರಿಂದಲೇ ಅವರ ಪರಿಸ್ಥಿತಿ ಸುಧಾರಿಸಿತು.

ಹೆದರಿಕೆಯಿಂದಾದ ಮನೋವಿಕಾರಗಳಿಗೆ ಇಂಥ ಉಪಚಾರಗಳು ತಾತ್ಪೂರ್ತಿಕ ಶಮನವನ್ನು ನೀಡಬಹುದು. ಆದರೆ ಪ್ರಾಣಿಗಳಿಗೂ ಈ ಮನುಷ್ಯನ ದೃಷ್ಟಿ, ಪಿಶಾಚಿ, ಭೂತಗಳ ಕಾಟವಿದೆ. ಎಮ್ಮೆ ಸರಿಯಾಗಿ ಹಾಲು ಕರೆಯದಿದ್ದರೆ ದೃಷ್ಟಿ ತೆಗೆಯುವ ಕ್ರಮವಿದೆ. ಕಣ್ಣುಕೋರೈಸುವ ಬಣ್ಣಬಣ್ಣಗಳನ್ನು ಬಡಿದು ಕತ್ತದ ಹಗ್ಗದ ಪಟ್ಟಿಯನ್ನು ದನಗಳ ಕುತ್ತಿಗೆಗೆ ಕಟ್ಟುತ್ತಾರೆ. ಅದಕ್ಕೆ 'ದೃಷ್ಟಿದಂಡಿ' ಎನ್ನುತ್ತಾರೆ. ಪಿಶಾಚಿ ಬಾಧೆಯುಳ್ಳ ಕೆಲವು ಎಮ್ಮೆಗಳು 'ನೋಟ' ನೋಡಿಸಿದರೆ

ಎಂಟು ದಿನ ಸರಿಯಾಗಿ ಹಾಲು ಕೊಡುತ್ತವೆ; ಮತ್ತೆ ತಂಟೆ ಪ್ರಾರಂಭವಾದರೆ ಮತ್ತೆ 'ನೋಟ' ನೋಡಿಸಬೇಕು. ಆದರೆ ಪಟ್ಟಣದ ಎಮ್ಮೆಗಳಿಗೆ ಮಾತ್ರ ಭೂತಪಿಶಾಚಿಗಳ ಕಾಟವಿಲ್ಲ ಎಂದು ಕಾಣುತ್ತದೆ.

ಬಸುರಿಯರು ಹಡೆಯುವಾಗ ಬಹಳ ಹೊತ್ತು ಕೋಟಲೆಯಾದರೂ ಅದು ದೈಹಿಕ ಕಾರಣದ ಮೂಲಕ ಎಂದು ತಿಳಿಯದೆ ಭೂತದ ಪೀಡೆ, ಅಥವಾ ದೆವ್ವ-ಪಿಶಾಚ ಬಾಧೆಯೇ ಕಾರಣವೆಂದು ತಿಳಿದು ಭೂತೋಚ್ಚಾಟನೆಯ ಕ್ರಮವನ್ನು ನಡೆಯಿಸುವುದು ನಮ್ಮ ಕಡೆಯ ಜನರಲ್ಲಿ ರೂಢವಾಗಿದೆ. ಆದರೆ ತ್ರಾಸು ಕೊಡುವುದು "ಕೀಳು" ದೈವವಾದ್ದರಿಂದ ಹರಿಜನರಾಗಲಿ ಇತರ ಒಕ್ಕಲಿಗರಾಗಲಿ ನೋಟ ನೋಡಬೇಕಾಗುತ್ತದೆ ಎಂದು ನಂಬುತ್ತಾರೆ. ದೊಡ್ಡ ಸಾಂಕ್ರಾಮಿಕ ರೋಗ ಬಂದರೆ ಸೆಲೆಬಸ್ ದ್ವೀಪದ ಮಿನಹಸಾಊರಿನ ಜನರು ಊರು ಬಿಟ್ಟುಹೋಗಿ ಬೇರೆ ಕಡೆ ತಾತ್ಪೂರ್ತಿಕವಾಗಿ ಗುಡಿಸಲು ಕಟ್ಟಿಕೊಂಡು ಉಳಿಯುತ್ತಾರೆ. ಅಲ್ಲಿ ಅನೇಕ ದಿನ ಉಳಿದು ಬಲಿವಿಧಾನವನ್ನು ಆಚರಿಸುತ್ತಾರೆ. ಗಂಡಸರಲ್ಲಿ ಕೆಲವರು ಮೋರೆಗೆ ಕಪ್ಪು ಬಣ್ಣ ಬಳಿದುಕೊಳ್ಳುತ್ತಾರೆ. ಕೆಲವರು ಮೋರೆಗೆ ಮುಖವಾಡ ಹಾಕಿಕೊಂಡು, ಎಲ್ಲರೂ ಕತ್ತಿ, ಕಸಬರಿಗೆ, ಬಂದೂಕು ಮೊದಲಾದುವನ್ನು ತಕ್ಕೊಂಡು ಊರಿಗೆ ಮರಳಿ ಬಂದು ಕೂಗುತ್ತ ಮನೆಗಳ ಬಾಗಿಲು, ಕಿಟಕಿಗಳನ್ನು ಬಡಿಯುತ್ತ ದೆವ್ವಗಳ ಉಚ್ಚಾಟನೆ ಮಾಡುತ್ತಾರೆ. ಬವೇರಿಯದಲ್ಲಿ "ಜ್ವರ ಭೂತಾ, ನಾನು

ಮನೆಯಲ್ಲಿಲ್ಲ. ಹೋಗು. ” ಎಂದು ಬರೆದು ಯಾರ ಕಿಸೆಗೋ ಹಾಕುತ್ತಾರೆ.

ಬಹಳ ಜನಗಳಿಗಾಗಲಿ ದನಗಳಿಗಾಗಲಿ ರೋಗೋಪದ್ರವ-ವಾದರೆ ಊರಿನಲ್ಲಿದ್ದ ಹಳೆ ಬುಟ್ಟಿ, ಮೊರ, ಕಸಬರಿಗೆ, ಕಸ-ಕಡ್ಡಿಗಳನ್ನು ತಂದು ಊರ ಹೊರಗೆ ರಾಶಿಹಾಕುತ್ತಾರೆ. ಅದಕ್ಕೆ ಉಡುಗಲಜ್ಜಿಯನ್ನು ಹೊತ್ತು ಹಾಕುವುದು ಎನ್ನು-ತ್ತಾರೆ. ಊರಿನಲ್ಲಿ ಸ್ವಚ್ಛತೆಯನ್ನಿಡುವುದು ಇವರ ಉದ್ದೇಶ ಎಂದು ಕಾಣುತ್ತದೆ. ಆದರೆ ಉಡುಗಲಜ್ಜಿ ಒಂದು ದೆವ್ವ-ವೆಂದೇ ಕಲ್ಪನೆಯಿದೆ. ಹೀಗೆ ಊರ ದೆವ್ವವನ್ನು ಊರ ಗಡಿ-ದಾಟಿಸಿದ ಹಾಗೆ ಎಂದು ತಿಳಿಯುತ್ತಿರಬೇಕು.

ರೋಗಗಳನ್ನು ಮನುಷ್ಯರಿಂದ ಪ್ರಾಣಿಗಳಿಗೆ ವರ್ಗಾ-ಯಿಸುವ ಪರಿಪಾಠವೂ ಇದೆ. ಹೊಟೆಂಟಾಟ ಜನರಲ್ಲಿ ರೋಗಿಯು ಎತ್ತಿನ ಕಾಲನ್ನು ಹಿಡಿದುಕೊಂಡಿರುತ್ತಾನೆ. ಆಗ ಎತ್ತನ್ನು ಬಲಿಕೊಡುತ್ತಾರೆ. ಯುರೋಪಿನಲ್ಲಿ, ಕತ್ತೆಯ ಬಾಲದ ಕಡೆ ಮೋರೆ ಮಾಡಿ ಕುಳಿತು ಅದರ ಕಿವಿಯಲ್ಲಿ “ನನಗೆ ಚೇಳು ಕಚ್ಚಿತು” ಎಂದರೆ ಆ ನೋವು ಕತ್ತೆಗೆ ಹೋಗುವುದೆಂಬ ನಂಬಿಕೆಯಿತ್ತು.

ಭೂತಗಳ ಉಚ್ಚಾಟನೆ ಮಾಡುವುದು ರೋಗನಿದಾನದ ಒಂದು ಕ್ರಮವಾದರೆ, ಆತ್ಮವನ್ನು ಮರಳಿತಂದು ರೋಗ ಗುಣ-ಮಾಡುವ ಕ್ರಮವೂ ಇದೆ. ಕಾಂಗೋದ ಕೆಲ ಪಂಗಡಗಳವರು ರೋಗಿಯ ಆತ್ಮವು ಆತನ ಶರೀರ ಬಿಟ್ಟು ಹೋದದ್ದರಿಂದಲೇ

ಆತನಿಗೆ ರೋಗ ಬಂದಿದೆಯೆಂದು ತಿಳಿಯುತ್ತಾರೆ. ಅದು ಸಿಕ್ಕಲ್ಲಿ ತಿರುಗಾಡುತ್ತಿರಬಹುದು. ಆಗ ಮಾಟಗಾರನ ಸಹಾಯ-ಬೇಕು. ಆತನು ಆ ಆತ್ಮವನ್ನು ಹಿಡಿದು ತಂದು ರೋಗಿಯ ಶರೀರದಲ್ಲಿ ಪುನಃ ಸೇರಿಸುತ್ತಾನೆ. ಸಾಮಾನ್ಯವಾಗಿ ವರದ ಟೊಂಗೆಯಲ್ಲಿ ಅದು ಸೇರಿರುತ್ತದೆ. ಸುಮಾತ್ರಾದಲ್ಲಿಯೂ ರೋಗಿಯ ಆತ್ಮವನ್ನು ಮರಳುವಂತೆ ಕರೆಯುತ್ತಾರೆ.

ಕೆಲವು ಸಲ ಭೂತ, ದೈವ, ಅಥವಾ ಮಾಟಗಾರನು ಆ ರೋಗಗಳ ಆತ್ಮಗಳನ್ನು ಎಳೆದುಕೊಳ್ಳಬಹುದು. ಅಂಥ ಸಂದರ್ಭದಲ್ಲಿ ಉಯ್ಯಾ ಎಂಬ ನಡುಗಡ್ಡೆಯ ಜನ ಭೂತ-ವೈದ್ಯನೊಡನೆ ಸ್ಮಶಾನಕ್ಕೆ ಹೋಗಿ ಕೊಳಲೂದುವುದು, ಸಿಳ್ಳು ಹಾಕುವುದು, ಇವುಗಳಿಂದ ಆತ್ಮವನ್ನು ಮರಳಿ ರೋಗಿಯ ಶರೀರದಲ್ಲಿ ಸೇರಬೇಕೆಂದು ಕೂಗಿ ಹೇಳಿ ಅದರ ಮನ ಒಲಿಸು-ತ್ತಾರೆ. ಸಿಲೋನಿನ ಭೂತವೈದ್ಯರು ರೋಗಿಗಳ ಶರೀರದ ರೋಗಗಳನ್ನು ತಮ್ಮ ಶರೀರದಲ್ಲಿ ತೆಗೆದುಕೊಂಡಂತೆ ಮಾಟ ನಡೆಸಿ, ಆ ರೋಗದ ಬವಣೆಗಳನ್ನು ಅಭಿನಯದಿಂದ ತಾವೇ ಅನುಭವಿಸಿದಂತೆ ನಟಿಸಿ ಸತ್ತಂತೆ ಬಿದ್ದುಕೊಂಡು, ಕೆಲವು ಹೊತ್ತಿನಮೇಲೆ ಎದ್ದುಕೊಂಡು ತಮಗೆ ಸಲ್ಲಬೇಕಾದ ಫೀ ಹಣಕ್ಕೆ ಕೈಯೊಡ್ಡುವರು.

೧೩ ಜ್ಯೋತಿಷ್ಯದಲ್ಲಿ ನಂಬಿಕೆ

ಹದಿನಾರನೆಯ ಶತಕದ ಕಾಲದಲ್ಲಿ ಯುರೋಪಿನಲ್ಲಿ ಜ್ಯೋತಿಷ್ಯಕ್ಕೆ ಬಹಳ ಗೌರವವಿತ್ತು. ಅದು ದೇವ ಶಾಸ್ತ್ರ (Theology) ದೊಡನೆ ಸಂಬಂಧ ಹೊಂದಲು ಯೋಗ್ಯವಾದ-ದ್ದೆಂದು ತಿಳಿಯುತ್ತಿದ್ದರು. ಖಗೋಲಗಳು ಜೀವಂತವಿರುವ-ವೆಂಬ ಅಭಿಪ್ರಾಯ ಅದಕ್ಕೆ ಬೆಂಬಲವಾಗಿತ್ತು. ಆಗಿನ ಮಾನವ-ನಿಗೆ ಭೂಮಿ ಅಚಲವೆಂಬ ಅಭಿಪ್ರಾಯ ಸಾಮಾನ್ಯವಾಗಿತ್ತು. ಸೂರ್ಯ-ಚಂದ್ರ ಇವೆಲ್ಲ ನಿಲ್ಲದೆ ತಿರುಗುತ್ತಿವೆ. ಮನುಷ್ಯನ ಜೀವನದ ಮೇಲೆ ಪರಿಣಾಮವನ್ನು ಮಾಡುತ್ತವೆ. ಮನುಷ್ಯನ ಮನಸ್ಸಿನಲ್ಲಿ ತಂತಾನೆ ಚಲಿಸುವುದು ಜೀವದ ಚಿಹ್ನೆ ಎಂಬ ನಂಬುಗೆ ಇದೆ. ಹಾರಾಡುವ ನೊಣವನ್ನು ಕಪ್ಪೆ ಹಿಡಿಯು-ತ್ತದೆ. ಚಲಿಸದೆ ಬಿದ್ದಿರುವ ನೊಣವನ್ನು ಹಿಡಿಯುವುದಿಲ್ಲ. ರಬ್ಬಿನಗೊಂಬೆ ಕುಣಿವಾಗ ಅದಕ್ಕೆ ಜೀವವಿದ್ದಂತೆಯೇ ಭಾಸ-ವಾಗುತ್ತದೆ. ಅನಾಗರಿಕ ಮನುಷ್ಯನಿಗೂ ಈ ತರ್ಕ ಸ್ವಾಭಾವಿಕ ಎಂದು ಜೀವಶಾಸ್ತ್ರಜ್ಞನಿಗೆ ಗೊತ್ತುಂಟು. ಗ್ರಹಗಳ ಚಲನೆಯು ತಂತಾನೆ ಚಲಿಸುವುದೆಂದು ಒಪ್ಪಿತವಾದುದು. ಈ ಚಲನೆ-ಯಿಂದಲೆ ಅವು ಜೀವಂತವಿವೆಯೆಂದು ಜನ ತಿಳಿದರು. ಗ್ರಹ ಹಾಗು ನಕ್ಷತ್ರಗಳು ಭೂಮಿಯ ಸುತ್ತಲೂ ಸುತ್ತು ಹಾಕುತ್ತ ಭೂಮಿ ಹಾಗು ಮನುಷ್ಯರ ಮೇಲೆ ನಿಯಂತ್ರಣವಿಡುವವೆಂದೂ

ಅವರು ಸುಲಭವಾಗಿ ತಿಳಿಯುತ್ತಿದ್ದರು. ಆಕಾಶದ ಮನೆ-ಗಳಲ್ಲಿ ಸೂರ್ಯಮಾಲೆಯ ಗ್ರಹಗಳು ಸುತ್ತುವುವೆಂದೂ ಅವು ಇರುವ ಮನೆಗಳಲ್ಲಿ ತಮ್ಮ ಪ್ರಭಾವವನ್ನು ಸ್ಥಾಪಿಸಿ ಹೋಗುವವೆಂದೂ ನಂಬುತ್ತಿದ್ದರು. ಗ್ರಹವು ಬಂದ ಮನೆಗಳ ಪರಿಣಾಮವಾಗಿಯೂ ಕೆಲ ಬದಲಾವಣೆಯಾಗುತ್ತದೆ. ಗುರು ಮನುಷ್ಯನಿಗೆ ಒಳ್ಳೆಗ್ರಹ. ಶುಕ್ರ ಸಂತತಿಯ ಮೇಲೆ ಪರಿ-ಣಾಮ ಮಾಡುವವನು. ಶನಿ ದುಷ್ಟ. ಬುಧ ಚಂಚಲ. ಹೀಗೆ ಭಾವನೆಯಿತ್ತು.

ಪುರಾತನ ಬಾಬಿಲೋನಿಯದ ಪೂಜಾರಿಗಳು ಗ್ರಹಣಗಳ ನಿಜವಾದ ಕಾರಣವನ್ನು ತಿಳಿದು ಮೊದಲೇ ಗ್ರಹಣಗಳ ಬರುವಿಕೆಯನ್ನು ಕುರಿತು ಸರಿಸುಮಾರು ಸರಿಯಾಗಿಯೆ ಸೂಚನೆಯನ್ನು ಕೊಡಬಲ್ಲವರಾಗಿದ್ದರು. ಆದರೆ ಅವರು ಆ ಜ್ಞಾನವನ್ನು ಜನರ ಮೂಢನಂಬಿಕೆ ಬೆಳೆಸಿ ಅವರ ಮೇಲೆ ತಮ್ಮ ನಿಯಂತ್ರಣವಿಟ್ಟುಕೊಳ್ಳುವುದಕ್ಕೆ ಉಪಯೋಗಿಸಿದರು. ಗ್ರಹಣಗಳ ಕಾಲವನ್ನು ಮೊದಲೇ ಹೇಳುವ ಗ್ರಹಗಣಿತವು ಜ್ಯೋತಿಷ್ಯದಲ್ಲಿ ಜನರಿಗೆ ನಂಬಿಕೆಯಾಗುವುದಕ್ಕೆ ಸಹಾಯ-ಕಾರಿಯಾಗಿದ್ದಿರಬೇಕು.

ಒಂದೇ ಮುಹೂರ್ತದಲ್ಲಿ ಹುಟ್ಟಿದವರ ಜೀವನ ಸಮಾನ ಪರಿಣಾಮ ಹೊಂದುತ್ತದೆ, ಎಂಬ ನಂಬಿಕೆ ಜ್ಯೋತಿಷ್ಯ ಶಾಸ್ತ್ರದಲ್ಲಿದೆ. ಅನೇಕ ವ್ಯಕ್ತಿಗಳ ಜನ್ಮಮುಹೂರ್ತಗಳನ್ನು ತೆಗೆದುಕೊಂಡು ಅವರ ಜೀವನದ ತಾಳಮೇಳದ ಆಧಾರದಿಂದ ಪ್ರಯೋಗವಾದ ಅನುಭವದ ಶಾಸ್ತ್ರ ಅದು. ಆದರೆ ಒಂದೇ

ಮುಹೂರ್ತದಲ್ಲಿ ಹುಟ್ಟಿದ ಅವಳಿ ಮಕ್ಕಳ ಜೀವನ ಏಕೆ ಬೇರೆ ಬೇರೆ ತರದ್ದಾಗುತ್ತದೆಂದು ಸೇಂಟ್ ಜಾನ್ ಮೊದಲೆ ಕೇಳಿದ್ದನು. ನಮ್ಮ ಸಂಬಂಧಿಕರೊಬ್ಬರ ಮದುವೆಗೆ ಮೊದಲು ಹಿರಿಯ ಜ್ಯೋತಿಷಿಗಳೊಬ್ಬರು ನಿಶ್ಚಯವಾಗಿದ್ದ ಆ ಹೆಣ್ಣನ್ನು ಮದುವೆಯಾದರೆ ಸಂತಾನಲಾಭವಿಲ್ಲವೆಂದು ಹೇಳಿದ್ದರು. ಆದರೆ ನಾಲ್ಕು ಗಂಡು ಮಕ್ಕಳಾದರು. ಜನ್ಮಮುಹೂರ್ತ ಸರಿಯಾಗಿದ್ದರೆ ಭವಿಷ್ಯ ಸತ್ಯವಾಗುವುದೆಂದು ಕೆಲವರು ಹೇಳುತ್ತಾರೆ. ಇತಿಹಾಸದ ಪುನರಾವೃತ್ತಿಯಾಗುತ್ತದೆ ಎಂಬ ನಂಬಿಕೆಯೂ ಇದೆ. ಆದರೆ ಇವೆಲ್ಲ ಅನುಭವದಿಂದ ಪ್ರಚಾರದಲ್ಲಿ ತಂದ ಗಾದೆಗಳ ಹಾಗೆ. ಕಷ್ಟಗಳು ಒಂಟಿಯಾಗಿ ಬರುವದಿಲ್ಲ ಎಂಬ ಗಾದೆ ಎಲ್ಲ ಸಂದರ್ಭಗಳಲ್ಲಿ ಸತ್ಯವಲ್ಲ. ಹಾಗೇ ಜ್ಯೋತಿಷ್ಯವೂ ವೈಜ್ಞಾನಿಕ ಸತ್ಯವಲ್ಲ.

೧೪ ನಿಮಿತ್ತಗಳು, ಶಕುನಗಳು

ನಿಸರ್ಗದಲ್ಲಿ ನಡೆಯುವ ನಾನಾ ವ್ಯಾಪಾರಗಳೂ ಪಶು-ಪಕ್ಷಿ ಮುಂತಾದವುಗಳ ಕಾರ್ಯಕಲಾಪಗಳೂ ಏನೋ ಒಂದು ದೈವೀಸಂಬಂಧದಿಂದ ಮಾನವ ಜೀವನದೊಡನೆ ಸಂಬಂಧ ಹೊಂದಿವೆಯೆಂದು ಪುರಾತನ ಮಾನವನ ಕಲ್ಪನೆಯಾಗಿದ್ದಿರ-ಬೇಕು. ನಡೆದ ಕೆಲವು ಘಟನೆಗಳಿಗೆ ಇತರ ಘಟನೆಗಳ ಸಂಬಂಧವನ್ನು ಹಚ್ಚುವ ಪ್ರಯತ್ನವನ್ನು ಆತ ಮಾಡಿರಬೇಕು. ಕೆಲ ಘಟನೆಗಳು ಒಳ್ಳೆಯ ಫಲವನ್ನೂ, ಇನ್ನು ಕೆಲವು ಕೆಟ್ಟ ಫಲವನ್ನೂ ಸೂಚಿಸುತ್ತವೆಂದು ಕೆಲವು ಘಟನೆಗಳ ಸಂಬಂಧ ಹಚ್ಚಿ ಅವನು ತಿಳಿಯಹತ್ತಿದನು. ಇನ್ನು ಕೆಲವು ವಿಶೇಷ ಘಟನೆಗಳು ಮನುಷ್ಯಜೀವನದ ಮೇಲೆ ತಾವೇ ಪರಿಣಾಮ ಮಾಡುವವೆಂದೂ ಅವು ಅಷ್ಟು ಪ್ರಬಲವೆಂದೂ ಆತ ತಿಳಿದನು ಅವುಗಳಿಗೆ ನಿಮಿತ್ತಗಳೆನ್ನಬಹುದು. ಭೂಕಂಪವಾದರೆ, ಜೋರು ಬಿರುಗಾಳಿಯಾದರೆ, ಸಿಡಿಲು ಬಿದ್ದರೆ ಸಹಜವಾಗಿ ಅವುಗಳಿಂದ ಕೆಲವು ಅನರ್ಥಗಳಾಗುವದುಂಟು. ಒಂದು ವೇಳೆ ಅವುಗಳಿಂದ ಪ್ರತ್ಯಕ್ಷ ಅನರ್ಥವಾಗದಿದ್ದರೂ ಅವು ಸಂಭವಿಸಿದರೆ ಅನಿಷ್ಟ, ಅವು ಗಂಡಾಂತರ ಉಂಟುಮಾಡುವ-ವೆಂದು ತಿಳಿಯುವುದು ರೂಢವಾಯಿತು.

ಶೇಕ್ಸ್‌ಪಿಯರನ " ಕಿಂಗ ಲಿಯರ್ " ನಾಟಕದಲ್ಲಿ ಗ್ಲೌಸೆಸ್ಟರನು ಎಡ್ಮಂಡನಿಗೆ ಹೇಳುತ್ತಾನೆ, " ಇತ್ತೀಚಿನ ಸೂರ್ಯ-ಚಂದ್ರ ಗ್ರಹಣಗಳು ಒಳಿತನ್ನು ಸೂಚಿಸುವುದಿಲ್ಲ. ಪ್ರೀತಿ ತಣ್ಣಗಾಗುತ್ತದೆ. ಮಿತ್ರತ್ವ ಕಳೆದುಹೋಗುತ್ತದೆ. ಅಣ್ಣ-ತಮ್ಮಂದಿರು ಬೇರೆಯಾಗುತ್ತಾರೆ. ಪಟ್ಟಣಗಳಲ್ಲಿ ದಂಗೆ, ಹಳ್ಳಿಗಳಲ್ಲಿ ಅಶಾಂತಿ, ಅರಮನೆಗಳಲ್ಲಿ ಫಿತೂರಿ; ತಂದೆ ಮಕ್ಕಳು ವೈರಿಗಳಾಗುವರು."

ಆದರೆ ಎಡ್ಮಂಡನು, "ಇದೊಳ್ಳೇ ನಡತೆ ! ನಮ್ಮ ತಪ್ಪಿನಿಂದ ತಂದುಕೊಂಡ ಕೇಡಿಗೆ ನಾವು ಸೂರ್ಯ-ಚಂದ್ರ, ನಕ್ಷತ್ರಗಳನ್ನು ಹೊಣೆಯಾಗಿ ಮಾಡುತ್ತೇವೆ. ಆಕಾಶದ ಗೋಲಗಳ ಪರಿಣಾಮವಾಗಿಯೇ ನಾವು ವಿಧಿಯಿಲ್ಲದೆ ಮೂರ್ಖರೂ, ಕಳ್ಳರೂ, ಕುಡುಕರೂ, ಸುಳ್ಳುಗಾರರೂ, ದ್ರೋಹಿಗಳೂ, ದುಷ್ಟರೂ ಆಗುವೆವೆಂದು ನಮ್ಮ ತಪ್ಪುಗಳನ್ನು ಗ್ರಹನಕ್ಷತ್ರಗಳ ಮೇಲೆ ಹೊರಿಸುತ್ತೇವೆ" ಎಂದು ಉತ್ತರ ಕೊಡುತ್ತಾನೆ.

ಯಾರಾದರೂ ಮಹತ್ವದ ವ್ಯಕ್ತಿಗಳು ಹುಟ್ಟಿದಾಗ ಅನೇಕ ಉತ್ಪಾತಗಳಾದರೆ ಕೆಟ್ಟದರ ಸೂಚಕವೆಂದು ತಿಳಿಯುವ ಪರಿಪಾಠವಿತ್ತು. ಗ್ಲೌಸ್ಟರನ ಜನ್ಮಕಾಲದಲ್ಲಿ ಗೂಗೆ ಕೂಗಿದುದೂ, ನಾಯಿ ಬೊಗಳಿದುದೂ, ಭೀಕರ ಬಿರುಗಾಳಿಯಾಗಿ ಮರ ಉರುಳಿಬಿದ್ದುದೂ ಮುಂದಿನ ಕೆಟ್ಟ ಸೂಚನೆಯೆಂದು ಹೆನ್ರಿ VI ನಾಟಕದಲ್ಲಿ ರಾಜ ಹೆನ್ರಿ ಹೇಳುತ್ತಾನೆ.

ಮೆಕ್ಬೆತ್ ನಾಟಕದಲ್ಲಿ ಲೆನೊಕ್ಸನು (Lenox) ಬಿರು-ಗಾಳಿಯ ರಾತ್ರಿಯಲ್ಲಿ ವಿಚಿತ್ರವಾದ ಮರಣದ ಚೀರಾಟಗಳು ಕೇಳಬಂದವೆಂದೂ, ಹೊಗೆ ಕೊಳವೆಗಳನ್ನು ಬಿರುಗಾಳಿ ಬೀಸಿ ಕೆಡವಿತೆಂದೂ, ಭೀಕರವಾದ ಸ್ವರದಲ್ಲಿ ಅನಿಷ್ಟ ಭವಿಷ್ಯದ ಸೂಚನೆಯಾಯಿತೆಂದೂ ಹೇಳುತ್ತಾನೆ. ಅವ್ಯಕ್ತವಾದ ಹಕ್ಕಿ (ಗೂಗೆ) ರಾತ್ರಿಯೆಲ್ಲಾ ಕೂಗಿತ್ತೆಂದೂ ಭೂಮಿ ಜ್ವರ ಬಂದಂತೆ ನಡುಗಿತ್ತೆಂದೂ ಕೆಲವರು ಹೇಳುವರೆಂದೂ ತಿಳಿಸುತ್ತಾನೆ.

ಜೂಲಿಯಸ್ ಸೀಜರ್ ನಾಟಕದಲ್ಲಿ ಜಗತ್ತನ್ನು ಧ್ವಂಸ-ಮಾಡಲು ದೇವತೆಗಳು ಬೆಂಕಿ-ಮಿಂಚು ಕಾರುವರೆಂದೂ ಕಾಸ್ಕಾ ಎಂಬವನು ಸಿಸಿರೋನಿಗೆ ಹೇಳುತ್ತಾನೆ. ಗುಲಾಮನು ಕೈಯೆತ್ತಿದಾಗ ಇಪ್ಪತ್ತು ಪಂಜು ಉರಿದ ಬೆಳಕು ಕಂಡುದು, ಗೂಗೆ (ರಾತ್ರಿಯ ಹಕ್ಕಿ) ಮಧ್ಯಾಹ್ನ, ಸಂಜೆಯಲ್ಲಿ ಕೂಗಿದುದು ಇವೆಲ್ಲ ಮುಂದಿನ ಅನಿಷ್ಟ (ಸೀಜರನ ಕೊಲೆ, ದಂಗೆ) ಸೂಚಕ-ಗಳೆಂದೂ ಈತನ ಹೇಳಿಕೆ.

ಧೂಮಕೇತು ಕಂಡರೆ ದೊಡ್ಡ ವ್ಯಕ್ತಿಯ ಮರಣವಾಗು-ವುದೆಂಬ ಕಲ್ಪನೆಯೂ ಸಾಮಾನ್ಯವಾಗಿದೆ. "ಜೂಲಿಯಸ್ ಸೀಜರ" ನಾಟಕದಲ್ಲಿ ದುಃಸ್ವಪ್ನದಿಂದ ಹೆದರಿದ ಕೆಲ್ಪುರ್ನಿಯಾಳು ಬೀದಿಯಲ್ಲಿ ಸಿಂಹ ಕೂಗಿ ಆಕಾಶದಲ್ಲಿ ಗುಡುಗು ಸಿಡಿಲು ಮುಂತಾದ ದುರ್ನಿಮಿತ್ತಗಳು ಕಂಡ ವಿಷಯದಲ್ಲಿ ಸೀಜರನೊಡನೆ ಹೆದರಿಕೆ ವ್ಯಕ್ತಮಾಡಿದಾಗ ಸೀಜರನು, "ಅವು ತನ್ನನ್ನೇ ಕುರಿತಾಗಿಲ್ಲ, ಎಲ್ಲ ಜನರಿಗೂ ಸಮಾನವಾಗಿವೆ" ಎಂದಾಗ ಅವಳು, "ಭಿಕ್ಷುಕರು ಸತ್ತಾಗ

ಧೂಮಕೇತುಗಳು ಕಾಣುವದಿಲ್ಲ. ಆದರೆ ಆಕಾಶವೇ ಉರಿ ಕಾರಿ ರಾಜರ ಮರಣವನ್ನು ತೋರಿಸುತ್ತದೆ'' ಎನ್ನುತ್ತಾಳೆ. ಶೇಕ್ಸ್‌ಪಿಯರನು ಧೂಮಕೇತುಗಳ ಕುರಿತು ಮೂಢನಂಬಿಕೆ-ಯುಳ್ಳವನಾಗಿದ್ದಿರಬೇಕೆಂದು ಬರ್ಟ್ರಾಂಡ್ ರಸೆಲ್ ಹೇಳು-ತ್ತಾರೆ. ಧೂಮಕೇತುಗಳು ದೇವರ ಸಿಟ್ಟಿನ ಪ್ರತೀಕಗಳೆಂದು ಜಾನ್ ಲಾಕ್ ತಿಳಿದಿದ್ದನು.

ಹಿಂದುಗಳಂತೆ ಪ್ರಾಚೀನ ಗ್ರೀಕರು ಪ್ರತಿಯೊಂದು ಘಟನೆಯಲ್ಲಿ ಶಕುನವನ್ನು ಕಾಣುತ್ತಿದ್ದರು. ಅವರು ಇವು-ಗಳಿಗೆ ಎಷ್ಟು ಮಹತ್ವ ಕೊಡುತ್ತಿದ್ದರೆಂಬುದು ಈಸ್ಕಿಲಸನ 'ಪ್ರೊಮಿಥಿಯಸನ ಬಂಧನ' ಎಂಬ ನಾಟಕದಿಂದ ತಿಳಿಯು-ತ್ತದೆ. ಬೆಂಕಿಯ ಉಪಯೋಗ ಮಾಡುವುದು, ಕೃಷಿವ್ಯವ-ಸಾಯ, ಮನೆಕಟ್ಟುವುದು ಮುಂತಾದ ಉದ್ಯೋಗಗಳ ಜ್ಞಾನದ ಜನತೆಗೆ ಪ್ರೊಮಿಥಿಯಸನು ಮಾನವರಿಗೆ ಶಕುನಗಳ ಮೂಲಕ ಭವಿಷ್ಯವನ್ನು ತಿಳಿಯುವ ಶಕ್ತಿಯನ್ನು ತಿಳಿಸಿ ಕೊಟ್ಟಿನೆಂದು ಹೇಳುತ್ತಾನೆ. ಗ್ರೀಕರ ಹಾಸ್ಯನಾಟಕಕಾರ ಅರಿಸ್ಟೊಫೆನಿಸನ 'ಹಕ್ಕಿಗಳು' ಎಂಬ ನಾಟಕದಲ್ಲಿ ಹಕ್ಕಿಗಳ ಗುಂಪು ಈ ರೀತಿ ಹಾಡುತ್ತದೆ:

"ಮದುವೆ ಮಾಡುವಾಗ, ಸಾಮಾನು ಕೊಳ್ಳುವಾಗ, ಮಾರುವಾಗ, ಇತರ ವ್ಯವಹಾರಗಳನ್ನು ಮಾಡುವಾಗ, ಎತ್ತು ಕತ್ತೆ ಮುಂತಾದ ಯಾವುದಾದರೂ ಪ್ರಾಣಿ ದಾರಿಯಲ್ಲಿ ಹೋಗುತ್ತಿದ್ದರೆ, ದಾರಿಯಲ್ಲಿ ಯಾವುದಾದರೂ ಸ್ವರ ಕೇಳಿದರೆ, ಯಾವನಾದರೂ ಗುಲಾಮನನ್ನು ನೀವು ಭೆಟ್ಟಿಯಾದರೆ,

ಒಂದು ಶಬ್ದ ಅಥವಾ ಹೆಸರು ಅಕಸ್ಮಾತ್ ನಿಮ್ಮ ಕಿವಿಗೆ ಬಿದ್ದರೆ, ನೀವು ಅದು ಶುಭ ಅಥವಾ ಅಶುಭ ಶಕುನವೆಂದು ತಿಳಿಯುತ್ತೀರಿ; ಮತ್ತು ನಮ್ಮ ಹತ್ತಿರ ಅವುಗಳ ಅರ್ಥ ವಿವರಣೆಯ ಸಲುವಾಗಿ ಬರುತ್ತೀರಿ."

ಕೋಗಿಲೆ ಒಳ್ಳೆ ಶಕುನದ ಹಕ್ಕಿ ಎಂದು ನಂಬುವರು. ಗ್ರೀಸಿನ ಮೆಸಿಡೋನಿಯಾದಲ್ಲಿ ಮಧ್ಯರಾತ್ರಿಯ ಸ್ವಲ್ಪ ಮೊದಲು ಕೋಳಿ ಕೂಗಿದರೆ ಮರಣದ ಸೂಚನೆ ಎಂದು ತಿಳಿಯುತ್ತಾರೆ. ಆದರೆ ಸಿಲುಸಿಯಾದಲ್ಲಿ ಕಪ್ಪು ಕೋಳಿಯನ್ನು ನೋಡುವುದು ಶುಭ ಲಕ್ಷಣ. ಮಧ್ಯಾಹ್ನ ಕೋಳಿ ಕೂಗುವುದು ಅಶುಭವೆಂದು ಹಾರ್ಡಿಯ "ಟೆಸ್" ಕಾದಂಬರಿಯಲ್ಲಿದೆ. ಬೆಳಿಗ್ಗೆ ಎದ್ದ ಕೂಡಲೆ ಕಾಗೆಯನ್ನು ಎಡಪಕ್ಕದಲ್ಲಿ ನೋಡುವುದು, ಹದ್ದನ್ನು ಬಲ-ಪಕ್ಕದಲ್ಲಿ ನೋಡುವುದು ಅಶುಭವೆಂದು ಹಿಂದುಗಳಲ್ಲಿ ನಂಬಿಕೆ. 'ಶಕುನಿ' ಎಂದರೆ ಹಕ್ಕಿ ಎಂದು ಸಂಸ್ಕೃತದ ಶಬ್ದ; ಅದು ಹಕ್ಕಿಶಕುನದ ಪ್ರಚಾರವನ್ನು ಸೂಚಿಸುವುದು

ಉಪ್ಪನ್ನು ಚೆಲ್ಲುವುದು ಅತಿ ಅಶುಭವೆಂದು ಸಾರ್ವತ್ರಿಕ-ವಾಗಿ ನಂಬುಗೆಯಿದೆ. ಮೊದಲು ಚೆಲ್ಲಿದ ಉಪ್ಪನ್ನು ತೆಗೆದು-ಕೊಂಡು ಎಡತೋಳಿನ ಮೇಲಿನಿಂದ ಹಿಂದಕ್ಕೆ ಹಾಯಿಸಿ ಚೆಲ್ಲಿದರೆ ದೋಷ ಪರಿಹಾರ ಎಂದು ತಿಳಿಯುವರು. ಉಪ್ಪು ಯಮದೇವನಿಗೆ ಪೂಜಿಸುವ ವಸ್ತುವೆಂದು ತಿಳಿಯುತ್ತಿದ್ದರು. ಉಪ್ಪು ಚೆಲ್ಲುವಾಗ ಯಮಲೋಕದ ದೇವತೆಗಳ ಲಕ್ಷ್ಯ ಚೆಲ್ಲುವವನ ಕಡೆಗೆ ಆಕರ್ಷಿತನಾಗುವುದು. ಇದು ಅನಿಷ್ಟ.

ಹಿಂದಿನಿಂದ ಉಪ್ಪನ್ನು ಚೆಲ್ಲುವುದು ಆ ದೇವತೆಗಳ ಲಕ್ಷ್ಯವನ್ನು ಬೇರೆ ಕಡೆ ಸೆಳೆದು ಅನಿಷ್ಟ ಪರಿಹಾರವಾಗುವುದು.

ಲ್ಯಾಂಕೆಶಾಯರಿನ ಕೆಲ ಭಾಗಗಳಲ್ಲಿ ಮನೆ ಕಟ್ಟುವುದು, ಅಥವಾ ದುರಸ್ತಿ ಮಾಡುವುದು ಕುಟುಂಬದ ಒಬ್ಬನಿಗೆ ಮಾರಕವೆಂದು ಇನ್ನೂ ತಿಳಿಯುತ್ತಾರೆ. ಕೆಟ್ಟ ಪರಿಣಾಮ ತಪ್ಪಿಸಲು ಒಬ್ಬನನ್ನು ಬಲಿಕೊಡಬೇಕೆಂಬ ಕಲ್ಪನೆಯು ಅವಶೇಷ ಇದು. ಕನ್ನಡಿ ಒಡೆದರೆ ಏಳು ವರ್ಷ ದುಃಖ ಅನುಭವಿಸ-ಬೇಕೆಂದು ನಂಬುತ್ತಾರೆ. ಪೂರ್ವಕಾಲದಲ್ಲಿ ಕನ್ನಡಿ ಒಡೆಯು-ವುದು ಮನುಷ್ಯನ ಪ್ರತಿಬಿಂಬ ಅರ್ಥಾತ್ ಆತ್ಮವನ್ನು ನಾಶ-ಮಾಡುವುದೆಂದು ತಿಳಿಯುತ್ತಿದ್ದರು. ಯಾಕಂದರೆ ಪ್ರತಿ-ಬಿಂಬವು ಮನುಷ್ಯನ ಭಾಗವೆಂದು ತಿಳಿಯಲಾಗುತ್ತಿತ್ತು. ಈ ಕಾರಣದಿಂದಲೆ ಅನೇಕ ಕಾಡುಜನಾಂಗಗಳವರು ತಮ್ಮ ಫೋಟೊ ತೆಗೆಸಿಕೊಳ್ಳಲು ಒಪ್ಪುವುದಿಲ್ಲ. ಚಂದ್ರನನ್ನು ಕನ್ನಡಿಯಲ್ಲಿ ಅಥವಾ ಕಿಟಕಿಯ ಕನ್ನಡಿಯಲ್ಲಿ ಸಹ ನೋಡು-ವುದು ಅಶುಭವೆಂದು ಬಗೆಯುತ್ತಾರೆ. ಏಕೆಂದರೆ ಚಂದ್ರನು ಆತ್ಮ ಹಾಗೂ ಜೀವದ ಮೂಲಸ್ಥಾನ ಎಂದು ತಿಳಿಯ-ಲಾಗುತ್ತಿತ್ತು. ರೋಗಿಗಳು ಕನ್ನಡಿಯಲ್ಲಿ ಮೋರೆ ನೋಡಿ-ಕೊಳ್ಳಬಾರದೆಂಬ ನಂಬಿಗೆಯಿದೆ.

ಹಿಂದುಗಳಲ್ಲಿ ಶುಕ್ರವಾರ, ಮಂಗಳವಾರ ಮುತ್ತೈದೆ-ಯರ ಬಳೆ ಒಡೆಯಬಾರದು. ಮಣ್ಣಿನ ಪಾತ್ರೆಗಳು ಒಡೆದರೂ ಅನಿಷ್ಟವೆಂಬ ಭಾವನೆಯಿದೆ. ಕನ್ನಡಿಯು ಕೈತಪ್ಪಿ ಒಡೆದರೆ ಕೆಟ್ಟದ್ದು. ಸಾಮಾನು ಹಾಳಾದರೆ ಸ್ವಾಭಾವಿಕವಾಗಿಯೆ

ಬೇಸರವಾಗುತ್ತದೆ. ಹಾಗೆಯೇ ಮಂಗಲಸೂತ್ರ ಹರಿದರೂ ಮುಂದೆ ಆಕಸ್ಮಾತ್ ಆಗಬಹುದಾದ ಕೇಡನ್ನು ನೆನೆದು ಮನಸ್ಸು ಕುಂದುವುದು. ಆದರೆ ಎಷ್ಟು ಸಲ ಕನ್ನಡಿ ಒಡೆ-ದಾಗ ಅಥವಾ ಮಂಗಲಸೂತ್ರ ಹರಿದಾಗ ಕೆಟ್ಟ ಪರಿಣಾಮ-ಗಳಾಗಿವೆ ಎಂದು ಸಾರ್ವತ್ರಿಕ ನಿಯಮವನ್ನು ಸಿದ್ಧಮಾಡ-ಬಹುದೆ? ಇಂಗ್ಲಂಡದಲ್ಲಿ ಸೇವಕಿಯು ಎರಡು ಪಾತ್ರೆ ಒಡೆದರೆ ಮೂರನೆಯದನ್ನು ಒಡೆಯುವಳೆಂದು ಗ್ರಹಿಸುವುದಿದೆ. ಆ ವಿಚಾರದ ಅನಿಷ್ಟ ಸೂಚನೆ (Suggestion) ಯಿಂದಲೆ ಮನಸ್ಸಿನ ಅಧೀರತೆಯಿಂದ ಮೂರನೆಯ ಪಾತ್ರೆ ಬೀಳುವ ಸಂಭವ ಹೆಚ್ಚಿರುವುದು. ಎರಡಾದ ಮೇಲೆ ಮೂರಾಗ-ಬೇಕಲ್ಲವೆ? ದೂರದಲ್ಲಿದ್ದ ಮಿತ್ರನ ಫೋಟೊ ಕೆಳಗೆ ಬಿದ್ದರೆ ಅಶುಭ.

ಪ್ರೀತಿಯ ಗುರುತಿಗಾಗಿ ಕೊಟ್ಟ ಉಂಗುರ ಕಳೆದು-ಕೊಳ್ಳುವುದೂ, ಕೈಬೆರಳಿನಲ್ಲಿರುವ ಉಂಗುರ ಮುರಿಯುವುದೂ ದೌರ್ಭಾಗ್ಯಸೂಚಕ. ಪ್ರಾತಃಕಾಲದ ಫಲಾಹಾರದ ಮೊದಲು ಮೂರುಸಲ ಸೀನುವುದು ಏನಾದರೂ ಕಾಣಿಕೆ ದೊರೆಯು-ವುದರ ಸೂಚನೆ. ಸಾಮಾನ್ಯವಾಗಿ ಸೀನುವುದು ಕೆಟ್ಟದ್ದೆಂದು ತಿಳಿಯುವುದರಿಂದ ಅದನ್ನು ತಪ್ಪಿಸಲು ಸೀತವನಿಗೆ ನಮಸ್ಕಾರ ಮಾಡುವ ರೂಢಿ ಕೆಲವು ಬ್ರಿಟಿಶ್ ಪ್ರದೇಶಗಳಲ್ಲಿದೆ. ನಮ್ಮಲ್ಲಿ ಒಂಟಿ ಸೀನು ಮಾತ್ರ ಅಶುಭ

ಮನೆಯೊಳಗೆ ಕೊಡೆ ಬಿಡಿಸುವುದು, ಕರೀ ಬೆಕ್ಕು ಇದಿರಾಗುವುದು, ದಾರಿಯಲ್ಲಿ ಹಲ್ಲಿ ಇದಿರಾಗುವುದು, ಏಣಿಯ

ಕೆಳಗೆ ನಿಂತುಕೊಳ್ಳುವುದು, ಹೆಣ-ಮೇಣಬತ್ತಿಗಳನ್ನು ದಾರಿಯಲ್ಲಿ ನೋಡುವುದು ಇವೆಲ್ಲ ಯುರೋಪಿಯನ್ನರಲ್ಲಿ ಅಶುಭ. ಕರೀಬೆಕ್ಕು, ಹಲ್ಲಿ ಇದಿರಾದರೆ ತಿರುಗಿ ಬಂದು ಪುನಃ ಪ್ರಯಾಣ ಮುಂದುವರಿಸುವದಿದೆ. ಮೊಲದ ಕಾಲನ್ನು ನೋಡುವುದು ಶುಭ.

ಹಿಂದುಗಳಲ್ಲಿ ಬರೀ ಪಾತ್ರೆ ಎದುರಾಗುವುದು, ಕಟ್ಟಿಗೆ ಹೊರೆ, ಹೊಗೆ, ಬೆಂಕಿ, ವಿಧವೆ, ಬೆಕ್ಕು ಎದುರಾಗುವುದು ಅಶುಭ. ಮನೆಯೊಳಗೆ ಅಣಬೆ ಹುಟ್ಟುವುದು, ಕೋಡಗನು ಹೊಸ್ತಿಲೊಳಗೆ ಪ್ರವೇಶಿಸುವುದು, ಹದ್ದು ಮನೆಯ ತೋಳಿನ ಮೇಲೆ ಕೂಡುವುದು ಅಶುಭ.

ಆಕಳು, ಕುದುರೆ, ಸುಮಂಗಲಿ, ಇಬ್ಬರು ಬ್ರಾಹ್ಮಣರು, ತುಂಬಿದ ಕೊಡ ಮುಂತಾದುವನ್ನು ನೋಡುವುದು ಶುಭ ಶಕುನ. ಶುಭಕಾರ್ಯ ಕೈಕೊಳ್ಳುವಾಗ ದೇವರ ಪ್ರಸಾದ ಬಂದರೆ ಶುಭ

ದೇವರ ನಂದಾದೀಪ ನಂದುವುದು ಪ್ರಶಸ್ತವಲ್ಲ. ಹಾಗೆಯೆ ಮಂಗಳ ಕಾರ್ಯಗಳಲ್ಲಿಯೂ, ಊಟಕ್ಕೆ ಕುಳಿತಾಗಲೂ ದೀಪ ನಂದುವುದು ಒಳ್ಳೆಯದಲ್ಲ. ಮದುವೆಯ ಮೆರವಣಿಗೆ ಹೊರಟಾಗ ಸಂಬಂಧಿಕರು ಸತ್ತ ಸುದ್ದಿ ಬರುವುದು ಅಶುಭ.

ಹರಿಹರನ 'ನಂಬಿಯಣ್ಣನ ರಗಳೆ'ಯಲ್ಲಿ ನಂಬಿಯಣ್ಣನ ಮದುವೆ ನಡೆಯಲಿದ್ದಾಗ ಶಿವನು ಆ ಮದುವೆಯನ್ನು ತಪ್ಪಿಸ-

ಬೇಕೆಂದು ವೃದ್ಧ ಮಾಹೇಶ್ವರನ ರೂಪಿನಿಂದ ಬಂದು ಚಪ್ಪರದಲ್ಲಿ ತುಪ್ಪದ ಕೊಡಗಳ ಮೇಲೆ ಬಿದ್ದು, ಭೃಂಗಾರಿಗಳನ್ನೊಡೆದು, ಗಳಿಗೆ ಬಟ್ಟಲನ್ನು ಒಡೆದು ನಂಬಿ ತನ್ನ ತೊತ್ತಿನ ಮಗನೆಂದು ಕೂಗುತ್ತಾನೆ. ಆಗ ಅಲ್ಲಿಯ ಜನರು, 'ನೀನು ಬಂದರೆ ಸಹ ಮಹಾಪ್ರತಿಷ್ಠೆಗಳನ್ನು ಮಾಡುವುದನ್ನು ನಿಲ್ಲಿಸುತ್ತಾರೆ. ನೀನು ಇಷ್ಟು ಅಪಶಕುನ ಮಾಡಿದ ಮೇಲೆ ಇನ್ನಾವ ಮೂಗನ್ನು ಮುಂದಿಟ್ಟುಕೊಂಡು ಮದುವೆಯ ಮಾತನ್ನಾಡುವೆವು'! ಎಂದು ಹೇಳಿ ಮದುವೆಯನ್ನೇ ನಿಲ್ಲಿಸುತ್ತಾರೆ.

ಕ್ರಿಸ್ತನನ್ನು ಶುಕ್ರವಾರ ಶಿಲುಬೆಗೇರಿಸಿದ್ದರಿಂದ ಶುಕ್ರವಾರ ಅತ್ಯಂತ ಕೆಟ್ಟ ದಿನವೆಂದು ನಾವಿಕರು ತಿಳಿಯುತ್ತಾರೆ. ಈ ನಂಬಿಕೆಯಿದ್ದು ಶುಕ್ರವಾರ ದಿನ ಗ್ರೀಸಿಗೆ ಪ್ರಯಾಣ ಬೆಳೆಸಿದ ಬ್ಯಾರನ್ ಕವಿ ಮಿಸಲೊಂಘ ಎಂಬಲ್ಲಿ ಮಡಿದ ನೆನಪು ಮಾಡಿಕೊಳ್ಳುತ್ತಾರೆ. ಯುರೋಪಿಯನ್ನರಲ್ಲಿ ಶುಕ್ರವಾರ ಕೂದಲು ಕತ್ತರಿಸಿಕೊಳ್ಳುವುದು ಅಶುಭ. ಸುಶಿಕ್ಷಿತರೂ ಕೂಡ ಅಂದು ಅಶುಭ ಎಂದು ನಂಬುವುದರಿಂದ ವಿಯೆನ್ನಾದ ಸ್ಟುಡಿಯೋಗಳು ಅಂದು ಮುಚ್ಚಿರುತ್ತವೆ. ಆದರೆ ಇರಾಣಿಯರಿಗೆ ಶುಕ್ರವಾರ ಶುಭ. ಹಲಾಂಗ ಜನರಲ್ಲಿಯಂತೆ ನಮ್ಮಲ್ಲಿ ಶನಿವಾರ ಅಶುಭ. ಮಧ್ಯಸಮುದ್ರ ಪ್ರದೇಶದಲ್ಲಿಯಂತೆ ನಮ್ಮಲ್ಲಿ ಮಂಗಳವಾರ ಅಶುಭ. ಜಾವಾ ಜನರಲ್ಲಿ ಸೋಮವಾರ, ಶುಕ್ರವಾರ ಶ್ರೇಷ್ಠ. ಶಿವನು ಹುಟ್ಟಿದ ವಾರವಾದ್ದರಿಂದ ನಮ್ಮಲ್ಲಿ ಸೋಮವಾರ ಶ್ರೇಷ್ಠ.

ಪೂರ್ವ ಆಫ್ರಿಕೆಯಲ್ಲಿ ದನಗಳನ್ನಾಗಲಿ ಮನುಷ್ಯರನ್ನಾಗಲಿ ಲೆಕ್ಕಮಾಡುವುದು, ಅದರಲ್ಲಿಯೂ ಹುಡುಗಿಯನ್ನೆಣಿಸು-

ವುದು ಒಳ್ಳೆಯದಲ್ಲ. ಜನರ ಲೆಕ್ಕಮಾಡಿದರೆ ಒಬ್ಬ ಸಾಯುವನೆಂಬ ಹೆದರಿಕೆ, ಹಾಗು ಗೂಗೆ ಕೂಗಿದರೆ ಅಕ್ಕಿಯ ದರ ಹೆಚ್ಚಾಗುವದೆಂಬ ನಂಬಿಕೆ ನಮ್ಮ ಜನರಲ್ಲಿದೆ.

ಹದಿಮೂರರ ಸಂಖ್ಯೆಯ ನಂಬಿಕೆಯ ಕುರಿತು ಎಡಿಸನ್ ಹೀಗೆ ವಿನೋದ ಮಾಡಿದ್ದಾನೆ. “ನಾನು ಒಮ್ಮೆ ಸ್ತ್ರೀಪುರುಷರ ಒಂದು ಸಮುದಾಯದಲ್ಲಿದ್ದೆ. ಅವರೆಲ್ಲರೂ ಬಹಳ ಆನಂದ-ದಿಂದ ಗದ್ದಲವನ್ನು ಮಾಡುತ್ತ ಮಾತನಾಡುತ್ತಿದ್ದರು. ದುರ್ದೈವದಿಂದ ಒಬ್ಬ ಮುದುಕಿಯು ಅಲ್ಲಿದ್ದವಳು ನಾವು ಹದಿಮೂರೇ ಜನರು ಎಂದು ಅಕಸ್ಮಾತ್ತಾಗಿ ಹೇಳಿದಳು. ಕುಳಿತ್ತಿದ್ದವರೆಲ್ಲರೂ ಇದನ್ನು ಕೇಳಿ ಭಯಗ್ರಸ್ತರಾದರು ಇಬ್ಬರು ಹೆಂಗಸರು ಆ ಕೂಡಲೇ ಆ ಕೋಣೆಯಿಂದ ಹೊರ-ಬೀಳುವವರಲ್ಲಿದ್ದರು. ಆದರೆ ನನ್ನ ಮಿತ್ರನೊಬ್ಬನು ಅಲ್ಲಿದ್ದ ಒಬ್ಬ ಹೆಣ್ಣುಮಗಳು ಬಸುರಿಯಾಗಿದ್ದಳೆಂದೂ ಒಟ್ಟಿಗೆ ನಾವು ಹದಿನಾಲ್ಕು ಜನರೆಂದೂ ಲೆಕ್ಕ ಹಾಕಿದನು. ಹೀಗಾಗಿ ನಮ್ಮೊಳಗಿನವರಲ್ಲಿ ಒಬ್ಬನು ಸಾಯುವುದನ್ನು ಸೂಚಿಸುವುದರ ಬದಲಾಗಿ ಒಬ್ಬರು ಜನಿಸುವುದನ್ನು ಈ ಶಕುನವು ಸ್ಪಷ್ಟ-ಗೊಳಿಸಿತು. ನನ್ನ ಮಿತ್ರನು ಈ ಶಕುನವನ್ನು ಪ್ರಸಂಗಾವ-ಧಾನತೆಯಿಂದ ಇದಿರಿಸದಿದ್ದರೆ ನಮ್ಮ ಗುಂಪಿನಲ್ಲಿನ ಅರ್ಧಕ್ಕರ್ಧ ಸ್ತ್ರೀಯರು ಅದೇ ರಾತ್ರಿ ಅಸ್ವಸ್ಥರಾಗುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ.”

೧೫ ಸ್ವಪ್ನಫಲ

ಪ್ರಾಚೀನ ಕಾಲದಿಂದ ಸ್ವಪ್ನಗಳು ಭವಿಷ್ಯಸೂಚಕ-ಗಳೆಂದು ಗಣಿಸುತ್ತ ಬಂದಿದ್ದಾರೆ. ಗ್ರೀಸಿನಲ್ಲಿ ಟ್ಯಾರೆಸಿಯಸ್ ಎಂಬ ಕುರುಡನು ಸ್ವಪ್ನದ ಅರ್ಥ ಹೇಳುವುದರಲ್ಲಿ ತುಂಬ ಪ್ರಸಿದ್ಧನು. ಮಧ್ಯರಾತ್ರಿಯ ನಂತರ ಸ್ವಪ್ನಗಳು ಹೆಚ್ಚು ಸ್ಪಷ್ಟವೆಂದೂ ಸತ್ಯವೆಂದೂ ರೋಮನ್ನರು ತಿಳಿಯುತ್ತಿದ್ದರು. ರಾತ್ರಿಯ ಕೊನೆಯ ತಾಸಿನಲ್ಲಿ ಬೀಳುವ ಸ್ವಪ್ನ ನಿಜವಾಗುವುದೆಂದು ತಿಳಿಯುವರು. ಸ್ವಪ್ನದಲ್ಲಿ ಅಶುಭ ಸಂಗತಿ ನೋಡಿದರೆ ಶುಭಪರಿಣಾಮವೆಂದೂ ಶುಭವನ್ನು ನೋಡಿದರೆ ಅಶುಭ ಪರಿಣಾಮವೆಂದೂ ನಂಬಿಕೆಯಿದೆ. ನಿದ್ರೆಯಲ್ಲಿ ಅಳುವುದು ಆನಂದದ ಸೂಚನೆ. ಸಾವನ್ನು ಕಂಡರೆ ಮದುವೆಯ ಫಲ. ಮದುವೆಯನ್ನು ಕಂಡರೆ ಸಾವು. ಸ್ವಪ್ನದಲ್ಲಿ ರೋಗಿಯಾದ ಭಾವನೆಯಾದರೆ ದೀರ್ಘಾಯುಷ್ಯ. ಮೇಜವಾನಿ ನೋಡಿದರೆ ಬಡತನ ಮತ್ತು ಹಸಿವೆಯ ಪರಿಣಾಮ. ಸರ್ಪ ಕಚ್ಚಿದಂತೆ ಕಂಡರೆ ಸಂಪತ್ತು.

ಒಳ್ಳೆಯದರ ಅಥವಾ ಕೆಟ್ಟದರ ಪ್ರತೀಕವೆನಿಸುವ ಸ್ವಪ್ನಗಳೂ ಇವೆ. ಸ್ವಪ್ನದಲ್ಲಿ ದೇವರನ್ನು ನೋಡುವುದು ಒಳ್ಳೆಯದು. ಬ್ರಾಹ್ಮಣರು, ರಾಜರು, ಹೂಗಳು, ರತ್ನ,

ಹೆಂಗಸರು ಅಥವಾ ಕನ್ನಡಿಯನ್ನು ಕಂಡರೆ ರೋಗ ಗುಣವಾಗುತ್ತದೆ. ಕೈತೊಳೆದುಕೊಳ್ಳುವುದರಿಂದ ಚಿಂತೆಯಿಂದ ಬಿಡುಗಡೆ. ಪ್ರಿಯಕರರನ್ನಪ್ಪುವುದು ಶುಭಸೂಚಕ. ಶುದ್ಧನೀರನ್ನು ನೋಡಿದರೆ ದೀರ್ಘಾಯುಷ್ಯ. ಕದಡಿದ ನೀರನ್ನು ನೋಡಿದರೆ ಅಲ್ಪಾಯುಷ್ಯ. ಹಲ್ಲು ಬಿದ್ದಂತೆ ಕಂಡರೆ ಮಿತ್ರನನ್ನು ಕಳಕೊಳ್ಳುವುದು.

ಯುರೋಪಿಯನ್ನರಲ್ಲಿ ಗುಲಾಬಿ ಹೂವನ್ನು ಕಂಡರೆ ಪ್ರೇಮಿಗಳಿಗೊಳ್ಳೆಯದು; ಆದರೆ ಬಿಳಿಯ ಗುಲಾಬಿಯನ್ನು ಕಾಣಬಾರದು. ಸರ್ಪ ಕಂಡರೆ ವೈರಿಗಳ ಸೂಚಕ. ಉಗುರು ಕತ್ತರಿಸುವುದನ್ನು ಕಂಡರೆ ಅಶುಭ. ಕೂದಲುದುರಿದಂತೆ ಕಂಡರೆ ಅಶುಭ. ಕೂದಲುದುರುವ ಬೋಳು ತಲೆಯ ಗಂಡಸನ್ನು ನೋಡಿದರೆ ಸಂಪತ್ತು. ಆದರೆ ಅಂಥ ಹೆಂಗಸನ್ನು ನೋಡಿದರೆ ಬಡತನ. ಕುದುರೆಯ ರೇಸನ್ನು ನೋಡಿದರೆ ಪ್ರೇಮದಲ್ಲಿ ಯಶಸ್ಸು. ಪರ್ಶಿಯಾದಲ್ಲಿ ಜೇನ್ನೊಣವನ್ನು ಕಂಡರೆ ಸಂಪತ್ತು. ದ್ರಾಕ್ಷೆ ಅಶುಭ. ಎರಡು ಕೋಣಗಳು ಹೊಡೆದಾಡುವುದನ್ನು ಕಂಡರೆ ದೇವದೂತರು ಮನೆಯಲ್ಲೊಬ್ಬನ ಆತ್ಮವನ್ನು ಕೊಂಡೊಯ್ಯುವರು.

ತಾಯಿತಗಳು, ಯಂತ್ರಗಳು

ಗ್ರಹಪೀಡೆ ತೊಲಗಿಸಲು ತಾಯಿತ ಕಟ್ಟುತ್ತಾರೆ. ಪ್ರಿಯ ಜನರನ್ನು ವಶಮಾಡಿಕೊಳ್ಳಲೂ, ಬಾಲಗ್ರಹ ಪೀಡೆ ನಿವಾರಿಸಲೂ ಯಂತ್ರ ಕಟ್ಟುತ್ತಾರೆ. ಹುಲಿಯುಗುರು,

ಹಂದಿಯ ಎಲವು, ಕರಡಿಯ ಕೂದಲು ಮುಂತಾದುವನ್ನು ಬೆಳ್ಳಿ, ಚಿನ್ನಗಳಲ್ಲಿ ಕಟ್ಟಿ ರಕ್ಷಾಬಂಧನವಾಗಿ ಉಪಯೋಗಿಸುತ್ತಾರೆ. ದೆವ್ವ ಭೂತಗಳನ್ನು ಹೆದರಿಸುವ ಶಕ್ತಿ ಇವುಗಳಲ್ಲಿದೆಯೆಂದು ಕಲ್ಪನೆಯಿದೆ. ಅನಿಶ್ಚಿತ ಪರಿಸ್ಥಿತಿಗಳಲ್ಲಿ, ವಿಶೇಷತರಹದ ರೋಗಗಳಲ್ಲಿ, ಯುದ್ಧಗಳ ಸಂದರ್ಭದಲ್ಲಿ, ಮನಸ್ಸಿಗೆ ಸಮಾಧಾನ ತಂದುಕೊಡಲು ಇವುಗಳಿಂದ ಉಪಯೋಗವಾಗುತ್ತವೆ. ಈಗಲೂ ಯುರೋಪದ ಸೈನ್ಯಗಳಲ್ಲಿ ಭಾಗ್ಯದಾತ (maseot) ಪ್ರಾಣಿಗಳ ಉಪಯೋಗ ಬಹುವಾಗಿ ಪ್ರಚಾರದಲ್ಲಿದೆ. ಆಯರಿಶ್ ದಂಡಿನ ತೋಳನಾಯಿ wolfhound) ಬಹು ಮುಖ್ಯವಾದ ಪ್ರಾಣಿ. ಪಶುಪಕ್ಷಿ ಹಾಗು ಮನುಷ್ಯರೊಳಗೆ ಒಂದುತರದ ಆತ್ಮಸಂಬಂಧ (Spiritual relation) ಇದೆಯೆಂದು ಇಂದಿಗೂ ನಾಗರಿಕ ಜನರಲ್ಲಿಯೂ ನಂಬಿಕೆಯಿದೆ. ಜೀವಂತವಿದ್ದ ಕರೀಬೆಕ್ಕು, ಆಡು, ಮಂಗಗಳನ್ನು ಕೆಲವು ಸತ್ತ ಪ್ರಾಣಿ ಅಥವಾ ಅವುಗಳ ಅವಶೇಷಗಳನ್ನೂ ಹಡಗುಗಳಲ್ಲಿ ಹಾಗು ಸೈನ್ಯಗಳಲ್ಲಿ ಭಾಗ್ಯಚಿಹ್ನೆ ಎಂಬಂತೆ ಉಪಯೋಗಿಸುತ್ತಾರೆ. ದ್ವಿತೀಯ ಮಹಾಯುದ್ಧದ ಗಂಡಾಂತರ ಸಮಯದಲ್ಲಿ ಈ ಪದ್ಧತಿ ಹೆಚ್ಚಾಗಿ ಕಂಡಿತು.

೧೬ ರತ್ನಗಳು

ರತ್ನಗಳಿಗೆ ನಿಸರ್ಗಾತೀತ ಶಕ್ತಿಯಿದೆಯೆಂದು ಪ್ರಾಚೀನ ಕಾಲದಲ್ಲಿ ಬಹು ಮಹತ್ವ ಕೊಡುತ್ತಿದ್ದರು. ಪ್ರತಿಫಲಿಸಿದ ಬೆಳಕಿನಿಂದ ಹೊಳೆಯದೆ ತಮ್ಮ ಸ್ವಂತ ಜೀವಾಳ ಶಕ್ತಿಯಿಂದ ಕಿರಣಗಳನ್ನು ಪಸರಿಸುವಂತೆ ಕಾಣುವ ರತ್ನಗಳು ನಿಸರ್ಗಾತೀತ ರಹಸ್ಯಶಕ್ತಿಯನ್ನು ಹೊಂದಿವೆಯೆಂದು ಅವರು ತಿಳಿದಿದ್ದರಲ್ಲಿ ಆಶ್ಚರ್ಯವಿಲ್ಲ. ಏಶಿಯಾದಲ್ಲಿ ರತ್ನಗಳ ಪ್ರಭಾವದ ಕಥೆ ಬಹಳ. ವಜ್ರ ಧರಿಸಿದ ಶ್ರೀಮಂತರಿಗೆ ಬಡವರಿಗಾದಂತೆ ಪ್ಲೇಗು ಬಾಧಿಸುವುದಿಲ್ಲವೆಂಬ ಕಲ್ಪನೆಯಿತ್ತು. ವಜ್ರಗಳಿಗೆ ಇತರ ವಜ್ರಗಳನ್ನು ಹಡೆಯುವ ಶಕ್ತಿಯಿದೆಯೆಂದು ಒಂದು ಉಲ್ಲೇಖವಿದೆ. ಬೇರೆ ಬೇರೆ ಪ್ರಾಣಿಗಳಲ್ಲಿ ರತ್ನ ದೊರೆವು-ದೆಂಬ ನಂಬಿಗೆಯಿತ್ತು. ಭಾರತದಲ್ಲಿ ಸರ್ಪಗಳ ತಲೆಯ ಮೇಲೆ ಅಮೂಲ್ಯ ರತ್ನಗಳಿವೆಯೆಂಬ ನಂಬಿಕೆಯಿದೆ. ಮಾಣಿಕ-ವನ್ನು ಧರಿಸಿದವನಿಗೆ ಅದು ಗಂಡಾಂತರ ಸಮಯದಲ್ಲಿ ಬಣ್ಣ ಬದಲಿಸಿ ಮುನ್ನೆಚ್ಚರಿಕೆ ಕೊಡುವುದೆಂಬ ಕಲ್ಪನೆ ಮಧ್ಯಯುಗ-ದಲ್ಲಿತ್ತು. ಅನೇಕ ರತ್ನಗಳಿಗೆ ಬೇರೆ ಬೇರೆ ರೋಗಗಳನ್ನು ನಿವಾರಿಸುವ ಶಕ್ತಿ ಹಾಗೂ ಇತರ ಮಾಟದ ಶಕ್ತಿಯಿದೆಯೆಂಬ ಕಲ್ಪನೆಯಿತ್ತು.

ಕೆಲವು ರತ್ನಗಳು ಕೆಲವರಿಗೆ ಒಳಿತನ್ನು ಮಾಡುವವು. ಕೆಲವರಿಗೆ ಅವುಗಳಿಂದ ಕೇಡೇ ಆಗಬಹುದು. ವಿಶೇಷವಾಗಿ ಸಾರಾವಳಿ ನೋಡಿಯೇ ನೀಲರತ್ನವನ್ನು ಉಪಯೋಗಿಸುತ್ತಾರೆ. ಕೊಹಿನೂರ ರತ್ನ ಹೋದಲ್ಲೆಲ್ಲ ಅನರ್ಥವುಂಟಾಯಿತು. ನಂತರ ವಿಕ್ಟೋರಿಯಾ ರಾಣಿಯ ಕಿರೀಟದಲ್ಲಿ ಸೇರಿದಾಗ ಅಪಾಯವನ್ನು ಮಾಡಲಿಲ್ಲ. ಆದ್ದರಿಂದ ಇಂದಿಗೂ ಅದು ರಾಣಿ ಧರಿಸುವ ಕಿರೀಟದಲ್ಲಿಯೇ ಇರುತ್ತದೆ.

೧೭ ದೃಷ್ಟಿದೋಷ

ಅನೇಕರ ಕಣ್ಣು ಕೆಟ್ಟದ್ದೆಂದು ಜನರ ಕಲ್ಪನೆ. ಕೆಟ್ಟ ಕಣ್ಣಿನವರು ಯಾವುದಾದರೂ, ಹಣ್ಣು ತುಂಬಿದ ಮರವನ್ನು, ನೋಡಿ ಎಷ್ಟು ಹಣ್ಣು ಬಿಟ್ಟಿವೆ! ಎಂದರೆ ಸಾಕು ಮರ ಹರಿದು ಟೊಂಗೆ ಮುರಿದು ಬೀಳುವವೆಂದೇ ತಿಳಿಯಬೇಕು. ಮಹರ್ಷಿ ದೇವರಾತರ ತೆಂಗಿನ ತೋಟದಲ್ಲಿ ಬಹಳ ತೆಂಗಿನಕಾಯಿ ತುಂಬಿದ ಮರವನ್ನು ನೋಡಿ ಒಬ್ಬನು ಉದ್ಗಾರ ತೆಗೆದ ಕೂಡಲೆ ಕಾಯಿಗಳ ಗೊನೆ ಉದುರಿ ಬಿದ್ದ ಸಂಗತಿಯನ್ನು ಅವರು ತಿಳಿಸಿದ್ದಾರೆ. ಪೂರ್ವ ಆಫ್ರಿಕಾದಲ್ಲಿ ಕೆಟ್ಟ ದೃಷ್ಟಿಯನ್ನು ತಪ್ಪಿಸಲು ಆಹಾರವನ್ನು ಹುಲ್ಲಿನಿಂದ ಮುಚ್ಚಿಡುವರು. ಸುಮಾತ್ರಾದಲ್ಲಿ ಮೆಚ್ಚಿಕೆಯ ಕಣ್ಣುಗಳಿಂದ ಶಿಶುಗಳನ್ನು ನೋಡಿದರೆ ಕೆಟ್ಟ ಭೂತಗಳಿಗೆ ಹೊಟ್ಟೆಕಿಚ್ಚುಂಟಾಗಿ ಅಪಾಯವನ್ನು ಮಾಡುವವೆಂದು ತಿಳಿಯುತ್ತಾರೆ. ಸೌಂದರ್ಯವು ಸಾಮಾನ್ಯವಾಗಿ ದೃಷ್ಟಿಗೆ ಗುರಿಯಾಗುವುದಾದರೂ ಕುರೂಪಿಗಳೂ ಸಹ ಕೆಟ್ಟ ಕಣ್ಣಿಗೆ ಗುರಿಯಾಗಬಹುದು ಎಂದು ಗ್ರೀಕರ ನಂಬಿಕೆಯಿದೆ. ನಮ್ಮಲ್ಲಿಯೂ ಹಲ್ಲು ಬಿದ್ದ ಮುದುಕಿಯರೂ ದೃಷ್ಟಿ ತೆಗೆಸಿಕೊಳ್ಳುವುದಕ್ಕೆ ಇದೇ ಕಾರಣವಿರಬೇಕು. ತಲೆನೋವು, ನಿದ್ರಾನಾಶ, ಚಿಕ್ಕಪುಟ್ಟ ಪೆಟ್ಟು

ಗಳೂ ದೃಷ್ಟಿಯಿಂದ ಆಗಬಹುದು. ದಕ್ಷಿಣ ಸಮುದ್ರ ಪ್ರದೇಶದಲ್ಲಿ ತಮ್ಮ ನಾಯಕನ ಮರಣ ಕೆಟ್ಟದೃಷ್ಟಿಯ ಪರಿಣಾಮ ಎಂದು ತಿಳಿಯುತ್ತಿದ್ದರು. ಯಾವನೊಬ್ಬ ದುರ್ದೈವಿ ಸಿಕ್ಕರೆ ಅವನೇ ದೃಷ್ಟಿ ಹಾಕಿದವನೆಂದು ಅವನನ್ನು ಕೊಲ್ಲುತ್ತಿದ್ದರು. ಯಾರೂ ಅಂಥವರು ಸಿಕ್ಕದಿದ್ದರೆ ಜೀವದ ಗಾಬರಿಯಿಂದ ಊರಿಗೆ ಊರೇ ಕಿತ್ತಿದ್ದು ಊರನ್ನು ಬಿಟ್ಟದ್ದಿದೆ. ಭೂತವೈದ್ಯ ದೃಷ್ಟಿ ತೆಗೆದ ಮೇಲೆ ಊರಿಗೆ ಪುನಃ ಬರುತ್ತಿದ್ದರು.

ನಾಲಿಗೆಯಿಂದಲೂ ಕೆಟ್ಟ ಪರಿಣಾಮವಾಗಬಹುದು. ಹೌಸಾ ಜನರಲ್ಲಿ (ಆಫ್ರಿಕಾ) ಒಬ್ಬ ಕೆಟ್ಟ ನಾಲಿಗೆಯವನು ಒಂದು ಕಲ್ಲನ್ನು ಕಂಡು 'ಅಬ್ಬಾ, ಎಷ್ಟು ದೊಡ್ಡಕಲ್ಲು' ಎಂದನಂತೆ. ಕೂಡಲೇ ಅದು ಮೂರು ತುಂಡಾಗಿ ಬಿದ್ದಿತಂತೆ. ಆಕಾಂಬಾ ಜನರಲ್ಲಿ ಆಕಳನ್ನು ಯಾರಾದರೂ ಹೊಗಳಿದರೆ ಅವನನ್ನು ಕರೆಸಿ ಕೆಟ್ಟ ದೃಷ್ಟಿಯನ್ನು ಕಿತ್ತುಕೊಂಡು ಹೋಗುವಂತೆ ತಿಳಿಸುತ್ತಾರೆ. ಆತನು ತನ್ನ ಎಂಜಲನ್ನು ತಕ್ಕೊಂಡು ಆಕಳಿಗೆ ತಾಗಿಸಬೇಕು.

ಕೆಟ್ಟ ಕಣ್ಣು, ಕೆಟ್ಟ ಬಾಯಿಗಳಿಗೆ ಮತ್ಸರವೇ ಕಾರಣ ಎಂದೂ ಹೇಳುವುದುಂಟು. ತಮ್ಮ ಮಕ್ಕಳು ಬುದ್ಧಿವಂತರೆಂದು ಇತರರ ಮುಂದೆ ಹೊಗಳಿದರೆ ಅವರ ಅಸೂಯೆಯಿಂದ ಅನಿಷ್ಟವಾಗುವುದೆಂದು ತಿಳಿಯುತ್ತಾರೆ. ನೆರೆಮನೆಯ ಮಕ್ಕಳಿಗೆ ಕಾಯಿಲೆಯಾದರೆ ತಮ್ಮ ಮಗು ಆರೋಗ್ಯದಿಂದಿದ್ದರೂ ಚಾದರ ಹೊದೆಸಿಕೊಂಡು ಜ್ವರ ಬಂದಿದೆಯೆಂದು ಹೇಳುತ್ತ ಹೊತ್ತುಕೊಂಡು ತಿರುಗಾಡುವವರೂ ಉಂಟು.

ಬಂಜೆಯಾದ ಹೆಂಗಸು ಮಕ್ಕಳನ್ನು ಎತ್ತಿಕೊಂಡರೆ ಮಕ್ಕಳಿಗೆ ಅನಿಷ್ಟವಾಗುವುದೆಂಬ ನಂಬಿಕೆಗೂ ಇಂಥದೇ ಕಾರಣವಿದೆ. ಕೆಲವು ಮುದುಕರಿಗೆ ನಿಮ್ಮ ವಯಸ್ಸೆಷ್ಟು ಎಂದು ಕೇಳಿದರೆ ಸಿಟ್ಟು ಬರುತ್ತದೆ. ಅವರ ವಯಸ್ಸು ತಿಳಿದರೆ ಮತ್ಸರ ಮಾಡುವದರಿಂದ ತಮ್ಮ ಆಯುಷ್ಯಕ್ಕೆ ಧಕ್ಕೆ ಎಂಬ ಕಲ್ಪನೆಯೇ ಕಾರಣ. ಊಟಮಾಡುವಾಗ ಕೆಟ್ಟ ಕಣ್ಣಿನವರು ನೋಡಿದರೆ ಅಜೀರ್ಣವಾಗುತ್ತದೆ ಎಂದು ನೀಲಗಿರಿಯ ತೋಡರು ತಿಳಿಯುತ್ತಾರೆ. ಬಡವರು ಶ್ರೀಮಂತರ ಊಟವನ್ನು ನೋಡಿ ಬಾಯಲ್ಲಿ ನೀರು ತಂದರೆ ಆ ಶ್ರೀಮಂತನಿಗೆ ಹೊಟ್ಟೆನೋವು, ಆಮಾಂಶ ಆಗಬಹುದು. 'ನಾಯರು' ಇಂಥ ಆಸೆಯನ್ನು 'ಕೋಟಿ' (ಕೋರುವುದು) ಎಂದು ಕರೆಯುತ್ತಾರೆ. ನಮ್ಮಲ್ಲಿಯೂ ಹೀಗೆ ಆಸೆಬುರುಕತನದಿಂದ ದೃಷ್ಟಿ ಹಾಕುವದಕ್ಕೆ ಕೋರುಹಾಕುವುದು ಎಂದು ಹೇಳುತ್ತಾರೆ. ಅನೇಕ ಪಂಗಡಗಳವರು ಬೇರೆಯವರಿಗೆ ಕಾಣದಂತೆ ಊಟ ಮಾಡುತ್ತಾರೆ.

ನಮ್ಮಲ್ಲಿ ದೃಷ್ಟಿ ತೆಗೆಯುವ ವಿಧಾನ ಒಂದು ಹೀಗಿದೆ. ಒಂದು ಹರಿವಾಣದಲ್ಲಿ ನೀರು ತುಂಬಿ ಸುಣ್ಣ, ಅರಿಸಿನಗಳನ್ನು ನೀರಿನಲ್ಲಿ ಕಲಸುವರು. ಆಗ ನೀರು ಕೆಂಪಾಗುವದು. ಆ ನೀರಿಗೆ 'ಆನ' ಎಂದೆನ್ನುವರು. ಹತ್ತಿಯ ಅರಿವೆಯ ಬತ್ತಿ ಮಾಡಿ ಎಣ್ಣೆಯಲ್ಲಿ ಅದ್ದಿಸಿ ದೀಪಹಚ್ಚಿ, ಚೆಂಬನ್ನು ಅದರ ಮೇಲೆ ತಲೆಕೆಳಗಾಗಿಟ್ಟುಕೊಂಡು, ನಂತರ ಆ ಚೆಂಬನ್ನು ದಷ್ಟಿತಾಗಿದ ವ್ಯಕ್ತಿಯ ಸುತ್ತಲು ಮೂರುಸಲ ತಿರುಗಿಸಿ ನಂತರ ಆ ಚೆಂಬನ್ನು ಹರಿವಾಣದ ನೀರಿನಲ್ಲಿ ತಲೆಕೆಳಗಾಗಿ ಇಡುವರು. ದೀಪದ ಬೆಂಕಿಯಿಂದ ಚೆಂಬಿನ ಹವೆ ಬಿಸಿಯಾಗಿ ವಿರಲವಾಗಿ-

ರುತ್ತದೆ. ಆದರಿಂದ ಹೊರಗಿನ ಹವೆಯ ಒತ್ತಡದ ಮೂಲಕ ಹರಿವಾಣದ ನೀರೆಲ್ಲ ಶಬ್ದ ಮಾಡುತ್ತ ಚೆಂಬಿನೊಳಗೆ ಸೇರಿ-ಕೊಳ್ಳುತ್ತದೆ. ಆಗ ದೃಷ್ಟಿಭೂತವು 'ಹಾನ'ವನ್ನು ಮೋರಿ (ಹೀರಿ) ಬಿಟ್ಟುಹೋಗುವದೆಂದು ತಿಳಿಯುತ್ತಾರೆ. 'ಹಾನ' ಎಂಬುದು ಸಂಸ್ಕೃತದ ಪಾನ ಅಂದರೆ ಕುಡಿಯುವುದು ಎಂಬ ಶಬ್ದದಿಂದ ಬಂದುದೆಂತ ಕಾಣುತ್ತದೆ. ಗಶಿಯಾದಲ್ಲಿ ಮೆಣಸಿನ ಕಾಳು ಮತ್ತು ಉಪ್ಪನ್ನು ಕಟ್ಟಿದರೆ ದೃಷ್ಟಿ ತಾಗುವದಿಲ್ಲ ಎಂದು ತಿಳಿಯುವರು. ಮೆಣಸಿನಕಾಯಿ, ಉಪ್ಪು ಕೂಡಿಸಿ ದೃಷ್ಟಿ ಬಿದ್ದವನಿಗೆ 'ಸುಳಿ'ದು ಚೆಂಕಿಗೆ ಹಾಕುವದು ನಮ್ಮಲ್ಲಿನ ಪದ್ಧತಿ. ಬತ್ತಲೆಯಾಗಿ ಎಮ್ಮೆ ಅಥವಾ ಆಕಳುಗಳ ಮುಂದೆ ಮುಂಜಾನೆ ತಿರುಗಿದರೆ ದೃಷ್ಟಿದೋಷ ಪರಿಹಾರ. ಕಬ್ಬಿಣದ, ಬೆಳ್ಳಿಯ ಉಂಗುರ, ಚಾಕು ಇವೆಲ್ಲ ದೃಷ್ಟಿಯ ಪರಿಹಾರದ ಇತರ ಸಾಧನಗಳು.

೧೮ ಕಾವ್ಯಕಲ್ಪನೆಗಳು

ಕಾವ್ಯಗಳಲ್ಲಿನ ಅತಿಶಯೋಕ್ತಿಗಳು ಹಾಗು ಇತರ ಕಲ್ಪನೆಗಳು ಕೆಲವು ಸಲ ಮುಂದಿನವರ ಮೂಢನಂಬಿಕೆಗಳನ್ನು ಪೋಷಿಸುವುದು ಕಾಣುತ್ತದೆ. ಕೆಲವು ಗಿಡಬಳ್ಳಿಗಳು ಅಂಗನೆಯರ ಪಾದಸ್ಪರ್ಶವಿಲ್ಲದೆ ಹೂಬಿಡುವುದಿಲ್ಲ. (ಅಶೋಕವೃಕ್ಷ, ನವಮಾಲಿಕಾಲತೆ) ಮುಂತಾದ ಕಾಲಿದಾಸ-ಹರ್ಷಾದಿಗಳ ಉಕ್ತಿಗಳು ಇದಕ್ಕೆ ಉದಾಹರಣೆ. ಕೋಗಿಲೆಗಳು ವಸಂತಮಾಸದಲ್ಲಿ ಮಾತ್ರ ಕೂಗುತ್ತವೆ, ಚಕೋರಪಕ್ಷಿ ಚಂದ್ರಕಿರಣಗಳನ್ನು ಕುಡಿಯುತ್ತದೆ ಮುಂತಾದ ಕವಿಸಮಯಗಳನ್ನು ವಿವೇಚನಾಶಕ್ತಿ ಕಡಿಮೆಯಿರುವವರು ನಿಜವೆಂದೇ ತಿಳಿಯಬಹುದು. ರಾವಣನಿಗೆ ಹತ್ತು ತಲೆಗಳಿರುವ ಹೇಳಿಕೆ, ಬ್ರಹ್ಮನ ನಾಲ್ಕು ಮುಖಗಳು, ಗಣಪತಿಯ ಆನೆಮೊಗ ಇವಕೆಲ್ಲ ವಿಶಿಷ್ಟ ಸಂಕೇತಾರ್ಥ ಇದ್ದಿರಬೇಕು. ಅನೇಕ ಪುರಾಣ ಕಥೆಗಳು ನಿಸರ್ಗವ್ಯಾಪಾರಗಳಿಗೆ ಮಾನವಜೀವನದ ರೂಪುಕೊಟ್ಟ ಕಥೆಗಳೆಂದು ವಿದ್ವಾಂಸರ ಹೇಳಿಕೆಯಿದೆ. ವಾಮನಾವತಾರದ ಕಥೆ ಸೂರ್ಯ ಮೂಡಿ, ಮೇಲೆ ಬಂದು ಮುಳುಗುತ್ತಿರುವ ಪ್ರಾಕೃತಿಕ ಘಟನೆಯಿಂದ ರೂಪುಗೊಂಡಿತೆಂದೂ ವಿವರಣೆ ಕೊಡುತ್ತಾರೆ. ಜನಾಂಗದ ನಂಬಿಕೆಗಳನ್ನೂ ಅನೇಕ ಸಲ ಕವಿ ಚಿತ್ರಿಸುತ್ತಾನೆ ಎಂಬ ವಿಷಯವನ್ನೂ ಮರೆಯ-

ತಕ್ಕದಲ್ಲ. ಭಾರತ ರಾಮಾಯಣಗಳಲ್ಲಿ ಬರುವ ಮಂತ್ರಾಸ್ತ್ರಗಳ ಕಲ್ಪನೆ ಜನಾಂಗದಲ್ಲಿ ಮೊದಲೂ ಪ್ರಚಾರದಲ್ಲಿದ್ದಿತೆಂದೂ ಆದ್ದರಿಂದಲೇ ಕವಿಗಳು ತಮ್ಮ ಕಾವ್ಯಗಳಲ್ಲಿ ಅದನ್ನು ತಂದ-ರೆಂದೂ ಹೇಳಬಹುದು.

೧೯ ಕೃತಜ್ಞತೆಯ ಪೂಜೆ

ಕೆಲವು ಪ್ರಾಣಿಗಳಿಂದಲೂ ವನಸ್ಪತಿಗಳಿಂದಲೂ ತಮ-ಗಾಗುವ ಉಪಕಾರಕ್ಕಾಗಿಯೂ ಅವುಗಳ ಮೇಲಿನ ಕೃತಜ್ಞತೆ-ಯಿಂದಲೂ ಮನುಷ್ಯ ಅವುಗಳಿಗೆ ಪೂಜೆ ಸಲ್ಲಿಸುತ್ತಾನೆ. ಹಿಂದುಗಳಿಗೆ ಆಕಳಿನ ಉಪಯೋಗ ಬಹಳ. ಭಾವಿಕತೆ ಹೆಚ್ಚು. ಆಕಳ ಹಾಲು, ತುಪ್ಪ, ಗೋಮೂತ್ರ, ಗೋಮಯ-ಗಳನ್ನು ಆಯುರ್ವೇದದಲ್ಲಿ ಔಷಧಕ್ಕೆ ಬಳಸುವರು. ಆಕಳಿನ ಪ್ರತಿಯೊಂದು ಅವಯವ ಪವಿತ್ರವೆಂದು ತಿಳಿಯುತ್ತಾರೆ. ಹಿಂದುಸ್ತಾನಕ್ಕೆ ಬರುವ ಮೊದಲಿನಿಂದಲೂ ಆರ್ಯರಿಗೆ ಆಕಳು-ಎತ್ತುಗಳ ಅಗತ್ಯ ಬಹಳವಾಗಿದ್ದಿರಬಹುದು. ತೆಂಗಿನ-ಮರ, ತುಲಸಿಗಿಡ ಮೊದಲಾದುವು ತಮ್ಮ ಉಪಯುಕ್ತತೆ-ಯಿಂದಲೇ ಹೆಚ್ಚು ಗೌರವಾರ್ಹವಾಗಿವೆ. ದೇವರು ಸರ್ವ-ವ್ಯಾಪಿ ಎಂಬ ಘನವಾದ ವಿಚಾರವೂ ಇಂಥ ಪೂಜೆಗಳಿಗೆ ಅನುಕೂಲವಾಗಿರುವುದು ಕಾಣುತ್ತದೆ.

೨೦ ಧಾರ್ಮಿಕ ವಿಧಿಗಳ ಉದ್ದೇಶ

ಬುದ್ಧಿವಂತರಾದವರು ಜನರ ಹಿತದ ದೃಷ್ಟಿಯಿಂದ ಅನೇಕ ಆಚರಣೆಗಳನ್ನು ಗೊತ್ತುಮಾಡುತ್ತಾರೆ. ಅವುಗಳಲ್ಲಿ ಸಂಧ್ಯಾವಂದನೆಯು ಕ್ರಮವೊಂದು. ನದಿಗೆ ಹೋಗಿ ಸ್ನಾನ ತೀರಿಸಿ, ಸಂಧ್ಯಾಮುಹೂರ್ತದಲ್ಲಿ ಸೂರ್ಯನ ಹಿತವಾದ ಕಿರಣಗಳು ಮೈಮೇಲೆ ಬೀಳುತ್ತಿದ್ದಾಗ, ಪ್ರಶಾಂತವಾದ ವಾತಾವರಣದಲ್ಲಿ ಬಯಲಿನ ಶುದ್ಧಹವೆಯನ್ನು ಸೇವಿಸುತ್ತ, ಸೂರ್ಯನು ನಮಗೆ ಒಳ್ಳೆಯ ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುವುದು ದೇಹ ಮನಸ್ಸುಗಳೆರಡರ ಆರೋಗ್ಯಕ್ಕೂ ಪೋಷಕವಾಗಿದೆ. ಆದರೆ ಆ ಉದ್ದೇಶ ಈಗಿನ ಸಂಧ್ಯಾವಂದನೆ-ಗಳಲ್ಲಿ ಅಷ್ಟು ಸಫಲವಾಗುವುದಿಲ್ಲ. ಹೆಂಗಸರಿಗೆ ತುಲಸೀಪೂಜೆ, ಅಶ್ವತ್ಥಪ್ರದಕ್ಷಿಣೆಗಳು ಹಾಗೆಯೇ ಆರೋಗ್ಯದಾಯಕಗಳು. ಏಕಾದಶೀ ಉಪವಾಸಗಳ ಉದ್ದೇಶ ಉಪವಾಸದಿಂದ ಪಚನ ಕ್ರಿಯೆಯನ್ನು ಸರಿಯಾಗಿಡುವುದೆಂತ ಹೇಳಬಹುದು. ಆದರೆ ಇಂಥ ಉಪವಾಸಗಳು ಅಥವಾ ಫಳಾರಗಳು ಮೂಲ ಉದ್ದೇಶ ಸಾಧಿಸುವುದು ದೂರ ಉಳಿದು ತದ್ವಿರುದ್ಧ ಪರಿಣಾಮವನ್ನು ಸಾಧಿಸುತ್ತವೆ. "ಫಳಾರ"ದಲ್ಲಿ ಫಲಾಹಾರದ ಮೂಲ ಅರ್ಥವೇ ಕಣ್ಮರೆಯಾಗಿದೆ. ಹೀಗೆ ಮೂಲ ಉದ್ದೇಶ ಕಣ್ಮರೆಯಾಗಿ

ಬರೇ ಅಂಧ ಶ್ರದ್ಧೆಯ ತೋರಿಕೆಯ ಆಚರಣೆಗಳಾಗಿವೆ ಇಂಥ ವಿಧಿಗಳು. ಮಡಿಮೈಲಿಗೆಗಳ ಮೂಲ ಉದ್ದೇಶ ಆರೋಗ್ಯ-ದೃಷ್ಟಿ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ ಆ ಉದ್ದೇಶ ಹೋಗಿ ವರ್ಷಗಟ್ಟಲೆ ತೊಳೆಯದೆ ನಾರುವ ನಾರು-ಮಡಿ ಅಥವಾ ರೇಶಿಮೆಯ ಬಣ್ಣದ ವಸ್ತ್ರ ಮಡಿ ಎಂಬ ಕಲ್ಪನೆ ರೂಢಿಯಲ್ಲಿ ಬಂದುಹೋಗಿದೆ. ಅದೇ ದಿನ ತೊಳೆದ ಹತ್ತಿಯ ಸ್ವಚ್ಛವಸ್ತ್ರಕ್ಕೆ ಬೇರೆ ವಸ್ತ್ರದ ಸೋಂಕಾದರೂ ಮೈಲಿಗೆ ಎಂದು ಅನೇಕರ ತಿಳುವಳಿಕೆ. ಇದು ಮೂಢನಂಬಿಕೆಯೇ ಸರಿ. ರಜಸ್ವಲೆಯರು, ಬಾಣಂತಿಯರು, ಹಾಗೂ ಸತ್ತವರ ಹೆಣ ಮೈಲಿಗೆ ಎನ್ನುವುದರಲ್ಲಿಯೂ ಆರೋಗ್ಯದೃಷ್ಟಿಯನ್ನು ಗುರುತಿಸಬಹುದು.

ಆದರೆ ಎಷ್ಟೋ ಆಚಾರಗಳು ಮೂಢ ನಂಬಿಕೆಗಳಿಂದಲೇ ರೂಢವಾಗಿವೆ. ಮಾರ್ಕೋಪೋಲೋ ಎಂಬ ಮಧ್ಯಯುಗದ ಪ್ರವಾಸಿಯು ಟಾರ್ಟರಿಯಲ್ಲಿನ ಒಂದು ಮೋಜಿನ ಪದ್ಧತಿಯನ್ನು ಉಲ್ಲೇಖಿಸಿದ್ದಾನೆ. ಹೆಂಡತಿ ಹಡೆದು ಹದಿನಾಲ್ಕು ದಿನಗಳ ನಂತರ ಗಂಡನು ಶಿಶುವಿನ ಹತ್ತರ ಮಲಗಿ ೪೫ ದಿನ ಬಾಣಂತಿತನಕ್ಕೆ ಕೂಡ್ರಬೇಕಿತ್ತು. ಆತನ ಸ್ನೇಹಿತರು ಆಗಾಗ ಬಂದು ಆತನ ಯೋಗಕ್ಷೇಮವನ್ನು ಕೇಳಿಕೊಂಡು ಹೋಗುತ್ತಿದ್ದರು. ತಂದೆಯು ಬೇಟೆಯಾಡುವಾಗ ಕೆಲವು ನಿಷಿದ್ಧ ಕೆಲಸ (taboo) ಗಳನ್ನು ಮಾಡಿದರೆ ಶಿಶುವಿಗೆ ಅಪಾಯ ಎಂದು ಮೂಢ ನಂಬಿಕೆಯಿಂದ ಕಾಟಕೊಡುವ ಅತ್ತೆ ಹಾಗೂ ಹೆಣ್ಣಿನ ಇತರ ಬಳಗದವರ ಕಾಟದಿಂದ ತಪ್ಪಿಸಿಕೊಳ್ಳಲು

ಗಂಡನು ಹಾಸಿಗೆಯಲ್ಲಿ ಮಲಗುವ ರೂಢಿಯನ್ನು ಮಾಡಿ-ಕೊಂಡನೆಂದು ವ್ಯಾಕ್ಸ್‌ಮುಲ್ಲರರ ಮತ. ಹೆಂಡತಿಯ ಬಾಣಂತಿತನದ ಅವಧಿಯಲ್ಲಿ ಗಂಡನು ಇತರ ಹೆಂಗಸರ ಬೆನ್ನುಹತ್ತಿ ಹೋಗುವುದನ್ನು ತಪ್ಪಿಸುವ ಸಲುವಾಗಿ ಈ ಕ್ರಮ ಬಳಕೆಯಲ್ಲಿ ಬಂದಿರಬಹುದೆಂದು ನನ್ನ ಮಿತ್ರರೊಬ್ಬರ ಅಭಿಪ್ರಾಯ. ಆದರೆ ಲೈಂಗಿಕ ಸಂಬಂಧದಲ್ಲಿ ಹೆಚ್ಚು ಸ್ವಾತಂತ್ರ್ಯವುಳ್ಳ ಅನಾಗರಿಕರಲ್ಲೇ ಹೆಚ್ಚು ಈ ರೂಢಿಯಿರು-ವುದನ್ನು ನೋಡಿದರೆ ಈ ತರ್ಕ ಸಮಂಜಸವಾಗಿಲ್ಲ. ತಂದೆಗೂ ಮಗುವಿಗೂ ದೈಹಿಕಬಂಧವಿದೆಯೆಂದೂ ಒಬ್ಬನಿಗೆ ಆದ ಪರಿಣಾಮ ಮತ್ತೊಬ್ಬನಿಗೂ ಆಗುವುದೆಂಬ ಕಲ್ಪನೆಯಿರುವುದೇ ಕಾರಣವೆಂದೂ ಟೈಲರರ ಮತ.

೨೧ ಮೂಢನಂಬಿಕೆಗಳ ಉಪಯುಕ್ತತೆ

ಪ್ರಾಣಿಗಳನ್ನು ಕುಲಲಾಂಛನ (Totem) ವಾಗಿಟ್ಟು-ಕೊಳ್ಳುವುದು ಒಂದೇ ಕುಲದ ಹೆಣ್ಣು ಗಂಡುಗಳ ವಿವಾಹ ಆಗದಂತೆ ಮಾಡಿ ಅನಾಗರಿಕ ಜನರ ಆರೋಗ್ಯಕ್ಕೆ ಅನುಕೂಲ-ವಾಗಿದೆ. ಅದರಂತೆ ಮನಸ್ಸಿನ ಭ್ರಮೆಯಿಂದ ಉಂಟಾದ ದೆವ್ವಗಳನ್ನು ಬಿಡಿಸುವ ಅನೇಕ ವಿಧಾನಗಳು ಮನಸ್ಸನ್ನು ಹಗುರಮಾಡುವ ದೃಷ್ಟಿಯಿಂದಲೂ ಮನಸ್ಸಿನಿಂದ ದೇಹದ ಮೇಲೆಯೂ ಪರಿಣಾಮ ಮಾಡುವ ದೃಷ್ಟಿಯಿಂದಲೂ ಕೆಲ-ಮಟ್ಟಿಗೆ ಉಪಯುಕ್ತವಾಗಿವೆ. ತಾಯಿತಗಳು, ಮಾಟದ ಶಕ್ತಿಯುಳ್ಳವೆಂದು ತಿಳಿಯಲಾದ ಪ್ರಾಣಿಗಳ ಅವಯುವಗಳು, ಮಾಟಗಳು ನಿಸರ್ಗದ ಶಕ್ತಿಗಳ ಮೇಲೆ ಅನಾಗರಿಕನಿಗೆ ಅಧಿಕಾರದ ನಂಬಿಕೆಯ ಬಲವನ್ನು ಕೊಡುವ ರೀತಿಯಿಂದ ಆತನಿಗೆ ನಂಬಿಕೆಯ ಬಲವನ್ನು ತಂದುಕೊಟ್ಟವೆ. ಭೂತ-ನೃತ್ಯಗಳು ಹಾಗು ಇತರ ವಿಧಾನಗಳು ರೋಗಿಯ ಮನಸ್ಸಿನ ಆತಂಕಗಳನ್ನು ನಿವಾರಿಸಿ ಆತನಿಗೆ ಆರೋಗ್ಯಪಡೆದುಕೊಳ್ಳಲು ಸಹಾಯಕವಾಗುತ್ತವೆ. "ಮಾಟಗಾರಿಕೆ, ಗಂಗಾನದಿಯ ನೀರು, ಸೇಂಟ್ ಫ್ರಾನ್ಸಿಸ್ ಝೇವಿಯರನ ಕಡಿದ ಮೊಳಕೈ-ತುಂಡು, ಹಂದಿಯ ಎಲುವು, ಅಥವಾ (ಗುಣಕಾರಕವೆಂದು ಅಥವಾ ಮಹಿಮೆಯುಳ್ಳುದೆಂದು) ಬಹಳ ಪ್ರಚಾರ ಪಡೆದ

ಯಾವುದೇ ವಸ್ತುವಿನಿಂದಾದರೂ ಜನಸಂಖ್ಯೆಯಲ್ಲಿ ಕೆಲವು ಪ್ರಮಾಣದ ಜನರು (ನೂರಕ್ಕೆ ಇಪ್ಪತ್ತೈದರಷ್ಟು) ಗುಣ-ಹೊಂದುತ್ತಾರೆಂಬುದು ಯಾವಾಗಲೂ ಕಂಡು ಬರುತ್ತದೆ" ಎಂದು ಅಲ್ಡಸ್ ಹಕ್ಸ್‌ಲಿಯವರು ಹೇಳುತ್ತಾರೆ.

ಬೇಟೆಯಾಡಲು ಹೋಗುವ ಮೊದಲಿನ ಬೇಟೆಯ ನೃತ್ಯ, ಯುದ್ಧಕ್ಕೆ ಹೋಗುವ ಮೊದಲಿನ ಯುದ್ಧನೃತ್ಯಗಳು ಹಾಗೂ ಇತರ ಪ್ರಕಾರದ ಮಾಟಗಳು ಕಾಡು ಮಾನವನಿಗೆ ಸ್ವಂತದ ಸೂಚನೆ (Auto suggestion) ಯ ಮೂಲಕ ವಿಶ್ವಾಸವನ್ನೂ ಬಲವನ್ನೂ ತಂದುಕೊಡುತ್ತವೆ. ಸಾಮೂಹಿಕ-ವಾಗಿ ಜರುಗಿಸುವ ವಿವಿಧ ಪೂಜಾವಿಧಾನಗಳು, ಹಬ್ಬಗಳು ಮಾನವನ ಜೀವನದಲ್ಲಿ ವೈವಿಧ್ಯವನ್ನು ತಂದು ಬೇಸರವನ್ನು ಹೋಗಲಾಡಿಸುತ್ತವೆ.

ಜನರ ಮೂಢ ನಂಬಿಕೆಗಳಿಂದ ಭೂತವೈದ್ಯರು, ಶಕುನ ಹೇಳುವವರು, ಪುರೋಹಿತರು, ಜ್ಯೋತಿಷಿಗಳು ಮುಂತಾದ ಅನೇಕ ಜನರ ಉಪಜೀವನ ಸಾಗುತ್ತದೆ. ಕುದುರೆ ಜೂಜಿನಲ್ಲಿ ಭಾಗವಹಿಸುವವರು, ಸಟ್ಟಾವ್ಯಾಪಾರಿಗಳು, ಇತರ ವ್ಯಾಪಾರಿ-ಗಳು, ಮದುವೆ ನಿಶ್ಚಯಿಸುವವರು ಮುಂತಾದ ಲೋಕದ ಸಮಸ್ತ ಜನರೂ ಒಂದಿಲ್ಲೊಂದು ಅಥವಾ ಹಲವಾರು ಮೂಢ-ನಂಬಿಕೆಗಳಿಂದ ತಾವು ಅವು ಮೂಢನಂಬಿಕೆಗಳೆಂದು ತಿಳಿದಿರಲಿ, ತಿಳಿಯದಿರಲಿ ಏನೋ ಪ್ರಯೋಜನವಿದೆಯೆಂದು ಭಾವಿಸುತ್ತಾರೆ ಎಂದು ಹೇಳಬಹುದು.

೨೨ ಮೂಢನಂಬಿಕೆಗಳಿಂದಾದ ದುಷ್ಪರಿಣಾಮಗಳು

ಮಾಟಗಾರಿಕೆಯ ನಿಯಂತ್ರಣದಿಂದ ಪಂಗಡಗಳಲ್ಲಿ ಬುದ್ಧಿವಂತರೂ ಕರ್ತೃತ್ವಶಕ್ತಿಯುಳ್ಳವರೂ ಮುಖಂಡರಾಗಿ ಅವುಗಳಿಗೆ ಒಳಿತೇ ಹೆಚ್ಚಾಗಿದೆಯೆಂದು ಸರ್ ಜೇಮ್ಸ್ ಫ್ರೇಸರರು ಹೇಳಿದ್ದರೂ ಅದು ಅಷ್ಟು ಸತ್ಯವಲ್ಲ. ದೇವತೆಗಳ ಮತ್ತು ಭೂತಗಳ ಪ್ರೀತ್ಯರ್ಥವಾಗಿ, ಬೆಳೆ ಹೆಚ್ಚಾಗುವ ಸಲುವಾಗಿ, ಮಳೆ ಬರುವುದಕ್ಕಾಗಿ, ಕಟ್ಟಡಗಳಿಂದ ಆಗುವ ಪೀಡೆ ತಪ್ಪಿಸಿ-ಕೊಳ್ಳುವುದಕ್ಕಾಗಿ, ಅಥವಾ ಇನ್ನಾವುದೋ ಪೀಡೆಯ ನಿವಾರಣೆಗಾಗಿ ನಿರಪರಾಧಿ ಜನರ ಬಲಿ ಕೊಟ್ಟುದಕ್ಕೆ ಲೆಕ್ಕವಿಲ್ಲ. ಆಫ್ರಿಕಾ ಹಾಗು ಆಸ್ಟ್ರೇಲಿಯಾಗಳ ಮೂಲನಿವಾಸಿಗಳು ಹೆಚ್ಚು ಮಕ್ಕಳನ್ನು ಕಟ್ಟಿಕೊಂಡು ತಿರುಗಲು ಆಗುವದಿಲ್ಲ ಎಂದು ಅಥವಾ ಆಹಾರಾಭಾವದ ಮೂಲಕವಾಗಿ ತಮ್ಮ ಸ್ವಂತ ಮಕ್ಕಳನ್ನು ತಾವೇ ಕೊಲ್ಲುತ್ತಿದ್ದುದರ ಜೊತೆಗೆ ಮೂಢನಂಬಿಕೆ-ಗಳ ಮೂಲಕವೂ ತಮ್ಮ ಮಕ್ಕಳು ಶಿಶುಗಳಿದ್ದಾಗಲೇ ಕೊಲ್ಲುತ್ತಿದ್ದರು. ಪಶ್ಚಿಮ ಆಫ್ರಿಕಾದ 'ಬೊಂಡೈ' ಜನರಲ್ಲಿ ಶಿಶುಗಳ ಮೇಲ್ದವಡೆಯ ಹಲ್ಲು ಮೊದಲು ಬಂದರೆ ಅವನ್ನು ಕೊಲ್ಲುವರು.

ಯಾವ ಕಾಲದಲ್ಲಿಯೂ ಅಜ್ಞ ಜನರನ್ನು ಮೋಸಗೊಳಿಸಿ ಅವರ ಮೇಲೆ ಅಧಿಕಾರ ನಡೆಸಲೂ ಅವರನ್ನು ಶೋಷಿಸಲೂ ಭೂತವೈದ್ಯ ಅಥವಾ ಪೂಜಾರಿಗಳಿಗೆ ಮೂಢನಂಬಿಕೆ ಪ್ರಬಲ ಸಾಧನವಾಗಿ ನಡೆದು ಬಂದಿದೆ. ಮೂಢನಂಬಿಕೆಗಳನ್ನು ಹೆಚ್ಚು ಮಾಡುವರಲ್ಲದೆ ಕಡಿಮೆ ಮಾಡುವುದರಲ್ಲಿ ಅವರ ಆಸಕ್ತಿಯಿಲ್ಲ. ಭೂತಗಳನ್ನು ದೂರ ಮಾಡುವುದಕ್ಕಾಗಿ ಬೇರೆ ಪಂಗಡಗಳವರ ತಲೆಗಳನ್ನು ತರಲು ಮನುಷ್ಯರ ಬೇಟೆ ಯಾಡುವುದು ಕಾಡುಜನಗಳ ವ್ರತವೇ ಆಗಿತ್ತು. ಪಾಪುವಾ ದೇಶದವರು ಹಾಗು ತಾಮ್ರವರ್ಣದ ಇಂಡಿಯನರು ಮಾಡುವ "ತಲೆಬೇಟೆ" ಪ್ರಸಿದ್ಧವಾಗಿದೆ. ಆಫ್ರಿಕದ ಬಸುಟೋಲೆಂಡಿನಲ್ಲಿ ಬಸುಟೋ ಜನರು ಮಾಟದ ಶಕ್ತಿಯನ್ನು ಪಡೆಯಲು ಜೀವಂತ ಮನುಷ್ಯರನ್ನು ಹಿಡಿದು ಅವರ ದೇಹದ ತುಂಡುಗಳನ್ನು ಬೇರೆ ಬೇರೆ ಅವಯವಗಳಿಂದ ಕಡಿದು, ವನಸ್ಪತಿಗಳೊಡನೆ, ರಕ್ತದೊಡನೆ ಬೆರಸಿ ಕೋಡುಗಳೊಳಗೆ ತುಂಬಿಕೊಂಡು ಇಟ್ಟುಕೊಳ್ಳುತ್ತಾರೆ. ಆ ಮಿಶ್ರಣವನ್ನು ಮೈಗೆ ಬಳಿದು. ಕೊಂಡರೆ ಇಲ್ಲವೆ ತಿಂದರೆ ಅದ್ಭುತ ಶಕ್ತಿ ಬರುವುದೆಂದು ಅವರ ನಂಬುಗೆ. ಅದಕ್ಕಾಗಿ ಪ್ರತಿವರ್ಷ ಸಾವಿರಾರು ಜನರ ಕೊಲೆ ಮಾಡುತ್ತಾರೆ. ಈ ಚಿತ್ರಹಿಂಸೆ 'ಮದ್ದಿನ ಕೊಲೆ' ಎಂದು ಪ್ರಸಿದ್ಧವಾಗಿದೆ. ಕೋಂಗೋದಲ್ಲಿ ಕೆಲವು ವರ್ಷಗಳ ಹಿಂದೆ ಕೊಂಗೋ ನದಿಯ ದಂಡೆಯ ಹತ್ತಿರ ಮೊಸಳೆಗಳ ಚರ್ಮ ಗಳನ್ನು ಹೊದ್ದಂತಹ ಕೆಲವು ಕಾಡುಜನರು ತಮ್ಮ ಕೈಗೆ ಸಿಕ್ಕ ಜನರ ಬಲಿ ತೆಗೆದುಕೊಂಡರು. ಬೆಲ್ಜಿಯನ್ ಅಧಿಕಾರಿ

ಗಳು ಈ ರಹಸ್ಯವನ್ನು ಭೇದಿಸಿ ಆ ಗುಂಪನ್ನು ನಾಶಮಾಡುವ ಮೊದಲೆ ಮೂವತ್ತುನಾಲ್ಕು ಜನರನ್ನು ಕೊಂದು ಅವರ ಕೆಲವು ಭಾಗಗಳನ್ನು ತಿಂದೂ ಮುಗಿಸಿದ್ದರು ಆ ಮೊಸಳೆಮಾನವರು. ಕೆಲವು ವರ್ಷ ಹಿಂದೆ ಕೊಂಗೋರಾಜ್ಯದ 'ಕಿತಾವಾ ಸಂಘ'ದ ಜನರು ಕಿರುಬನ ಚರ್ಮಗಳನ್ನು ಧರಿಸಿಕೊಂಡು ಯುರೋಪಿ-ಯನ್ ಮಿಶನರಿಗಳ ಮೇಲೆ ದಾಳಿ ಮಾಡಿದರು. ಬಿಳಿಯ ಮಿಶನರಿಗಳು ನಿಸರ್ಗಾತೀತ ಶಕ್ತಿಯನ್ನು ಹೊಂದಿರುವರೆಂದು ಅವರ ನಂಬುಗೆಯಿರುವದರಿಂದ ಅವರನ್ನು ಕೊಲೆ ಮಾಡಿ, ಅವರ ಶರೀರದ ಜೀವಾಳವಾದ, ಭಾಗಗಳನ್ನು ತಿಂದು ಆ ನಿಸರ್ಗಾತೀತ (Supernatural) ಶಕ್ತಿಯನ್ನು ಪಡೆಯ ಬೇಕೆಂದು ಅವರು ಉದ್ದೇಶಿಸಿದ್ದರೆಂದು ಕಾಣುತ್ತದೆ. ಯುಕ್ತ-ರಾಷ್ಟ್ರಸಂಘಕ್ಕೆ ಸೇರಿದ ಕಾಂಗೊ ಕಾರ್ಯಾಚರಣೆಯ ಸೈನಿಕರು ಮೂವತ್ತೊಂದು ಮಿಶನರಿಗಳನ್ನು 'ಕಿರುಬ ಮನುಷ್ಯ'ರಿಂದ ಪಾರು ಮಾಡಿದರು. ಹೀಗೆ ಬಲಿಯಾದದ್ದು ತಿಳಿಯದೆ ಮಡಿ ಯುವ ದೇಶೀಯರ ಸಂಖ್ಯೆ ಎಷ್ಟಿದೆಯೋ. ಯುರೋಪಿನಲ್ಲಿ ಮಾಟಗಾರರನ್ನು ಜೀವಂತ ಸುಡುವ ಶಿಕ್ಷೆಯು ಹದಿನೇಳನೇ ಶತಮಾನದ ಕೊನೆಯ ವರೆಗೂ ಆಚರಣೆಯಲ್ಲಿತ್ತು. ನಿರಪರಾಧಿ ಜನರನ್ನೆಷ್ಟೋ ಮಾಟಗಾರರೆಂದು ಒಂದಿಲ್ಲೊಂದು ಕಾರಣದಿಂದ ನಿರ್ಣಯಿಸಿ ಸುಡುತ್ತಿದ್ದರು. ಮಾಟಗಾರಿಕೆ ಯಲ್ಲಿನ ಮೂಢ ನಂಬಿಕೆಯೇ, ಮಾಟಗಾರರ ಹೆದರಿಕೆಯೇ ಇದಕ್ಕೆ ಮೂಲ. ಕೆಲ ಕಾಲದ ಹಿಂದೆ ತನ್ನ ಗುಡಿಸಲಿನ ಮುಂಸುಗಡೆ ಮಲಗಿದ್ದ ಒಬ್ಬ ಆದಿವಾಸಿ ಹೆಂಗಸು ಮಾಟಗಾತಿ

ಯೆಂಬ ಸಂಶಯದಿಂದ ಆ ಹಳ್ಳಿಯ ಜನರು ಕಲ್ಲುಗಳನ್ನು ಹೊಡೆದು ಅವಳನ್ನು ಕೊಂದ ವರ್ತಮಾನ "ಟೈಮ್ಸ್ ಆಫ್ ಇಂಡಿಯಾ" ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಆಫ್ರಿಕಾದ ಬಾಕುಬಾ ಜನರು ತಮ್ಮ ಜನರಲ್ಲಿ ಅನೇಕ ಮಾಟಗಾರರೂ ಮಾಟಗಾತಿಯರೂ ಇರುವರೆಂಬ ಸಂಶಯದಿಂದ ವಿಷವನ್ನು ಕುಡಿಯುವ 'ದಿವ್ಯ'ವನ್ನು ಏರ್ಪಡಿಸಿದರು. ಆ ದಿವ್ಯದ ಪ್ರಕಾರ ತಾವು ನಿರಪರಾಧಿಗಳೆಂದು ತೋರಿಸಬೇಕೆಂಬ ಮನೀಷೆಯಿಂದ ಆರೋಪಿಗಳು ವಿಷವನ್ನು ಕುಡಿದರು. ನೂರಾರು ಜನರು ಸತ್ತುಹೋದರು. ಆದರೆ ಅದರಿಂದ ನಿಜವಾಗಿ ಅವರೆಲ್ಲ ಮಾಟಗಾರರೆಂದೇ ಮತ್ತೂ ನಿಶ್ಚಯ ಮಾಡಿದರು ಆ ಪಂಗಡದವರು. ಯಾಕೆಂದರೆ ದಿವ್ಯದ ತಿಳಿವಳಿಕೆಯ ಪ್ರಕಾರ ನಿರಪರಾಧಿಗಳು ವಿಷವನ್ನು ಕುಡಿದರೂ ಸಾಯದೆಯೆ ಇರಬೇಕಿತ್ತು. ಮಾಟಗಾರಿಕೆಯ ಹೆದರಿಕೆ ಆಫ್ರಿಕನ್ನರಲ್ಲಿ ಕಲ್ಪನಾತೀತವಾಗಿದೆ. ಇಂಗ್ಲಂಡದ ಆಕ್ಸ್‌ಫೋರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಯಗಳಲ್ಲಿ ಉಚ್ಚ ಶಿಕ್ಷಣ ಕಲಿತ ಮೇಧಾವಿಗಳೂ ಮಾಟಗಾರಿಕೆಯಲ್ಲಿ ತುಂಬ ವಿಶ್ವಾಸವಿಟ್ಟಿರುತ್ತಾರೆ. ಇಂಗ್ಲಂಡದಲ್ಲಿ ಶಿಕ್ಷಣ ಪಡೆದ ಘಾನಾದೇಶದ ಒಬ್ಬ ವಿದ್ವಾಂಸನು ಎನ್‌ಕ್ರೂಮಾ (ಘಾನಾದ ಅಧ್ಯಕ್ಷ) ನ ರಾಜಕೀಯ ಹಸ್ತಕನು 'ಜುಜು' ಶಾಪವನ್ನು ತನ್ನ ಮೇಲೆ ಹೇರುವನೆಂದು ಹೆದರಿ ದೇಶವನ್ನೇ ಬಿಟ್ಟು ಓಡಿ ಹೋದನು. ಶಿಕ್ಷಿತರ ಅವಸ್ಥೆ ಹೀಗಾದ ಮೇಲೆ ಅಶಿಕ್ಷಿತರ ಮನಸ್ಥಿತಿ ಹೇಗೆ? 'ವೂಡೂ' ಅಥವಾ 'ಮಾಟದ ಬಲಿ' ಎಂಬ ಮಾಂತ್ರಿಕರ ಕಾಟಕ್ಕೆ

ಆಫ್ರಿಕನ್ನರು ಅಕ್ಷರಶಃ ಹೆದರಿ ಸಾಯುತ್ತಾರೆ. ಕೆಲವರು ಎಲುಬನ್ನು ತೋರಿಸಿ ಆ ಮಾಂತ್ರಿಕ ಶಾಪವನ್ನು ಬಿಡುವರು. ತನ್ನ ಮರಣದ ಹೇಳಿಕೆಯಿಂದಲೇ ಆಗಿಂದಾಗಲೇ ಕೆಲವರು ಸಾಯುವರು. ಕೆಲವರು ಅನ್ನ-ನೀರು ಬಿಟ್ಟು ನವೆಯುತ್ತ ಸಾವನ್ನು ಪಡೆಯುವರು. ಬೊಟ್ಟನ್ನು ತೋರಿಸಿ ನಿನಗೆ "ವೂಡೂ" ಮಾಡಿರುವೆನೆಂದರೂ ಆ ಸೂಚನೆಯ ಪರಿಣಾಮವೇ ಬಲಿ ತೆಗೆದುಕೊಳ್ಳುವುದು. "ವೂಡೂ" ಅಂದರೆ 'ಮಾಂತ್ರಿಕ' ಎಂಬ ಅರ್ಥವೂ ಆಗುತ್ತದೆ. ವೂಡೂ ಮರಣವನ್ನು ಬಿಟ್ಟ ಮಾಂತ್ರಿಕನಿಗಿಂತ ಹೆಚ್ಚಿನ ಮಾಂತ್ರಿಕ ಎಂದು ನಂಬಿರುವವನಿಂದ ಮಾತ್ರ ಬಲಿಯಾದವನು ಬದುಕಬಹುದು. ದಕ್ಷಿಣ ರ್ಹೊಡೇಸಿಯಾದಲ್ಲಿ ಮೊದಲು ಬೆಳೆ ಸರಿಯಾಗಿರದಿದ್ದರೆ ಕೆಟ್ಟ ಭೂತಗಳೇ ಕಾರಣ ಎಂದು ತಿಳಿದು ಬಿಳಿಯ ಕೋಳಿಯನ್ನು ಭೂತಗಳ ಪೀಡೆ ಕಳೆದುಕೊಳ್ಳಲು ಕೊಲ್ಲುತ್ತಿದ್ದರು. ಈಗೀಗ ಬಿಳಿಯ ಜನರ ಮೂಲಕವಾಗಿಯೇ ಈ ಭೂತಗಳ ಹಾವಳಿ ಹೆಚ್ಚಾಗಿದೆಯೆಂದು ಬಿಳಿಯರನ್ನೇ ಬಲಿತೆಗೆದುಕೊಳ್ಳಲು ದಂಗೆಯನ್ನೆಬ್ಬಿಸುತ್ತಾರೆ.

೨೩ ಸೇಡಿನ ವಿಚಿತ್ರ

ಸೇಡು ತೀರಿಸಿಕೊಳ್ಳುವ ವಿಚಿತ್ರ ಪ್ರಕಾರವೊಂದಿದೆ. 'ಜೀವಂ ಭದ್ರಾಣಿ ಪಶ್ಯತಿ' ಎಂಬಂತೆ ಅನೇಕ ಮೂಢ ನಂಬಿಕೆಗಳು ತಮ್ಮ ಮತ್ತು ತಮ್ಮವರ ಜೀವ ಉಳಿಸಿಕೊಳ್ಳಬೇಕು, ಕಷ್ಟಗಳನ್ನು ತಪ್ಪಿಸಿಕೊಳ್ಳಬೇಕು, ತಾವು ಹಾಳಾಗದೆ ವೈರಿಯ ನಾಶವಾಗಬೇಕು ಎಂಬ ಸ್ವಾಭಾವಿಕವಾದ ಆಸೆಯಿಂದ ರೂಪುಗೊಂಡಿವೆ. ಆದರೆ ಮತ್ತೂ ವಿಚಿತ್ರ ಮೂರ್ಖ ಶಿಖಾಮಣಿಗಳು ಈ ಜಗತ್ತಿನಲ್ಲಿ ಆಗೀಗ ಕಾಣಬರುತ್ತಾರೆ. ಕಷ್ಟ ಅಥವಾ ಅಪಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವವರೂ ಕೆಲಕಡೆ ಇದ್ದಾರೆ. ರಷ್ಯಿಡ್ ಎಂಬಲ್ಲಿನ ಚುವಾಕ್ ಎಂಬ ಜನಾಂಗದವರು ತಾವು ಯಾರ ಮೇಲೆ ಸೇಡು ತೀರಿಸಿಕೊಳ್ಳು-ವುದಿದೆಯೋ ಅವರ ಮನೆ ಅಥವಾ ಗುಹೆಗಳ ಬಾಗಿಲಿನಲ್ಲಿ ನೇಣುಹಾಕಿಕೊಳ್ಳುವರು. ಆತ್ಮಹತ್ಯೆ ಮಾಡಿಗೊಂಡು ಸತ್ತು ಭೂತಗಳಾಗಿ ವೈರಿಯನ್ನು ಕಾಡಬೇಕೆಂಬ ಅಪೇಕ್ಷೆಯೇ ಅದಕ್ಕೆ ಕಾರಣ. ಆತ್ಮಹತ್ಯೆ ಮಾಡಿಕೊಳ್ಳುವವರು ಪ್ರೇತಗಳಾಗುವರೆಂಬ ನಂಬಿಕೆ ನಮ್ಮ ದೇಶದಲ್ಲಿಯೂ ಇದೆ. ಹಿಂದಕ್ಕೆ

ಒಬ್ಬನು ತನ್ನ ಹೆಂಡತಿಯ ಮೇಲಿನ ಸಿಟ್ಟನಿಂದ ಆಕೆಗೆ ವೈಧವ್ಯ ದೀಕ್ಷೆಯನ್ನು ಕೊಡಬೇಕೆಂಬ ಉದ್ದೇಶದಿಂದ ಪ್ರೇರಿತನಾಗಿ ಆತ್ಮಹತ್ಯೆ ಮಾಡಿಕೊಂಡನಂತೆ! ತಾವು ಆತ್ಮಹತ್ಯೆ ಮಾಡಿಕೊಂಡು ಭೂತಗಳಾಗಿ ವೈರಿಗಳನ್ನು ಕಾಡುವೆವೆಂದು ನಂಬಿ ಸತ್ತ ಮೂರ್ಖರಿಗಿಂತ ಆತನು ಹೆಚ್ಚು ಬುದ್ಧಿವಂತನಾಗಿ ಕಾಣುತ್ತಾನೆ !

೨೪ ಭೀತಿಯ ಭೂತ

ಮೂಢನಂಬಿಕೆಗಳುಳ್ಳ, ವಿವೇಚನಾಶಕ್ತಿಯನ್ನು ಉಪಯೋಗಿಸದಿರುವ ಜನರಲ್ಲಿ ಎಂಥ ಸುಳ್ಳು ಸುದ್ದಿಗಳಾದರೂ ಪ್ರಚಾರಕ್ಕೆ ಬಂದು ಗಾಬರಿಯನ್ನುಂಟುಮಾಡುತ್ತವೆ. ಕೆಲವು ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಕ್ಕಳನ್ನು ಹಿಡಿದುಕೊಂಡು ಹೋಗುವವರ ಕುರಿತಾದ ಅನೇಕ ಭೀತಿಯ ಸುದ್ದಿಗಳು ಹಾರಾಡುತ್ತಿದ್ದವು. ಮ್ಯಾಂಗನೀಸ ಕಣಿಯ ಭೂತಗಳ ಶಮನಾರ್ಥವಾಗಿ ಬಲಿಕೊಡಲು ಮಕ್ಕಳನ್ನು ಹಿಡಿದುಕೊಂಡು ಹೋಗುವರೆಂದು ಕೆಲವರೆಂದರೆ, ಗಂಗಾವಳಿ ನದಿಯ ಸೇತುವೆ ಕಟ್ಟುವಾಗ ನರಬಲಿ ಕೊಟ್ಟ ಹೊರತು ಸೇತುವೆ ನಿಲ್ಲಲಾರದೆಂದು ಮಕ್ಕಳನ್ನು ಹಿಡಿಯಲು ಪ್ರಯತ್ನ ನಡೆಯುತ್ತಿದೆಯೆಂದು ಕೆಲವರು ಸುದ್ದಿ ಹಾಕಿದ್ದರು. ಮಕ್ಕಳನ್ನು ಹಿಡಿದುಕೊಂಡು ಹೋಗುವರೆಂಬ ಸಂಶಯದಿಂದ ಕೆಲ ಭಿಕ್ಷುಕರು ಪೋಲೀಸರ ಕೈಯಲ್ಲಿ ಸಿಕ್ಕು ಒದ್ದಾಡಿದರು. ವಿನೋದಕ್ಕೆಂದು ಮಕ್ಕಳನ್ನು ಹಿಡಿಯುವವರೆಂದು ಕತ್ತಲೆಯಲ್ಲಿ ಸೋಗು ಹಾಕಿಕೊಂಡು ಕಂಬಳಿಯ ಮುಸುಕಿನಲ್ಲಿದ್ದಾಗಲೇ

ಮುಸುಕಿನ ಪೆಟ್ಟು ತಿಂದವರು ಹಲಕೆಲವರು. ಊರಿಂದೂರಿಗೆ ನಾನಾರೀತಿಯ ಭೀತಿಯ ಸುಳ್ಳು ಸುದ್ದಿಗಳ ಹಾರಾಟವೇ ಹಾರಾಟ. ಮಕ್ಕಳು ಹಗಲಿನಲ್ಲಿಯೂ ಮನೆ ಬಿಟ್ಟು ಒಂಟಿಗ-ರಾಗಿ ಬರಲು ಹೆದರುತ್ತಿದ್ದರು. ಬಹಳ ಜನ ಈ ಭೀತಿಯಲ್ಲಿ ಬಹಳ ದಿನ ನೂಕಿದರು. ನಂತರ ಆ ಭೀತಿಯ ಭೂತ ಇದ್ದಲ್ಲೇ ಕರಗಿಹೋಯಿತು.

ಮಕ್ಕಳನ್ನು ಹಿಡಿದುಕೊಂಡು ಹೋಗಿ ಅವರನ್ನು ಬಲಿ ಕೊಟ್ಟು ಸಿದ್ಧಿಗಳನ್ನು ವಶಮಾಡಿಕೊಳ್ಳಬೇಕೆಂಬ ಮೂಢ ನಂಬಿಕೆಯಿಂದ ಅಂಥ ಕ್ರೂರ ಕೃತ್ಯವನ್ನು ಮಾಡುವ ಕೆಲವು ಸಾಧುಗಳು ಈ ಇಪ್ಪತ್ತನೆಯ ಶತಮಾನದಲ್ಲಿಯೂ ಇರ-ಬಹುದು. ಗುಜರಾತಿನಲ್ಲಿ ಒಬ್ಬ ಸಾಧು ಮನೆಯ ಹೊರಗಿನ ಜಗಲಿಯ ಮೇಲೆ ಮಲಗಿ ನಿದ್ದೆ ಮಾಡುತ್ತಿದ್ದವರನ್ನು ಸಂಹರಿ-ಸುವ ಕಾಯಕವನ್ನೇ ಕೈಕೊಂಡಿದ್ದನು. ಅವನನ್ನು ಪೋಲೀ-ಸರು ಹಿಡಿಯುವುದರೊಳಗೆ ಹದಿನಾಲ್ಕು ಜನರ ಬಲಿ ತೆಗೆದು-ಕೊಂಡಿದ್ದನು. ಕಾಳಿಕಾದೇವಿಯು ತನಗೆ ಕಾಣಿಸಿಕೊಂಡು ನೂರು ಜನರ ಬಲಿಯನ್ನು ಬೇಡಿದಳೆಂದೂ ತಾನು ಅದೇ ಕಾಯಕದಲ್ಲಿದ್ದೆನೆಂದೂ ಆ ಸಾಧು ತನ್ನ ಶತಕೃತ್ಯದ ವಿವರಣೆ ಕೊಟ್ಟನು. ಆದರೆ ಇಂಥವರ ಮೂಢನಂಬಿಕೆ ಎಷ್ಟು ಜನರಿಗೆ ಉಪದ್ರವಕಾರಕವಾಯಿತು, ಭಯೋತ್ಪಾದಕವಾಯಿತು, ಎಷ್ಟು ಮೂಢನಂಬಿಕೆಗಳು ಚೇತರಿಸಿಕೊಂಡು ಜನರ ಮನಃಸ್ವಾಸ್ಥ್ಯ-ವನ್ನು ಕೆಡಿಸಲು ಕಾರಣವಾದುವೆಂಬುದನ್ನು ನೆನೆದರೆ ನಿಜವಾಗಿ ಈ ಮೂಢನಂಬಿಕೆಗಳ ಸಮೂಲ ನಾಶವಾಗದೆ ಜನಕ್ಕೆ ನೆಮ್ಮದಿ-ಯಿಲ್ಲ ಎಂದೆನಿಸದಿರದು.

ಕೆಲವು ವರ್ಷಗಳ ಹಿಂದೆ ನಾಸ್ತಿಕರನ್ನು ಕೊಲ್ಲಲಿಕ್ಕೆ ಒಂದು ಭೂತವು ಸಂಚಾರಕ್ಕೆ ಹೊರಟಿದೆಯೆಂದ ಸುದ್ದಿ ಹಬ್ಬಿದ್ದಿತು. "ರಾತ್ರಿಹೊತ್ತಿನಲ್ಲಿ ಆ ಭೂತವು ಮನೆಬಾಗಿಲಿಗೆ ಬಂದು ತನ್ನ ವಕ್ರದೃಷ್ಟಿಗೆ ಗುರಿಯಾದವರ ಹೆಸರು ಹಿಡಿದು ಮೂರು ಸಲ ಕರೆಯುತ್ತದೆ. ಮೂರುದಿನ ದಿನಾಲು ಬಂದು ಕರೆಯುತ್ತದೆ. ಒಮ್ಮೆ 'ಓ' ಎಂದು ಉತ್ತರ ಕೊಟ್ಟರೆ ಮರು-ದಿನದೊಳಗೆ ಆತನು ಮರಣಹೊಂದುತ್ತಾನೆ" ಎಂದು ಆ ಸುದ್ದಿಯಿತ್ತು. ಆದುದರಿಂದ ಯಾರೂ (ದೇವರಲ್ಲಿ, ಹಾಗು ಭೂತದಲ್ಲಿ ನಂಬಿಗೆಯಿದ್ದವರು ಎಂದು ಹೊಸದಾಗಿ ಹೇಳ-ಬೇಕಾಗಿಲ್ಲ) 'ಓ' ಎನ್ನಕೂಡದು. ಎರಡನೆಯದಾಗಿ ಆ ಆಸ್ತಿಕ ಭೂತಕ್ಕೆ "ಆಸ್ತಿಕಾ, ಇಂದು ಬೇಡ, ನಾಳೆ ಬಾ !" ಎಂಬ ವಾಕ್ಯಗಳನ್ನು ಬಾಗಿಲಿಗೆ ಬರೆದು ಹಚ್ಚಬೇಕು. ಅಂದರೆ ದಿನವೂ ಬಂದು ಆ ಬೋರ್ಡನ್ನು ನೋಡಿಕೊಂಡು ನಾಳೆ ಬರಬೇಕೆಂದು ಮರಳಿ ಹೋಗುವುದು !" ಎಂಬುದು ಈ ಯೋಜನೆಯ ತಿರುಳಾಗಿತ್ತು. ನಾಸ್ತಿಕರನ್ನು ನಿರ್ಮೂಲ ಮಾಡುವ ಸದುದ್ದೇಶದಿಂದ ಹೊರಟ ಆ ಭೂತವು ರಶಿಯಾ ದೇಶಕ್ಕೆ ಮೊದಲಿಗೆ ಹೋಗಿ ಆ ತನ್ನ ಜನ್ಮೋದ್ದೇಶವನ್ನು ಸಾರ್ಥಕ ಮಾಡಿಕೊಂಡಿದ್ದರೆ ಒಳ್ಳೆಯದಾಗುತ್ತಿತ್ತಲ್ಲವೆ? ಆದರೆ ಈ ಭೂತದಿಂದ ನಾಸ್ತಿಕರು ಹೆದರುವ ಬದಲಿಗೆ ಮೂಢ-ನಂಬಿಕೆಯುಳ್ಳ ಆಸ್ತಿಕರೇ ಹೆದರಿ ಕಂಗಾಲಾಗಿ ಹೋದರು. ಹೆಂಗಸರು, ಮಕ್ಕಳೂ ರಾತ್ರಿಯನ್ನು ನೆಮ್ಮದಿಯಿಂದ ಕಳೆಯು-ವುದೇ ಕೆಲದಿನ ಕಷ್ಟವಾಯಿತು. ಶಿಕ್ಷಿತರ ಮನೆಗಳಲ್ಲಿಯೇ ಹೀಗಾದ ಮೇಲೆ, ಮನೆಗೆ ಸರಿಯಾಗಿ ಬಾಗಿಲೂ ಇಲ್ಲದ,

ಓದಲು ಬರೆಯಲು ಬಾರದ ಅಜ್ಞರಾದ ಬಡ ಜನರನ್ನು ಈ ಮೂಢನಂಬಿಕೆಯ ಭೂತದಿಂದ ದೇವರೇ ಕಾಪಾಡಬೇಕು.

ಹಿಂದಿನ ಅಷ್ಟಗ್ರಹಯೋಗದಲ್ಲಿ (ಇದು ನಿಜವಾಗಿ ಜ್ಯೋತಿಷಿಗಳಿಗೂ ಭಟ್ಟರಿಗೂ ಬಂದ ಯೋಗ ಎಂದು ಕೆಲವರ ಅಭಿಪ್ರಾಯ) ಎಂಥೆಂಥ ಕಲ್ಪನೆಗಳು ಹರಡಿದ್ದುವೆಂಬುದು ಜನರ ಸ್ಮರಣೆಯಲ್ಲಿರಬೇಕು. ಇಂಥ ದಿನಾಂಕದಂದು ಜಗತ್ತಿನ ಪ್ರಳಯ ಎಂದು ಇಟಲಿಯ ಕೆಲವು ಸಾಧುಗಳು ಸಾರಿ ದೊಡ್ಡ ಪರ್ವತವನ್ನು ಹತ್ತಿ ಕುಳಿತರು. ಅಷ್ಟಗ್ರಹ ಶಾಂತಿಗಾಗಿ ಜಪ-ಹೋಮಹವನಾದಿಗಳು ದೇಶದಲ್ಲೆಲ್ಲ ನಡೆದವು. ಜನರ ಧಾರ್ಮಿಕ ಭಾವನೆ ಹೆಚ್ಚಾಗಿ ದಾನಧರ್ಮಾದಿಗಳು ನಡೆದುದಕ್ಕೆ ನಮಗೆ ದುಃಖವಿಲ್ಲ. ಅಷ್ಟಗ್ರಹಯುತಿಯ ಕಾಲದಲ್ಲಿ ಎಷ್ಟೋ ಜನ ಹೆದರಿಕೆಯಿಂದ ಪ್ರಯಾಣಮಾಡಲಿಲ್ಲ; ತೇರು-ಜಾತ್ರೆ-ಗಳಿಗೂ ಹೋಗುವವರ ಸಂಖ್ಯೆ ಕಡಿಮೆಯಾಯಿತು. ಅದಕ್ಕಾಗಿಯೂ ಬೇಸರವಿಲ್ಲ. ಆದರೆ ಅಜ್ಞಜನರ ಹೆದರಿಕೆ-ಯನ್ನು ಪ್ರಚೋದಿಸಿ ಅವರ ಸುಲಿಗೆ ಮಾಡಿದುದಕ್ಕೆ ದುಃಖ-ವಾಗುತ್ತದೆ. ಆಸ್ತಿಕ ಭೂತದ ಹಾವಳಿಯಿಂದ ಕಳ್ಳರ ಹಾವಳಿ ಹೆಚ್ಚಾದಂತೆ ಅಷ್ಟಗ್ರಹದ ಕಾಲದಲ್ಲಿಯೂ ನಡೆಯಿತು. "ದೆವ್ವದ ನೃತ್ಯ, ಮೋಸದ ಕೃತ್ಯ" ಎಂಬ ಶೀರ್ಷಿಕೆಯಿಂದ "ಪ್ರಜಾವಾಣಿ"ಯಲ್ಲಿ ಒಂದು ಸುದ್ದಿ ಪ್ರಕಟವಾಯಿತು. "ಅಷ್ಟಗ್ರಹ ಕೂಟದ ಮೊದಲ ದಿನವಾದ ಫೆಬ್ರುವರಿ (೧೯೬೨) ಮೂರರಂದು ರಾತ್ರಿ ಕೆಲವು ದುಷ್ಟದೇವತೆಗಳು ಗ್ರಾಮದಲ್ಲಿ ಪ್ರವೇಶಿಸಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನರ್ತಿಸುವವೆಂದೂ

ಆ ಸಮಯದಲ್ಲಿ ಯಾರಾದರೂ ಆ ದೇವತೆಗಳನ್ನು ನೋಡಿದರೆ ಅಂತಹರಿಗೆ ಕೇಡು ಸಂಭವಿಸುವುದೆಂದೂ ನಂಜನಗೂಡಿಗೆ ಸಮೀಪದಲ್ಲಿರುವ 'ಮರಿಯಾಲ' ಎಂಬ ಹಳ್ಳಿಯಲ್ಲಿ ವದಂತಿ ಹರಡಲಾಗಿತ್ತು. ವದಂತಿ ಕೇಳಿ ಹೆದರಿದ ಜನರು ಸಂಜೆಯಾಗುವುದರೊಳಗೆ ಮನೆಗಳನ್ನು ಸೇರಿ ಬಾಗಿಲುಗಳನ್ನು ಭದ್ರಪಡಿಸಿಕೊಂಡು ರಾತ್ರಿ ಹೊರಗೆ ತಲೆ ಹಾಕದೆ ಕಾಲ ಕಳೆದರು. ಜನರು ಬೆಳಗ್ಗೆ ಹೊರಗೆ ಬಂದು ನೋಡಿದಾಗ ಅನೇಕ ಮನೆಗಳ ಮುಂದೆ ಇದ್ದ ರಾಗಿ ಮತ್ತು ಜೋಳ ತುಂಬಿದ್ದ ಹಗೇವುಗಳು ಬರಿದಾಗಿದ್ದುದು ಕಂಡುಬಂದಿತು. ಇದೇ ರೀತಿ ಇನ್ನು ಕೆಲವು ಹಳ್ಳಿಗಳಲ್ಲಿ ಮೋಸದ ಕೃತ್ಯಗಳು ನಡೆದುದೆಂದು ವರದಿಯಾಗಿದೆ."

೨೫ ಭೀತಿಯ ಪರಿಣಾಮ

ಅನೇಕ ಮೂಢನಂಬಿಕೆಗಳು ಬಾಲ್ಯದಲ್ಲಿಯೇ ಮಕ್ಕಳ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಮಾಡಿರುತ್ತವೆ. ಮುಂದೆ ಅವನ್ನು ತೆಗೆದುಹಾಕುವುದು ಕಷ್ಟದ ಕೆಲಸ. ಅನೇಕ ತರದ ಮೂಢನಂಬಿಕೆಗಳ ಮೂಲಕ ಚಿಕ್ಕಮಕ್ಕಳು ತಮ್ಮ ಮನೋಬಲವನ್ನು ಗಳಿಸಿಕೊಳ್ಳುವುದೇ ಕಷ್ಟವಾಗುತ್ತದೆ. ಫಲವಾಗಿ ಜನರು ಹೇಡಿಗಳಾಗಲು ಅದು ಸಹಾಯಕವಾಗುತ್ತದೆ. ದೊಡ್ಡವರಾದ ಮೇಲೆ ಸಹ ಮೂಢನಂಬಿಕೆಗಳು ತಥ್ಯವಿಲ್ಲದವು ಎಂದು ಅನೇಕ ಘಟನೆಗಳಿಂದಲೂ ಬಗೆಗಳಿಂದಲೂ ತಿಳಿದರೂ ಪರಂಪರಾಗತವಾದ ನಂಬಿಕೆಯನ್ನು ಕೊಡವಿಹಾಕಿ ಸ್ವತಂತ್ರರೀತಿಯ ವಿಚಾರ ಮಾಡುವುದಕ್ಕೆ ತೊಡಕಾಗುತ್ತದೆ. ಯಾವ ತರದ ಹೆದರಿಕೆಯಾದರೂ ಮನಸ್ಸಿನ ಮೇಲೆ ಪುನಃ ಪುನಃ ಆಘಾತ ಮಾಡುವುದರಿಂದ ಮನಸ್ಸನ್ನು ದುರ್ಬಲಗೊಳಿಸಿ ನರದೌರ್ಬಲ್ಯಕ್ಕೆಡೆ ಕೊಟ್ಟು ಮನುಷ್ಯನನ್ನು ದೌರ್ಬಲ್ಯದ ಕಾಯಿಲೆಗಳಿಗೀಡು ಮಾಡುತ್ತದೆ. ಪ್ರಾಣಿಗಳಲ್ಲಿಯೂ ಹೆದರಿಕೆಯನ್ನು ಪುನಃ ಪುನಃ ಪ್ರಚೋದಿಸಿ ರಶಿಯನ್ ವಿಜ್ಞಾನಿ ಪಾವ್ಲೊವ್ ಪ್ರಾಣಿಗಳೂ ನರದೌರ್ಬಲ್ಯ-

ಕ್ಕೀಡಾಗುವವೆಂದು ಸಿದ್ಧಮಾಡಿದ್ದಾನೆ. ಭೂತ ಬಡಿದಿದೆ-ಯೆಂಬ ಹೆದರಿಕೆಯಿಂದ ಮರಣಪಟ್ಟವರುಂಟು. ಹಾಗೆಯೇ ತನಗೆ ಭೂತದ ಉಪದ್ರವ ಗಂಟು ಬಿದ್ದಿದೆಯೆಂದು ತಿಳಿದು ಅದನ್ನೇ ಮೆಲಕು ಹಾಕಿ ಭ್ರಮಿಷ್ಠರಾದವರಿದ್ದಾರೆ. ಮೂಢನಂಬಿಕೆಗಳ ಅಸಮರ್ಪಕ ಕಾರಣಗಳಿಂದುಂಟಾದ ಹೆದರಿಕೆಯು ಮನುಷ್ಯನ ಕಾಯಿಲೆಯನ್ನು ಸಂಕೀರ್ಣವಾಗಿ ಮಾಡುತ್ತದೆ. "ರೋಗ ಮತ್ತು ದುಃಖಗಳು ಬರುತ್ತವೆ; ಹೋಗುತ್ತವೆ. ಆದರೆ ಮೂಢನಂಬಿಕೆಯುಳ್ಳ ಮನುಷ್ಯನ ಆತ್ಮಕ್ಕೆ ಶಾಂತಿಯೇ ಇಲ್ಲ" ಎಂದು ಚಾರ್ಲ್ಸ್ ಲ್ಯಾಂಬ್ ಹೇಳಿದ್ದು ಸತ್ಯವಾದ ಮಾತು. "ವೀರನು ಒಂದೇ ಸಲ ಸಾಯುತ್ತಾನೆ, ಆದರೆ ಹೇಡಿಗಳು ಸಾವಿರಾರು ಸಲ ಸಾಯುತ್ತಾರೆ" ಎಂದು ಶೇಕ್ಸಪಿಯರನು ಹೇಳುತ್ತಾನೆ.

"ಮಧ್ಯರಾತ್ರಿಯಲ್ಲಿ ಗೂಗೆಗಳ ಅಪಸ್ವರವು ದರೋಡೆ-ಗಾರರ ಗುಂಪಿಗಿಂತ ಹೆಚ್ಚಿನ ಭಯವನ್ನು ಉಂಟುಮಾಡಿ-ದ್ದಿದೆ. ಕ್ರಿಕೆಟ್ ಹಕ್ಕಿಯ ಸ್ವರವು ಸಿಂಹಗರ್ಜನೆಗಿಂತ ಹೆಚ್ಚಿನ ಭೀತಿಯನ್ನು ಹುಟ್ಟಿಸಿದೆ.

ಈ ಮೂಢನಂಬಿಕೆಗಳು ನಿಜವಾಗಿ ನಾವು ಅನುಭವಿಸ-ಬೇಕೆಂದು ನಮ್ಮ ಪಾಲಿಗೆ ಹಂಚಿ ಹಾಕಿರದೆ ಇರುವ ದುಃಖಗಳಿಗೂ ಕಾಲ್ಪನಿಕವಾದ ಕೋಟಲೆಗಳಿಗೂ ನಮ್ಮನ್ನು ಈಡು ಮಾಡುತ್ತವೆ. ನಿಜವಾದ ಕಷ್ಟಗಳ ಮೂಲಕವಲ್ಲದೆ ಈ ಕ್ಷುಲ್ಲಕವಾದ ಘಟನೆಗಳ ಮೂಲಕವೂ ನಾವು ತೊಂದರೆ-ಯನ್ನು ಅನುಭವಿಸುತ್ತೇವೆ. ರಾತ್ರಿಯಲ್ಲಿ ಆಕಾಶದಲ್ಲಿ ಉಲ್ಕೆ

ಬಿದ್ದಿದ್ದನ್ನು ನೋಡಿ ನಾನು ರಾತ್ರಿಯಿಡೀ ನಿದ್ದೆಯನ್ನು ಕಳೆದು-ಕೊಂಡಿದ್ದಿದೆ" ಎಂದು ಇಂಗ್ಲಿಷ್ ಹರಟೆಗಾರ ಎಡಿಸನ್ ಹೇಳುತ್ತಾನೆ.

ನಮ್ಮ ಜನಸಾಮಾನ್ಯರಿಗೆ ರಾಜಕೀಯ ಸ್ವಾತಂತ್ರ್ಯ ದೊರೆತಿದ್ದರೂ ವಿಚಾರಶಕ್ತಿಯ ಸ್ವಾತಂತ್ರ್ಯ ಲಭಿಸಿಲ್ಲ. ಮೂಢನಂಬಿಕೆಗಳ ಹೆದರಿಕೆಯಿಂದ ಬಿಡುಗಡೆ ದೊರೆತಿಲ್ಲ. ತಮ್ಮ ಮೂಢನಂಬಿಕೆಗಳ ಬಲೆಯಲ್ಲಿ ತಾವೇ ಬಂಧಿತರಾದ ಜನರಿಗೆ ಕಾಲ್ಪನಿಕವಾದ ಸಮಾಚಾರಗಳೂ, ಸುಳ್ಳು ಭೂತ-ಗಳೂ ಪ್ರೇತಗಳೂ ಅಂಜಿಕೆ ಹಾಕುವುದರಲ್ಲಿ ಆಶ್ಚರ್ಯವೇನಿದೆ? ಹೊಟ್ಟೆ ತುಂಬ ಊಟಕ್ಕೆ ಅನುಕೂಲತೆ ಇಲ್ಲದಿದ್ದರೂ ತನಗೆ ಆಗದವರಿಗೆ ದೆವ್ವಗಳನ್ನು ಮಾಡಿಸಿ ಹಾಕಲು ಅಶಿಕ್ಷಿತ ಮನುಷ್ಯನು ಹಣ ವೆಚ್ಚ ಮಾಡುತ್ತಾನೆ. ಹಾಗೆಯೇ ಬೇರೆ-ಯವರು ತನ್ನ ಮೇಲೆ ದೆವ್ವವನ್ನು ಬಿಟ್ಟಿರುವರೆಂಬ ನಂಬಿಕೆ-ಯಿಂದ ಅದನ್ನು ಬಿಡಿಸುವದಕ್ಕೆ ತನ್ನ ದುಡಿತದ ಒಂದಂಶ-ವನ್ನು ನೋಟಗಾರರಿಗೆ, ಮಾಂತ್ರಿಕರಿಗೆ ಕೊಡುತ್ತಾನೆ. ರೋಗಚಿಕಿತ್ಸೆ ಮಾಡಿಸಲು ಬೇಕಾದ ಹಣ, ಒಳ್ಳೇ ಆಹಾರಕ್ಕೆ ಬೇಕಾದ ಪೋಷಕ ಆಹಾರ ಇಲ್ಲದಿದ್ದರೂ ದೆವ್ವದ ಭ್ರಮೆ ಇದ್ದೇ ಇರುತ್ತದೆ.

೨೬ ವಿಜ್ಞಾನದ ಹೋರಾಟ

ಮೂಢನಂಬಿಕೆಗಳು ಅಸತ್ಯವೆಂದು ಗೊತ್ತುಹಚ್ಚಿದ ವಿಚಾರವಾದಿಗಳಿಂದ ಹೊಸ ವಿಷಯ ಕಂಡುಹಿಡಿಯಬೇಕೆಂಬ ಕುತೂಹಲದಿಂದ ವಿಜ್ಞಾನದ ಆರಂಭವಾಗಿರಬೇಕು. ಹದಿನೇಳನೆಯ ಶತಮಾನದ ವಿಜ್ಞಾನದಲ್ಲಿಯೂ (ವಿಶೇಷವಾಗಿ ವೈದ್ಯಶಾಸ್ತ್ರದಲ್ಲಿ ಕೆಲವು ಮೂಢನಂಬಿಕೆಗಳನ್ನು ಕಾಣಬಹುದಾದರೂ ವಿಜ್ಞಾನವು ಮೂಢನಂಬಿಕೆಗಳೊಡನೆ ಹೋರಾಡುತ್ತಲೇ ಮುಂದುವರಿಯುತ್ತ ಬಂದಿದೆ. ಅಂಧಶ್ರದ್ಧೆಯ ಮತ್ತಮೂಢರೂ ಜನರು ತಮ್ಮ ನಿಯಂತ್ರಣದಿಂದ ತಪ್ಪಬಾರದೆಂಬ ಮತಪೀಠಗಳವರೂ ವಿಜ್ಞಾನವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಸತ್ಯಶೋಧಕರ ಬಲಿದಾನದೊಡನೆಯೇ ವಿಜ್ಞಾನದ ಸಾಕ್ಷಾತ್ಕಾರವಾಗುತ್ತ ಬಂದಿದೆ. ಪ್ರತಿಯೊಂದು ವಿಷಯವನ್ನು ಪರೀಕ್ಷಿಸಿ ನೋಡಬೇಕೆನ್ನುವ ಸಾಕ್ರೆಟೀಸನಿಗೆ ನಾಸ್ತಿಕನೆಂಬ ಹಾಗು ಯುವಕರನ್ನು ಕೆಡಿಸಿದನೆಂಬ ಅಪಾದನೆಯಿಂದ ಮರಣದಂಡನೆಯಾಯಿತು. ಬೈಬಲ್ಲಿನಲ್ಲಿ ಹೇಳಿಕೆಗೆ ವಿರುದ್ಧ ಸಿದ್ಧಾಂತ ಹೇಳಿದ ಕಾರಣಕ್ಕಾಗಿ ರಾಬರ್ಟ್ ಬ್ರುನೋ-

ನನ್ನು ಜೀವಂತ ಸುಟ್ಟರು. ಗೆಲಿಲಿಯೋನಿಗೆ ಶಿಕ್ಷೆಯಾಯಿತು. ಆದರೆ ಗೆಲಿಲಿಯೋ, ನ್ಯೂಟನ್ ಮೊದಲಾದವರ ಶೋಧನೆಗಳಿಂದ ಜನರ ವಿಚಾರದೃಷ್ಟಿಗೆ ಹೆಚ್ಚಿನ ಉತ್ತೇಜನ ದೊರೆಯಿತು. ನ್ಯೂಟನ್ನನ ಗಣಿತಶಾಸ್ತ್ರದ ಸಿದ್ಧಾಂತಗಳು, ಗುರುತ್ವಾಕರ್ಷಣದ ನಿಯಮಗಳು ವಿಜ್ಞಾನದೃಷ್ಟಿಗೆ ತುಂಬಾ ಬಲವನ್ನು ತಂದುಕೊಟ್ಟು ಹೊಸ ವಿಚಾರದೃಷ್ಟಿಗೆ ಬಹಳ ಉತ್ತೇಜನ ಕೊಟ್ಟವು. ಧೂಮಕೇತುಗಳು ಗುರುತ್ವಾಕರ್ಷಣ ನಿಯಮವನ್ನು ಪಾಲಿಸುತ್ತವೆಂಬುದೂ ಕೆಲವು ಧೂಮಕೇತುಗಳಿಗಾದರೂ ಲೆಕ್ಕಾಚಾರ ಮಾಡಿ ಹೇಳಬಹುದಾದ ಚಲನ-ರೇಖೆಗಳಿರುವವೆಂಬುದೂ ತಿಳಿದ ಮೇಲೆ ಸಾಮಾನ್ಯವಾಗಿ ವಿದ್ಯಾವಂತರು ಅವು ಭವಿಷ್ಯದ ಅನಿಷ್ಟ ಸೂಚಕಗಳು ಎಂದು ತಿಳಿಯುವದನ್ನು ಬಿಟ್ಟರು. ಅಟ್ಲಾಸ್ ರಾಕ್ಷಸನಾಗಲಿ, ಮಹಾಶೇಷನಾಗಲಿ ಭೂಮಿಯನ್ನು ಹೊತ್ತಿಲ್ಲವೆಂದೂ ಭೂಮಿ ದುಂಡಗಾಗಿದೆಯೆಂದೂ ವಿಜ್ಞಾನ ಸಿದ್ಧಮಾಡಿ ತೋರಿಸಿದೆ. ವಿಜ್ಞಾನದ ಮೂಲಕ ಗ್ರಹಣ, ಧೂಮಕೇತುಗಳ ಕಾರಣ ಶಾಲಾ ಬಾಲಕರಿಗೂ ಗೊತ್ತಾಗಿದ್ದರೂ ನಮ್ಮ ಜನರ ಮೂಢ ನಂಬಿಕೆ ಇನ್ನೂ ಪೂರ್ಣ ಹೋಗಿಲ್ಲ. ಆದರೆ ಬರುವ ಹೊಸ ಪೀಳಿಗೆಯವರು ಅನೇಕ ಮೂಢನಂಬಿಕೆಗಳನ್ನು ಕಳೆದು ಕೊಂಡಿರುತ್ತಾರೆ. ಅಶಿಕ್ಷಿತರು ಶಿಕ್ಷಣಹೊಂದುತ್ತ ಬಂದಂತೆ ವಿಜ್ಞಾನದ ಪ್ರಸಾರ ಹೆಚ್ಚಾಗಿ ಬಹಳಷ್ಟು ಮೂಢನಂಬಿಕೆಗಳು ಕಡಿಮೆಯಾಗುವ ಆಶೆಯುಂಟು. "ದೀರ್ಘಪ್ರಯಾಣ" (Long march) ಎಂಬ ಒಂದು ಚೀನೀ ನಾಟಕದಲ್ಲಿ ಕಮ್ಯುನಿಸ್ಟ ಚೀನೀ ಸೈನಿಕರು ಸ್ಟೆಪ್ಪೆ (Steppe) ಭೂಮಿಯಲ್ಲಿ

ತಂಗಿದಾಗ ಶಾನಾ ಉರ್ಸ ಎಂಬ ದಾದಿ, 'ದೆವ್ವಗಳು ಮನುಷ್ಯರನ್ನು ಕೊಲ್ಲುತ್ತವೆ' ಎಂದಾಗ, 'ದೆವ್ವಗಳು ಮನುಷ್ಯರನ್ನು ಕೊಲ್ಲುವುದಿಲ್ಲ,' ಎತ್ತರವಾದ ತಪ್ಪಲಿನ ವಿರಲವಾದ ಹವೆಯ ಮೂಲಕ ಉಸಿರುಕಟ್ಟಿ ಸಾಯುವರು ಎಂದು ಚೌ ಎಂಬ ಚೀನೀ ಸೈನಿಕನು ಉದ್ಗರಿಸುತ್ತಾನೆ. ನೈಸರ್ಗಿಕ ಘಟನೆಗಳ ಸಮಂಜಸ ಕಾರಣಗಳನ್ನು ತಿಳಿದುಕೊಳ್ಳಲೆಳಸುವ ಕುತೂಹಲ ಬುದ್ಧಿ, ವಿವೇಚನಾ ಮನೋವೃತ್ತಿ ಬೆಳೆಯಲು ಹೆಚ್ಚು ತಿಳಿದವರು ಅಜ್ಞಾನಿಗಳಿಗೆ ಹೀಗೆ ತಿಳಿವಳಿಕೆ ಕೊಡುವುದು ಮೂಢ ನಂಬಿಕೆಯನ್ನು ಕಳೆಯಲು ಸಹಾಯವಾಗುತ್ತದೆ. ಆದರೆ ಸದ್ಯದ ವಿಜ್ಞಾನವೂ ವಿವರಣೆ ಕೊಡಲಾಗದಿರುವ ಅನೇಕ ವಿಷಯಗಳೂ ಇವೆಯೆಂಬುದನ್ನೂ ನಾವು ಮರೆಯಬಾರದು. ವಶ್ಯನಿದ್ರೆ (ಹಿಪ್ನಾಟಿಸಂ) ಯಲ್ಲಿ ಒಬ್ಬನ ಮನಸ್ಸನ್ನು ಇನ್ನೊಬ್ಬನು ನಿಯಂತ್ರಣದಲ್ಲಿಟ್ಟುಕೊಂಡು ಸೂಚನೆ (suggestion) ಯಿಂದ ತಾನು ಹೇಳಿದ್ದನ್ನು ನಂಬುವಂತೆ, ಮಾಡುವಂತೆ ಪ್ರೇರೇಪಿಸಬಲ್ಲನು. ಆತನ ರೋಗಗಳನ್ನು ಕಡಿಮೆ ಮಾಡಬಲ್ಲನು. ಭವಿಷ್ಯಸೂಚಕ ಸ್ವಪ್ನಗಳ ಸಂಬಂಧದಲ್ಲಿಯೂ ವಿಜ್ಞಾನದಿಂದ ಸಮರ್ಪಕ ಉತ್ತರ ಹೇಳುವದಾಗಿಲ್ಲ. ದೂರದಲ್ಲಿ ನಡೆಯುವ ಘಟನೆಗಳು ಕೆಲವರ ಮನಸ್ಸುಗಳಿಗೆ ಆಗಲೇ ತಿಳಿದುಹೋಗುವವು. ಕೆಲವರ ಮನಸ್ಸುಗಳು ಕಾಲದೇಶಗಳ ಮೇರೆಯನ್ನು ಮೀರಿ ಇತರರ ಮನಸ್ಸುಗಳೊಡನೆ ಸೇರಬಲ್ಲವೆಂದು ಅಲ್ಡುಸ್ ಹಕ್ಸ್‌ಲಿಯವರು ಅಭಿಪ್ರಾಯಪಡುತ್ತಾರೆ. ಕೆಲವು ವರ್ಷಗಳ ಹಿಂದೆ ಇಂಗ್ಲಂಡದ ಕೆಲವು ವಿಜ್ಞಾನಿಗಳು ರಶಿಯದ ವಿಜ್ಞಾನಿಗಳ ಆಮಂತ್ರಣದ ಮೇರೆಗೆ

ದೂರದೂರದಲ್ಲಿದ್ದ ವ್ಯಕ್ತಿಗಳೊಡನೆ ಯಾವುದೇ ಉಪಕರಣಗಳ ಸಹಾಯವಿಲ್ಲದೆ ವಿಚಾರಪ್ರಸಾರ ಸಾಧ್ಯವೆಂಬ ವಿಚಾರದ ಕುರಿತು ಪ್ರಯೋಗಗಳಲ್ಲಿ ಭಾಗವಹಿಸಲು ರಶಿಯಕ್ಕೆ ಹೋಗಿದ್ದರು. ರಶಿಯದ ವಿಜ್ಞಾನಿಗಳು ಈ ಕುರಿತು ತುಂಬ ಉತ್ಸಾಹವನ್ನು ತೋರಿಸುತ್ತಿರುವರೆಂದು ವರದಿಯಾಗಿದೆ. ವಶ್ಯನಿದ್ರೆ ವೈಜ್ಞಾನಿಕವೆಂದು ವಿಜ್ಞಾನಿಗಳು ಒಪ್ಪಿ ಅದನ್ನು ಚಿಕಿತ್ಸೆಯಲ್ಲಿ ಯಶಸ್ವಿಯಾಗಿ ಬಳಸಲಾಗುತ್ತಿದೆ. ಆದರೆ ವಶ್ಯನಿದ್ರೆಯ ಸತ್ಯತೆಯನ್ನು ವಿಜ್ಞಾನಿಗಳು ಮೊದಲು ಒಪ್ಪಿರಲಿಲ್ಲ. ಫ್ರಾನ್ಸಿನ ಪಿರನೀಸ್ ಪರ್ವತಾವಳಿಗಳಲ್ಲಿನ ಒಂದು ಮಿಶನರಿ ಆಸ್ಪತ್ರೆಯಲ್ಲಿ ದೊಡ್ಡದೊಡ್ಡ ರೋಗಗಳನ್ನು ಪ್ರಾರ್ಥನೆಯಿಂದ ಗುಣ ಮಾಡುತ್ತಾರಂತೆ. ಪ್ರಖ್ಯಾತ ವಿಜ್ಞಾನಿ ಅಲೆಕ್ಸಿಸ್ ಕೆರೆಲ್‌ರು ವಿಜ್ಞಾನಿಗಳು ಇಂಥ ವಿಷಯ-ಗಳನ್ನು ತಿರಸ್ಕರಿಸಬಾರದೆಂದೂ ಈ ದಿಶೆಯಲ್ಲಿ ಮನಸ್ಸು ಹಾಕಬೇಕೆಂದೂ ವಿಜ್ಞಾನಿಗಳಿಗೆ ಸಲಹೆಯಿತ್ತಿದ್ದಾರೆ. ಮನುಷ್ಯರ ಕಿವಿಗೆ ಕೇಳಿಸದ (ಅಲ್ಟ್ರಾಸೊನಿಕ್) ಸ್ವರದ ಶಕ್ತಿಯಿಂದ ಅನೇಕ ಕೆಲಸಗಳನ್ನು ನಡೆಸಲು ವಿಜ್ಞಾನಿಗಳು ಯಂತ್ರಗಳನ್ನು ನಿರ್ಮಿಸಿದ್ದಾರೆ. ಶಬ್ದಗಳ ಶಕ್ತಿಯ ನಂಬಿಕೆ-ಯಿಂದ ಭಾರತೀಯ ಮಂತ್ರಶಾಸ್ತ್ರ ನಿರ್ಮಿತವಾಗಿದೆ. ಅದರಲ್ಲಿ ತಥ್ಯವೆಷ್ಟಿದೆಯೆಂದು ಪರಿಶೋಧಿಸಬೇಕು. ಸಂಗೀತದಿಂದ, ವಾದನಗಳನ್ನು ಬಾರಿಸುವುದರಿಂದ ಬೆಳೆಯನ್ನು ಹೆಚ್ಚು ಮಾಡಲು ಬರುವದೆಂದು ಟಿ ಚೌಡಯ್ಯನವರು ಹೇಳಿದುದನ್ನು ಇತ್ತೀಚೆ ಮದರಾಸಿನಲ್ಲಿ ಮಾಡಿದ ಪ್ರಯೋಗಗಳು ಸಮರ್ಥಿ-ಸುವವೆಂದು ವರದಿಯಾಗಿದೆ. ಕಾರಖಾನೆಗಳಲ್ಲಿ ಸಂಗೀತ-

ವನ್ನು ಕೇಳಿಸುವುದರಿಂದ ಕೆಲಸಗಾರರ ಕಾರ್ಯಕ್ಷಮತೆ ಹೆಚ್ಚುವುದೆಂದು ವರದಿಯಾಗಿದೆ. ಪಾರಜದಿಂದ, ಕಬ್ಬಿಣ-ದಿಂದ, ಬಂಗಾರ ಮಾಡುವ ಪ್ರಯತ್ನದಲ್ಲಿ ಅರಬರು ಜಯಶೀಲ-ರಾಗಲಿಲ್ಲ. ಆದರೆ ಇಂದಿನ ವಿಜ್ಞಾನಿಗಳು ಪಾರಜವನ್ನು ಬಂಗಾರವಾಗಿ ಪರಿವರ್ತಿಸಿ ತೋರಿಸಿದ್ದಾರೆ. ಆದರೆ ಬಂಗಾ-ರದ ಬೆಲೆಗಿಂತ ಒಂದು ಸಾವಿರ ಪಟ್ಟು ಹೆಚ್ಚು ವೆಚ್ಚ ಈ ಬಂಗಾರ ತಯಾರಿಕೆಯಲ್ಲಿ ಬರುವದಂತೆ. ಆದರೆ ಸಿದ್ಧವಾದ ಬಂಗಾರ ಅಮೇರಿಕನ್ ಚಿನ್ನವಲ್ಲ. ಅಪ್ಪಟ ಬಂಗಾರವಾಗಿರು ತ್ತದೆ. ಹಿಂದೆ ಯಾವುದೇ ಮೂಲಧಾತು (Element) ವನ್ನು ಬೇರೆ ಧಾತುವನ್ನಾಗಿ ಪರಿವರ್ತಿಸಲಾಗುವದಿಲ್ಲ ಎಂದು ನಂಬಿದ ಸಿದ್ಧಾಂತವನ್ನು ವಿಜ್ಞಾನಿಗಳು ಈಗ ಪ್ರಯೋಗದಿಂದ ಬದಲು ಮಾಡಿದ್ದಾರೆ. ಹಿಂದೆ ಅಸಾಧ್ಯವೆನಿಸಿದ ಎಷ್ಟೋ ಸಂಗತಿ-ಗಳನ್ನು ವಿಜ್ಞಾನವು ಸಾಧ್ಯವಾಗಿ ಮಾಡಿದೆ. ಆದ್ದರಿಂದ ಈಗ ವಿವರಣೆ ಕೊಡಲಾಗದ ಅನೇಕ ವಿಷಯಗಳಿಗೆ ವಿಜ್ಞಾನವು ಮುಂದೆ ಸಮಂಜಸ ವಿವರಣೆ ಕೊಡಲು ಶಕ್ಯವಾಗಬಹುದು.

೨೭ ಧರ್ಮ ಹಾಗೂ ಮೂಢನಂಬಿಕೆ

ಬಹು ಮಹತ್ವವಾದ ಮಾನಸಿಕ ಪ್ರತಿಕ್ರಿಯೆಯ ರೂಪ-ದಿಂದ ಮೂಢನಂಬಿಕೆ ಮೊದಲು ಕಾಣಿಸಿಕೊಳ್ಳುತ್ತದೆ. ಹುಲ್ಲುಗಾವಲಿನಲ್ಲಿಯ ಬೆಂಕಿಯಂತೆ ಬೇಗನೆ ಮೇಲ್ಭಾಗದಲ್ಲಿ ಹಬ್ಬಿಕೊಳ್ಳುತ್ತದೆ. ಆದರೆ ಹಬ್ಬಿದಂತೆ ವಿಕಾರಹೊಂದುತ್ತದೆ. ಮನುಷ್ಯನ ವಿಕಾಸ ಕಡಿಮೆ ಪ್ರಮಾಣದಲ್ಲಿದ್ದರೆ ಅದು ರಾಕ್ಷಸಾಕಾರವನ್ನು ತಳೆಯುತ್ತದೆ. ಪ್ರಾಗೈತಿಹಾಸಿಕ ಯುಗದ ಬಹುಸಂಖ್ಯಾಕರಲ್ಲಿ ಮನಸ್ಸಿನ ರೂಪರೇಷೆ ಅಪರಿಪಕ್ವವಾದು-ದಾಗಿರಬೇಕು. ಆದರೂ ಗುಂಪಿನಿಂದ ಬೇರೆಯಾದ ವ್ಯಕ್ತಿತ್ವ ಬೆಳೆಸಿಕೊಂಡ (mutant) ಕೆಲವು ವ್ಯಕ್ತಿಗಳು ಇವರಿಂದ ವಿರುದ್ಧವಾದ ದಿಶೆಯಲ್ಲಿ ವಿಕಾಸಹೊಂದಿ ಶುದ್ಧ ಧಾರ್ಮಿಕ ವಿಚಾರಗಳನ್ನು ಬೆಳೆಸಿಕೊಂಡರು. ಮುಂದುವರಿದ ಗುಂಪು ಬಹುಸಂಖ್ಯಾಕರ ಮೂಢನಂಬಿಕೆಗಳಿಂದ ಗಂಡಾಂತರ-ಕ್ಕೀಡಾಯಿತು.

ಶತ-ಶತಮಾನಗಳಿಂದ ಧರ್ಮಗಳು ಮೂಢನಂಬಿಕೆ-ಗಳೊಡನೆ ಹೋರಾಡುತ್ತಲೇ ಇರಬೇಕಾಗಿತ್ತು. "ಮೂಢ-ನಂಬಿಕೆಯನ್ನು ಮಾನವ ಮನಸ್ಸಿನಿಂದ ಬೇರೆ ಮಾಡಲು

ಅಸಾಧ್ಯವಾಗಿ ಕಂಡುದುದರಿಂದ ಆ ಹೋರಾಟ ಇನ್ನಿಷ್ಟು ಗಂಡಾಂತರದಾಯಿತು. ಈ ಕಾಲದಲ್ಲಿ ಸಹ ಎಲ್ಲ ತರದ ಮೂಢನಂಬಿಕೆಗಳು ಸತ್ಯ ಅಥವಾ ತರ್ಕಬದ್ಧ ತತ್ವಗಳಿಗಿಂತ ಬೇಗನೆ ಸುಲಭವಾಗಿ ಹಬ್ಬುತ್ತವೆ. ಕಾರಣವೇನೆಂದರೆ ವಿಕಾಸ ಹೊಂದದ ಮನಸ್ಸುಗಳು ಬಹುಸಂಖ್ಯಾಕವಾಗಿರುವವು. ತರ್ಕ-ಬದ್ಧವಾದ ವಿಚಾರ ವಿಸ್ತಾರವಾಗಿ ಬೆಳೆದಿದೆಯೆಂಬ ತೋರಿಕೆಯು ಸತ್ಯ (illusion) ಕಂಡು ಬರುವುದರ ಕಾರಣ ಅದು ಅನೇಕ ಸಲ ಮೂಢನಂಬಿಕೆಯಾಗಿ ಪರಿವರ್ತನ ಹೊಂದಿರುವುದೇ ಆಗಿದೆ. ಜನಸಾಮಾನ್ಯರಲ್ಲಿರುವ ವಿಜ್ಞಾನದ ಪ್ರತಿಷ್ಠೆ ಸಹ ಮೂಢನಂಬಿಕೆಯ ಪ್ರಕಾರವೇ ಆಗಿದೆ ಎಂಬಲ್ಲಿ ಸಂಶಯವಿಲ್ಲ. ಧರ್ಮಗಳು, ಬುದ್ಧಿವಾದಿಗಳು ಹಾಗು ಜನಸಾಮಾನ್ಯರು ಇವರೆಲ್ಲರ ಮೇಲೂ ಅಧಿಕಾರ ನಡೆಸಲು ಯತ್ನಿಸಿದವು. ಆದರೆ ಅವುಗಳ ಮುಖ್ಯ ಪ್ರಯತ್ನ ಹೆಚ್ಚೆಚ್ಚು ಸಂಖ್ಯೆಯ ಅನು-ಯಾಯಿಗಳನ್ನು ಪಡೆಯುವುದೇ ಆಗಿತ್ತು. ಹೀಗಾಗಿ ಅವು ಮೂಢನಂಬಿಕೆ ಬಲವಾಗಿ ಬೇರೂರಿ ನಿಂರುತಿವ ಜನರೊಡನೆ ಸಂಬಂಧ ಬೆಳೆಸಬೇಕಾಯಿತು. ಚರ್ಚುಗಳು ಆ ವೈರಿ (ಮೂಢನಂಬಿಕೆ) ಗಳನ್ನು ಪ್ರತ್ಯಕ್ಷ ಅನುಮೋದಿಸದಿದ್ದರೂ ಅನೇಕ ಬಗೆಯ ಸೌಮ್ಯಸ್ವರೂಪದ ಮೂಢನಂಬಿಕೆಗಳನ್ನು ಸಹಿಸುವ ಅಗತ್ಯ ಉಂಟಾಯಿತು. ಹಾಗು ಅವುಗಳನ್ನು ಸ್ವೀಕರಿಸಿ ಅವುಗಳಿಗೆ ಹೊಸ ರೂಪು ಕೊಟ್ಟು ಸಮಾಜದ ಪುರಾತನ ಸಂಪ್ರದಾಯಗಳನ್ನು ಕಡಿಮೆ ಗಂಡಾಂತರದ ಹಾದಿ-ಯಲ್ಲಿ ತೆಗೆದುಕೊಂಡು ಹೋಗಬೇಕಾಯಿತು. ಕಾಲ್ಪನಿಕ ಶಕ್ತಿಗೆ ವಿಶೇಷ ಆಸ್ಪದವಿರುವ ಭೂಮಧ್ಯಸಮುದ್ರದ ತೀರಗಳಲ್ಲಿ

ಜನ್ಮತಳೆದ ಕೆಥೊಲಿಕ್ ಧರ್ಮವು ಅನೇಕ ಪುರಾತನ ಆಚಾರಗಳನ್ನು ವಿಧಿಯಿಲ್ಲದೆ ಒಪ್ಪಬೇಕಾಗಿ ಬಂತು" ಎಂದು ಲಿಕಾಂಟ ಡು ನಾಯ್ ಎಂಬ ಸುಪ್ರಸಿದ್ಧ ಫ್ರೆಂಚ್ ಜೀವವಿಜ್ಞಾನಿಗಳು "ಮಾನವನ ಭವಿತವ್ಯ" (Human Destiny) ಎಂಬ ತಮ್ಮ ಗ್ರಂಥದಲ್ಲಿ ಅಭಿಪ್ರಾಯಪಡುತ್ತಾರೆ.

ಯುರೋಪಿಯನ್ನರಲ್ಲಿಯೂ ಜನಸಾಮಾನ್ಯರಲ್ಲಿ ಅಸಂಖ್ಯ ಮೂಢನಂಬಿಕೆಗಳು ಇಂದಿಗೂ ರೂಢವಾಗಿವೆ. ಕ್ರಿಶ್ಚನ್ ಧರ್ಮ ಸ್ಥಾಪನೆಯಾಗುವ ಪೂರ್ವದ ಪೇಗನ್ ಧರ್ಮದ ಅನೇಕ ನಂಬಿಕೆ, ಆಚರಣೆಗಳು ಜನರಲ್ಲಿರುವ ಅವುಗಳ ನಂಬುಗೆಯ ಮೂಲಕ ಕ್ರಿಶ್ಚನ್ ಧರ್ಮದ ಆಚರಣೆಗಳಲ್ಲಿ ಸೇರಿಹೋಗಿವೆ. ವಸಂತಕಾಲದಲ್ಲಿ ಚಳಿಗಾಲವನ್ನು ಹುಲ್ಲಿನ ಮನುಷ್ಯನ ಆಕಾರದಲ್ಲಿ ಮಾಡಿ ಮೆರವಣಿಗೆ ತೆಗೆದು ದೊಡ್ಡ ಬೆಂಕಿಮಾಡಿ ಸುಡುವ ಸಂಪ್ರದಾಯವಿದೆ. ಮರಗಳನ್ನು ಮುಟ್ಟಿ ಭವಿಷ್ಯದ ಅನಿಷ್ಟ ತಪ್ಪಿಸುವುದು ವಿಶಿಷ್ಟ ಮರಗಳು ದೇವತೆಗಳಿಗೆ ಪ್ರಿಯವಾಗಿದ್ದುವೆಂಬ ಕಾರಣದಿಂದ. ವೇಲ್ಸದಲ್ಲಿ ಸಿಡಿಲುಬಿದ್ದು ಸುಟ್ಟ ಓಕ್‌ಮರ ಆಕಾಶ ದೇವತೆಗೆ ಪ್ರಿಯವಾದದ್ದರಿಂದ ಅದನ್ನು ಮುಟ್ಟಿದರೆ ಕಷ್ಟ ತಪ್ಪುವುದೆಂಬ ನಂಬಿಕೆಯಿದೆ. ಮೇ ತಿಂಗಳಲ್ಲಿನ ಸ್ತಂಭದ ಪೂಜೆ ಇತ್ಯಾದಿಗಳು ಪ್ರಾಚೀನ ವೃಕ್ಷ ಪೂಜೆಯ ಕುರುಹುಗಳೆಂದು ಫ್ರೇಸರರ ಹೇಳಿಕೆ. "ಮೇವೃಕ್ಷ"ಕ್ಕೆ ದನಗಳು ಹೆಚ್ಚು ಹಾಲು ಕರೆವಂತೆ ಮಾಡುವ ಶಕ್ತಿಯಿದೆಯೆಂದು ಜರ್ಮನಿಯಲ್ಲಿ ನಂಬಿಕೆಯಿದೆ. ಹಂಗರಿಯ

ಚರ್ಚುಗಳ ಸಂಪ್ರದಾಯದ 'ಎಪಿಫನಿ' ಹಬ್ಬಗಳಲ್ಲಿ ಪುರೋಹಿತನನ್ನು ನೀರಿನಲ್ಲಿ ಒಗೆಯುವುದು ಮಳೆಯ ದೇವತೆಗೆ ಪ್ರಸನ್ನತೆ ಉಂಟುಮಾಡುವ ವಿಧಾನವಂತೆ. ಸ್ವಸ್ತಿಕ ಚಿಹ್ನೆ ಆನೆಯ ಕೂದಲಿನ ಉಂಗುರ, ಕೆಲ ತರದ ಪ್ರಾಣಿಗಳು ಭಾಗ್ಯ ತರುವ ಶಕ್ತಿಯುಳ್ಳವೆಂದು ಯುರೋಪಿಯನ್ನರು ನಂಬುತ್ತಾರೆ. ಈಸ್ಟರ ಹಬ್ಬದಲ್ಲಿ ಬಣ್ಣದ ತತ್ತಿಗಳನ್ನು ಗುಪ್ತವಾಗಿ ಹುಗಿಯುವುದು, ಮೊಲದ ಪ್ರತಿಮೆ ಸ್ಥಾಪಿಸುವುದು ಇಂದಿಗೂ ಆಚರಣೆಯಲ್ಲಿದೆ.

೨೮ ಉಪಸಂಹಾರ

ಮೂಢನಂಬಿಕೆಗಳು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಹೆಚ್ಚು ಕಡಿಮೆಯಾಗಿ ಕಂಡುಬರುತ್ತವೆ. ಆಫ್ರಿಕದ ದೇಶಗಳ ರಾಜಕಾರಣದಲ್ಲಿ ಮೂಢನಂಬಿಕೆಗಳ ಪ್ರಭಾವ ಈಗಲೂ ಬಹಳವಿದೆ. ಘಾನಾದ ತೀರಪ್ರದೇಶಗಳಲ್ಲಿ ತಿಮಿಂಗಲ (ವ್ಹೇಲ್ ಮೀನ) ಅರ್ಧಮರ್ಧ ದೇವತೆಯೆಂಬ ನಂಬುಗೆಯಿದೆ. ತಿಮಿಂಗಿಲವು ಮೀನುಗಾರರ ಡೋಣಿಗೆ ಸಹಾಯಕ ಎಂದು ನಂಬುತ್ತಾರೆ. ಒಂದು ಸತ್ತ ತಿಮಿಂಗಲದ ಸಮಾಧಿ ಮಾಡಲು ಸ್ವತಃ ಅಧ್ಯಕ್ಷ ಎನ್‌ಕ್ರೂಮಾ ತಮ್ಮ ಮಂತ್ರಿಗಳೊಡನೆ ಬರಬೇಕಾಯಿತು. ತಮ್ಮನ್ನು ಮುಕ್ತಗೊಳಿಸಲು ಆಕಾಶದಿಂದ ದೇವತೆಯ ಅವತಾರವಾಗುವುದೆಂದು ಪರಂಪರೆಯಿಂದ ನಂಬಿದ ನ್ಯಾಸಾಲಂಡಿನ ಜನರಿಗೆ ಅಲ್ಲಿಯ ಸ್ವಾತಂತ್ರ್ಯ ಚಳವಳಿಯ ಧುರೀಣ ಡಾ. ಹೆಸ್ಟಿಂಗ್ಸ್ ಬಂಡಾ ತಾನೇ ಆ “ಶ್ರೇಷ್ಠ ಕಾಮುಝೂ” ಎಂದು ಆಶ್ವಾಸನ ಕೊಟ್ಟನು. ನಮ್ಮ ದೇಶದಲ್ಲಿ ಭಾಷಾ ಪ್ರಾಂತೀಕರಣದ ಕಾಲದಲ್ಲಿ ಚತುರ್ದಶಿ ಪ್ರಶಸ್ತವಲ್ಲವೆಂದು ಮುನ್ನಾದಿನ ಅಕ್ಟೋಬರ

ತ್ರಿಗ ರಂಜೀ ಆ ಕುರಿತಾಗಿ ಧಾರ್ಮಿಕ ವಿಧಿ ನೆರವೇರಿಸಿದರು. ಸರಕಾರೀ ಮಟ್ಟದಲ್ಲಿಯೂ ಅಷ್ಟಗ್ರಹಯಜ್ಞಗಳು ಅದ್ದೂರಿಯಾಗಿ ನಡೆದವು. ಕ್ರೀಡಾಕ್ಷೇತ್ರದಲ್ಲಿಯೂ ಹೆಸರಾದ ಕ್ರೀಡಾಪಟುಗಳು ಮೂಢನಂಬಿಕೆ ಹೊಂದಿದವರಿದ್ದಾರೆ. ಕ್ರೀಡಾಪಟುಗಳು ಆಟದ ಮೊದಲು ನೆಲಕ್ಕೆ ಬಗ್ಗಿ ನಮಸ್ಕರಿಸಿ ಕೈಯನ್ನು ಕಣ್ಣಿಗೆ ಒತ್ತಿಕೊಳ್ಳುವುದುಂಟು. ಜಟ್ಟಿಗಳು ಅಖಾಡಕ್ಕೆ ಇಳಿವ ಮೊದಲು ಉಸ್ತಾದರಿಗೆ ವಂದಿಸುವರು. "ಕ್ರಿಕೆಟ್ ಪಟುಗಳು ಬಹಳ ಮೂಢನಂಬಿಕೆ ಉಳ್ಳವರು. ಮ್ಯಾಚ್ ಇರುವ ದಿನದ ಊಟದ ತಯಾರಿಯಲ್ಲಿ ಬಾತುಕೋಳಿಯನ್ನು ಅಡಿಗೆಯಲ್ಲಿ ಉಪಯೋಗಿಸತಕ್ಕದ್ದಲ್ಲ, ಕ್ರೀಡಾಪಟುವು ಎರಡೂ ಇನ್ನಿಂಗ್ಜ್‌ಗಳಲ್ಲಿ ಓಟಗಳಿಸಲು ಉತ್ಸುಕಿಯಾಗಿದ್ದರೆ ಊಟದ ನಂತರ ಫಲಾಹಾರದಲ್ಲಿ ಪಿಯರ್ ಹಣ್ಣುಗಳನ್ನಿಟ್ಟರೆ ತೀರ ಬೇಸರಪಡುವನು" ಎಂದು ಟ್ರೆವರ್ ಬೇಲಿ ಹೇಳಿದ್ದನ್ನು ಶ್ರೀ. ಕೆ. ಎ. ಗೋಪಾಲರತ್ನಂ "ಆಟಗಳಲ್ಲಿ ಮೂಢನಂಬಿಕೆ" ಎಂಬ ತಮ್ಮ ಲೇಖನದಲ್ಲಿ ಎತ್ತಿ ಹೇಳಿದ್ದಾರೆ. "ಮೂಢನಂಬಿಕೆಯಲ್ಲಿನ ನಂಬುಗೆಯು ಗೊರಕೆ ಹೊಡೆಯುವ ಹಾಗೆ- ಎಚ್ಚತ್ತಾಗ ನಾವೆಲ್ಲರೂ ನಾವು ನಿದ್ರೆಯಲ್ಲಿ ಗೊರಕೆಹೊಡೆಯುವುದನ್ನು ಬಲವಾಗಿ ಅಲ್ಲಗಳೆಯುತ್ತೇವೆ. ಆದರೆ ನಾವು ನಿದ್ದೆ ಮಾಡುವಾಗ ಬೇಂಡ್ ವಾದ್ಯವು ಬಹಳ ದೊಡ್ಡದಾಗಿ ಬಡಿಸುಕೊಳ್ಳುವುದು" ಎಂದು ಗೋಪಾಲರತ್ನಂರು ಪ್ರತಿಯೊಬ್ಬರಲ್ಲಿಯೂ ಇರುವ ಮೂಢನಂಬಿಕೆಯ ವಿಷಯವನ್ನು ಸ್ವಾರಸ್ಯವಾಗಿ ಹೇಳಿದ್ದಾರೆ (Sports & Pastime).

ಮೂಢನಂಬಿಕೆಗಳ ಅಸತ್ಯವನ್ನು ಜನರಿಗೆ ಮನಗಾಣಿಸಿ ಕೊಡಲು "೧೩ ರ ಕ್ಲಬ್ಬು"ಗಳು ಸ್ಥಾಪಿತವಾಗಿವೆ. ೧೩ ಜನರ ಸಂಖ್ಯೆಯಲ್ಲಿ ಸಭೆ ಸೇರುವುದು, ಏಣಿಯ ಕೆಳಗೆ ತಿರುಗಾಡುವುದು, ಒಂದೇ ಬೆಂಕಿಕಡ್ಡಿಯಿಂದ ಮೂವರು ಸಿಗರೇಟು ಹೊತ್ತಿಸಿಕೊಳ್ಳುವುದು, ಉಪ್ಪನ್ನು ಬೇಕೆಂತಲೇ ಚಲ್ಲಿಕೊಳ್ಳುವುದು ಮೊದಲಾದ ಮೂಢನಂಬಿಕೆಯ ದೃಷ್ಟಿಯಲ್ಲಿ ಅನಿಷ್ಟ ಫಲ ತಂದುಕೊಡುವಂಥವೆಂದು ತಿಳಿಯಲಾದ ಆಚರಣೆಗಳನ್ನು ಮಾಡಿ ಆ ನಂಬಿಕೆಗಳ ಅಸಾರತೆಯನ್ನು ತೋರಿಸುವುದೇ ಅದರ ಗುರಿಯಾಗಿದೆ. ಒತ್ತಾಯಮಾಡಿ ಮೂಢನಂಬಿಕೆಗಳನ್ನು ದೂರಮಾಡುವೆನೆನ್ನುವುದು ಸಾಧ್ಯವಿಲ್ಲದ ಸಂಗತಿ. ಯುಕ್ತಿವಾದದಿಂದಲೂ ದೃಷ್ಟಾಂತಗಳಿಂದಲೂ ವಿಜ್ಞಾನತತ್ವಗಳ ಸಹಾಯದಿಂದಲೂ ಜನರ ಮನಸ್ಸನ್ನು ಆಕರ್ಷಿಸಿ ಅವರ ಮನವೊಲಿಸಿ ಅನೇಕ ಮೂಢನಂಬಿಕೆಗಳನ್ನು ಕಳೆಯಬಹುದಾಗಿದೆ.

ಜಗತ್ತಿನ ವಿವಿಧ ದೇಶಗಳ, ಜನಾಂಗಗಳ, ನಂಬಿಗೆಗಳನ್ನೂ, ಆಚರಣೆಗಳನ್ನೂ ಸಹಾನುಭೂತಿಯಿಂದ ವಿಚಾರಿಸಿದಲ್ಲಿ ಬಿಳಿಯನಿರಲಿ, ಹಳದಿ ಬಣ್ಣದವನಿರಲಿ, ಕಂದು ಬಣ್ಣದವನಿರಲಿ, ಯುರೋಪಿಯನ್, ಮಂಗೋಲಿಯನ್, ಹಿಂದೀಯ, ಆಫ್ರಿಕನ್, ಅಥವಾ, ತಾಮ್ರವರ್ಣದ ಇಂಡಿಯನನಿರಲಿ, ಮೇಲುನೋಟದಲ್ಲಿ ಸಣ್ಣ ಸಣ್ಣ ವ್ಯತ್ಯಾಸಗಳಿದ್ದರೂ ಮಾನವನ ಮನಸ್ಸು ಎಷ್ಟು ಹೋಲಿಕೆಯನ್ನು ಹೊಂದಿದೆಯೆಂಬುದೂ ಕೆಲವು ಜನಾಂಗಗಳವರು ಕೆಲವು ಅನುಕೂಲತೆಗಳಿಂದ ಹೆಚ್ಚು

ಸುಧಾರಿಸಿದ್ದರೂ ಮೂಲದಲ್ಲಿ, ಅವರಿಗೂ ಅನಾಗರಿಕರೆಂದು ಕರೆಯಲ್ಪಡುವ ಜನಾಂಗಗಳವರಿಗೂ ವಿಶೇಷ ಹೆಚ್ಚು ಕಡಿಮೆ ಯಿಲ್ಲವೆಂದೂ ತಿಳಿಯುವುದು. ಮೂಢನಂಬಿಕೆಗಳ ಅಧ್ಯಾಯ ದಿಂದಲೂ ಮಹಾಕವಿ ಪಂಪನ "ಮಾನವಜಾತಿ ತಾನೊಂದೆ ವಲಂ" ಎಂಬ ಮಹಾವಾಕ್ಯದ ಸತ್ಯದ ಅರಿವಾಗುತ್ತದೆ.

9) Lecturers on Ethnography, by L. K. Ananta Krishna Aiyer, Calcutta University, Calcutta.

10) Man on his Nature, by Sir Charles Sherington, Pelican Books.

11) The Devils of Loudun, by Aldous Huxley, Chatto and Windus, London.

12) Inside Africa, by John Gunther, Hamish Hamilton, London.

13) Man the Unknown, by Alexis carrel, Pelican Books.

14) Patterns of Culture, by Ruth Benedict Mentor Books.

15) Superstitious Survivals, V. Brelsford, Centaur Press, London.

16) The Life After Death C. W. Leadbeater. The Theosophical Publishing Society, 161, New Street, London.

ಕೆಲವು ಸಂದರ್ಭ ಗ್ರಂಥಗಳು

1) The Golden Bough, by Sir James Frazer Macmillan & Co., London.
2) Manners and Customs of Mankind, Vol. I. Edited by J. A. Hammerton. The Amalgamated Press, London.
3) The Science of Society Vol. IV, by Sumner and Keller and Davies, Yale University Press, New Haven.
4) Modern Man in Search of a Soul, by C. G. Jung, Routledge and Kegan Paul, London.
5) Folkways, by W. G. Sumner, Mentor Books, New York.
6) The impact of Science on Society, by Bertrand Russell, Allen & Unwin, London.
7) Religious Thought and Life in India, by Monier Williams, John Murray, London.
8) Sceptical Essays, by Bertrand Russel, Allen and Unwin, London.

೨೧. ಸಮಾಜಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ

೨೨. ಸಂಸತ್ತಿನ ಕಾರ್ಯಪದ್ಧತಿ —ಎ. ಎಂ. ರಾಜಶೇಖರಯ್ಯ

೨೩. ಕನ್ನಡ ನಾಡಿನ ಶಾಸನಗಳು —ಪಿ. ಬಿ. ದೇಸಾಯಿ

೨೪. ಕವೀಂದ್ರ ರವೀಂದ್ರರು (ದ್ವಿತೀಯ ಆವೃತ್ತಿ) —ಸ. ಸ. ಮಾಳವಾಡ

೨೫. ನಾಗಾನಂದ (,,) —ಎಚ್. ಪಿ. ಮಲ್ಲೇದೇವರು

೨೬. ಜೀವನದಲ್ಲಿ ನಗೆ (,,) —ಎಂ. ಎಸ್. ಸುಂಕಾಪುರ

೨೭. ಬಸವಣ್ಣನವರ ಯೋಜನೆಗಳು —ಬಿ. ಸಿ. ಜವಳಿ

೨೮. ಗಳಹಿರ ಕ್ರಾಂತಿ —ಸಿ. ವೀರಬಸಣ್ಣ

೨೯. ಕನ್ನಡ ಕಥಾಸೃಷ್ಟಿ —ಬಿ. ಬಿ. ಮಹೀಶವಾಡಿ

೩೦. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ —ಕೆ. ಕೃಷ್ಣಮೂರ್ತಿ

೩೧. ನೀರಾವರಿ ಬೇಸಾಯ —ಎಸ್. ಎ. ಹೊಸಮನಿ

೩೨. ಸಾರ್ವಜನಿಕ ಅಭಿಪ್ರಾಯ —ಎನ್. ರಾಜಗೋಪಾಲರಾವ್

೩೩. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ — ದೇವೇಂದ್ರಕುಮಾರ ಹಕಾರಿ

೩೪. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ

೩೫. ಫ್ಯಾಶನ್ನುಗಳು —ಕೆ. ಡಿ. ತಂಗೋಡ

೩೬. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ

೩೭. ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ --ಎಸ್. ಜಿ. ಕರಭಂಟನಾಳ

೩೮. ಕನ್ನಡ ಜೈನ ಪುರಾಣಗಳು —ಸದಾನಂದ ನಾಯಕ

೩೯. ಕನ್ನಡ ನಾಟ್ಯಸೃಷ್ಟಿ —ಎಚ್. ಜಿ. ಲೋಕೂರ

೪೦. ಹರಿಹರನು ಚಿತ್ರಿಸಿದ ಶಿವಶರಣೆಯರು —ಬಿ. ಬಿ. ಹೆಂಡಿ

೪೧. ನೀವು ಬಯಸುವ ಮಗು ಗಂಡೊ? ಹೆಣ್ಣೊ? —ಕೆ. ಆರ್. ರಾಮಸ್ವಾಮಿ

೪೨. ಅಂಡಯ್ಯ —ಬಿ. ಎಸ್. ಕುಲಕರ್ಣಿ

೪೩. ಬೆಳವಲನಾಡಿನ ಬೆಳೆಗಳು —ಎಸ್ ಎ. ಹೊಸಮನಿ

೪೪. ಜಾನಪದ ಕಥೆಗಳು —ಎಲ್. ಆರ್. ಹೆಗಡೆ

೪೫. ಸುಧಾರಿಸಿದ ಬೇಸಾಯ —ಎ. ಸಿ. ಕಲ್ಯಾಣಪ

೪೬. ಕನ್ನಡ ನಾಡಿನ ಐತಿಹಾಸಿಕ ಮಹಾಪುರುಷರು —ಬಿ.ಆರ್. ಗೋಪಾ

೪೭. ಗ್ರಂಥಾಲಯದ ಅಂತರಂಗ —ಎಸ್. ಆರ್. ಗುಂಜಾ

೪೮. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾ

೪೯. ಜಾಗತಿಕ ಸರಕಾರ —ಸಿ. ವೀರಬಸ

೫೦. ಸಮುದಾಯ ಸಂಘಟನೆ —ಎಚ್. ಎಂ. ಮರುಳಸಿದ್ಧಯ

೫೧. ಅಶೋಕನ ಧರ್ಮ ಶಾಸನಗಳು —ಎಸ್. ಎಚ್. ರಿ

೫೨. ಪ್ರಾಚೀನ ಭಾರತದ ರಾಜ್ಯ ಪದ್ಧತಿ —ಸಿ. ವ್ಹಿ ರಂಗಸ್ವಾ

೫೩. ಅಕ್ಕಮಹಾದೇವಿ ಮತ್ತು ಮೀರಾಬಾಯಿ —ಎಸ್. ಎಸ್. ಕಬ್ಬಿ

೫೪. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ —ಬಿ. ಬಿ. ಮಹಿಶವಾ

೫೫. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು —ಬಿ. ಸಿ. ಜವ

೫೬. ಭಾರತ ರಾಜ್ಯಘಟನೆ —ಎಂ. ಎಸ್. ಪಾಟೀ

೫೭. ಪಂಚಾಯತಿ ರಾಜ್ಯ —ಎಸ್. ಜಿ. ಕರಭಂಟನಾ
—ಕೆ. ಡಿ. ಬಸವ

೫೮. ವಿಷಮಜ್ವರ — ಪಿ. ಎಸ್. ಶಂಕರ

೫೯. ಪುಸ್ತಕ ಭಾಂಡಾರ ಕಾಯದೆ —ಜಿ. ಎಂ. ಪಾಟೀ

೬೦. ಸರ್ ಐಸಾಕ್ ನ್ಯೂಟನ್ —ಆರ್. ವ್ಹಿ. ಅಬ್ಬಿಗೇ

೬೧. ಗ್ರಾಮಾಭ್ಯುದಯದ ಯೋಜನಾಂಗಗಳು —ಟಿ. ಕೆ. ಮೇ